ಬೆಂಗಳೂರು ನಗರ ವಿಶ್ವವಿದ್ಯಾಲಯ
BENGALURU CITY UNIVERSITY
ಆಗು ನೀ ಅನಿಕೇತನ
BE BOUNDLESS

# ಕನ್ನಡ ಭಾಷಾ ಪಠ್ಯ

## ಬಿ.ಎ. ಎರಡನೆಯ ಸೆಮಿಸ್ಟರ್ (೨೦೨೦–೨೧)

## ಪರಿವಿಡಿ
## ಎರಡನೇ ಸೆಮಿಸ್ಟರ್ ಬಿ.ಎ. ಕನ್ನಡ ಪಠ್ಯ

| | |
|---|---|
| **I**. ದಾಂಪತ್ಯ: | |
| ೧. ಮನದನ್ನೆ | ಅಂಬಿಕಾತನಯದತ್ತ |
| ೨. ಹೆಂಡತಿಯೊಬ್ಬಳು ಮನೆಯೊಳಗಿದ್ದರೆ... | ಡಾ.ಎಚ್.ಎಸ್. ಶ್ರೀಮತಿ |
| ೩. ಮದುವೆ ಆಟ | ಡಾ.ಎಚ್.ಎಸ್. ಅನುಪಮಾ |
| ೪. ಪತಿವ್ರತಾ ನೀಲಾವತಿ ಲಾವಣಿ (ಓದು ಪಠ್ಯ) | ಜನಪದ |
| **II**. ಬೇಟೆ: | |
| ೧. ಈಶ್ವರಾರ್ಜುನ ಯುದ್ಧ | ಪಂಪ<br>ಗದ್ಯಾನುವಾದ: ಡಾ.ಎಲ್. ಬಸವರಾಜು |
| ೨. ಜಾಲಹಳ್ಳಿಯ ಕುರ್ಕ | ಮೂಲ: ಕೆನೆತ್ ಅಂಡರ್ಸನ್<br>ಭಾವಾನುವಾದ: ಕೆ.ಪಿ. ಪೂರ್ಣಚಂದ್ರ ತೇಜಸ್ವಿ |
| ೩. ಮುಖಾಮುಖಿ | ಕೆ.ವಿ. ತಿರುಮಲೇಶ್ |
| ೪. ಸಿದ್ಧನ ಬ್ಯಾಟೆ ಪುರಾಣ (ಓದು ಪಠ್ಯ) | ಕಲ್ಕುಳಿ ವಿಠಲ್ ಹೆಗ್ಗಡೆ |
| **III**. ಧರ್ಮ: | |
| ೧. ಧರ್ಮಕೊಂಡದ ಕತೆ | ಅಶ್ವತ್ಥ |
| ೨. ಬುದ್ಧಾನುಶಾಸನ | ಡಾ. ಮೂಡ್ನಾಕೂಡು ಚಿನ್ನಸ್ವಾಮಿ |
| ೩. ಸಮಗಾರ ಭೀಮವ್ವ | ಎಚ್.ಎಸ್. ಶಿವಪ್ರಕಾಶ್ |
| ೪. ಧರ್ಮ ಮತ್ತು ರಾಜಕಾರಣ (ಓದು ಪಠ್ಯ) | ರಾಮಮನೋಹರ ಲೋಹಿಯಾ<br>ಅನು: ಲಕ್ಷ್ಮೀನಾರಾಯಣ ಅರೋರಾ |
| **IV**. ಬಹಿರಂಗ | |
| ೧. ಸನ್ನತಿಯಿಂದ ಬೋಧಗಯೆಗೆ | ಡಾ. ರಹಮತ್ ತರೀಕೆರೆ |
| ೨. ಕಾಫಿ ವಿತ್ ಮಿಲ್ಕ್ ಪ್ಲೀಸ್ | ಜಿ.ಎನ್. ಮೋಹನ್ |
| ೩. ಪಂಜರದ ಪಕ್ಷಿ | ಮೂಲ: ಮಾಯಾ ಏಂಜೆಲೊ<br>ಅನು: ಎಂ.ಆರ್. ಕಮಲ |
| ೪. ನನಗೊಂದು ಕನಸಿದೆ (ಓದು ಪಠ್ಯ) | ಮಾರ್ಟಿನ್ ಲೂಥರ್ ಕಿಂಗ್ ಜೂ.<br>ಅನು: ಕೆ. ಪುಟ್ಟಸ್ವಾಮಿ |

# I. ದಾಂಪತ್ಯ

ಗಂಡು ಹೆಣ್ಣಿನ ದಾಂಪತ್ಯ ಕುರಿತು ಭಾರತೀಯ ಪುರಾಣದಲ್ಲಿ ಅರ್ಧನಾರೀಶ್ವರದ ಪರಿಕಲ್ಪನೆ ಇದೆ. ಇದು ಶಿವ ತನ್ನ ದೇಹದ ಅರ್ಧ ಭಾಗವನ್ನು ಪಾರ್ವತಿಯನ್ನು ಧರಿಸಿದ ಆದರ್ಶವನ್ನು ತೋರಿಸುತ್ತದೆ. ಆದರೆ ವಾಸ್ತವಿಕವಾಗಿ ನಮ್ಮ ಸಮಾಜದಲ್ಲಿ ಹೆಣ್ಣನ್ನು ಹೀಗೆ ಪರಿಭಾವಿಸುವ ಪುರುಷ ಮನಸ್ಥಿತಿ ಇದೆಯೇ ಎಂದು ಕೇಳಿದರೆ ನಿರಾಶೆಯೇ ಆಗುತ್ತದೆ. ಹೊರ ನೋಟಕ್ಕೆ ಸಾಮಾಜಿಕವಾಗಿ ಮಾನ್ಯತೆಯನ್ನು ಪಡೆಯುವ ಮದುವೆಗಳು ಒಳಗೊಳಗೆ ಹಿಂಸೆ ಹಾಗೂ ಕ್ರೌರ್ಯದಿಂದ ಬಳಲುತ್ತವೆ. ಹೆಣ್ಣು ಮದುವೆಯ ಮೂಲಕ ಗಂಡಿನ ಲೈಂಗಿಕ ಕಾಮನೆಗಳನ್ನು ತಣಿಸುವ ಭೋಗದ ವಸ್ತುವಾಗುತ್ತಾಳೆ ಎಂಬುದನ್ನು ಅಲ್ಲಗಳೆಯಲಾಗದು.

ಭಾರತೀಯ ಸಮಾಜದಲ್ಲಿ ಮದುವೆಗೆ ವಿಶೇಷವಾದ ಪ್ರಾಶಸ್ತ್ಯ ಇರುವುದು ನಿಜ. 'ಮದುವೆಗಳು ಸ್ವರ್ಗದಲ್ಲಿ ನಡೆಯುತ್ತವೆ' ಎಂದು ಹೇಳಿ ವಿವಾಹವನ್ನು ದೈವೀಕರಿಸಲಾಗಿದೆ. 'ಸಾವಿರ ಸುಳ್ಳು ಹೇಳಿ ಒಂದು ಮದುವೆ' ಮಾಡು ಎನ್ನುವ ಗಾದೆ ಮಾತು ಜನಜನಿತವಾಗಿದೆ. 'ಮನೆ ಕಟ್ಟಿ ನೋಡು; ಮದುವೆ ಆಗಿ ನೋಡು' ಎಂಬ ಗಾದೆಯು ಹೆದರಿಸುವಂತಿದೆ. ಬೇಂದ್ರೆಯವರ ಕವಿತೆಯ ನಾಯಕಿಯು 'ನಾನು ಬಡವಿ, ಆತ ಬಡವ। ಒಲವೇ ನಮ್ಮ ಬದುಕು।' ಎಂದು ಹೇಳುತ್ತಾಳೆ. ಒಲವು ಮಾತ್ರವೇ ಮದುವೆಯನ್ನು ನಿರ್ಧರಿಸುವ ಸಂಗತಿಯಾಗಿಲ್ಲ. ಆಯಾ ಜಾತಿ, ಮತ, ಧರ್ಮಗಳಲ್ಲಿಯೇ ಮದುವೆಗಳು ನಡೆಯುವ ಹಾಗೆ ನೋಡಿಕೊಳ್ಳಲಾಗುತ್ತದೆ. ಅಷ್ಟರ ಮಟ್ಟಿಗೆ ಮನುಷ್ಯ ಸಹಜ ಪ್ರೀತಿ, ಪ್ರೇಮ, ಮದುವೆಗಳನ್ನು ನಿರಾಕರಿಸಲಾಗುತ್ತದೆ. ಆದರೂ ನಮ್ಮ ಸಮಾಜದಲ್ಲಿ ವಿವಾಹವು ಸಾಂಸ್ಥಿಕ ರೂಪವನ್ನು ಪಡೆದುಕೊಂಡಿದೆ. ಈ ಹಿನ್ನೆಲೆಯಲ್ಲಿ ಮದುವೆ ಎಂದರೆ ಗಂಡನ ಯಜಮಾನಿಕೆ ಹಾಗೂ ಹೆಂಡತಿಯ ಅಧೀನತೆಯೇ ಆಗಿರುತ್ತದೆ.

ಮದುವೆ ಎಂಬ ಸಂಸ್ಥೆಯು ಹೆಣ್ಣಿನ ಆಯ್ಕೆ, ಸಮಾನತೆ ಹಾಗೂ ಸ್ವಾತಂತ್ರ್ಯವನ್ನು ಹರಣ ಮಾಡುತ್ತದೆ. ಹೆಂಡತಿಯನ್ನು ಗಂಡನ ಸೇವಕಿಯನ್ನಾಗಿಸುತ್ತದೆ. ಮಕ್ಕಳನ್ನು ಹೆರುವ, ಅವುಗಳ ಪಾಲನೆ ಪೋಷಣೆ ಮಾಡುವ ಹೊಣೆಯು ಕೂಡ ಅವಳ ಕೊರಳಿಗೆ ಬೀಳುತ್ತದೆ. ಮನೆಯ ಒಳಗಿನ ಎಲ್ಲ ಕೆಲಸಗಳನ್ನು ನಿರ್ವಹಿಸುವ ಹೆಣ್ಣಿಗೆ ಸ್ವತಂತ್ರ ನಿರ್ಧಾರಗಳನ್ನು ಕೈಗೊಳ್ಳುವ ಸ್ವಾತಂತ್ರ್ಯವೇ ಇರುವುದಿಲ್ಲ. ಪುರುಷ ಪ್ರಧಾನತೆಯನ್ನು ಪ್ರಶ್ನಿಸಿದರೆ ಅದನ್ನು ಹೆಣ್ಣಿನ ಒರಟುತನ ಎಂದು ತಳ್ಳಿ ಹಾಕಲಾಗುತ್ತದೆ. ಹಾಗಾಗಿ ದಾಂಪತ್ಯವೆಂದರೆ ಹೆಂಡತಿಯೇ ಎಲ್ಲ ಬಗೆಯಲ್ಲಿ ಹೊಂದಾಣಿಕೆ ಮಾಡಿಕೊಂಡು ಹೋಗುವುದು ಎಂದರ್ಥ. ಇಲ್ಲಿ ಹೊಂದಾಣಿಕೆ ಎಂದು ಪುರುಷ ಯಜಮಾಣಿಕೆಯನ್ನು ಪ್ರಶ್ನಿಸದಿರುವುದು. ಈ ನಿಟ್ಟಿನಲ್ಲಿ ಗಂಡು ಹೆಣ್ಣಿನ ವೈವಾಹಿಕ ಸಂಬಂಧದ ಮೂಲಕವೇ ಪುರುಷ ಮೌಲ್ಯಗಳನ್ನು ಗಟ್ಟಿಗೊಳಿಸಲಾಗುತ್ತದೆ. ಆದ್ದರಿಂದಲೇ ಹೆಣ್ಣನ್ನು ಬಾಲ್ಯದಿಂದಲೇ ಗಂಡಿಗೆ ಅಧೀನಳನ್ನಾಗಿಯೇ ಪಳಗಿಸಲಾಗುತ್ತದೆ. ಈ ಪಳಗಿಸುವ ಸಾಮಾಜೀಕರಣವು ಮನೆಯಿಂದಲೇ ಆರಂಭವಾಗುತ್ತದೆ.

# ೧. ಮನದನ್ನೆ

**ಅಂಬಿಕಾತನಯದತ್ತ**

ಆಡದಿರು ಮನದನ್ನೆ
ಎನಗೆ ಇದಿರಾಡದಿರು. ॥ ಪಲ್ಲವಿ ॥

೧
ವಾದಕ್ಕೆ ಬೇಸತ್ತು
ಮರ್ಮಾಘಾತಕೆ ಸತ್ತು
ಉಳಿದುಬಂದೆ;
'ಎಲ್ಲಿಹುದು ತಿಳಿವಳಿಕೆ
ಜೀವನದ ಸಲುವಳಿಕೆ'
ಎಂದು ತಳಮಳಿಸಿ ನೀರಡಿಸಿ ಬಂದೆ;
ಹೇಳುತಿರೆ 'ಹೂಂ' ಎನ್ನು
ಒರೆದು ನೋಡೀ ಹೊನ್ನು
ಹೊಳೆದ ಗೆರೆಬಣ್ಣಗಳ ತಿಳಿದು ನೋಡು
ಎದೆಯ ಆಳದ ಮಾತನಳೆದು ಆಡು;
ಹೀಗೆನಲು ಹಾಗೆಂದು
ಬೆಂದ ಹೆಣವನೆ ಕೊಂದು
ಭೂತಲೀಲೆಯಲೀಗ ತೊಡಗಬೇಡ
ಅಡಗಿ ಅಡಕದೆ ಮನವ ಮಡಗಬೇಡ.
ನಿನ್ನ ತಿಳಿವನು ಹಣಿಸು
ನಿನ್ನ ಹೊಟ್ಟೆಯನುಣಿಸು
ಇದಿರಾಡದಿರು ಗೆಳತಿ ನೀನು ಕೂಡ
ಹೃದಯವನು ರಣರಂಗ ಮಾಡಬೇಡ.

೨
ವಾದಕ್ಕೆ ಪ್ರತಿವಾದ
ಸಾಕು ವಾದವಿವಾದ
ಜೀವ ಸಂವಾದಕ್ಕೆ ಹಸಿದು ಬಂದೆ
ನೀಡು ಸಿಪ್ಪೆಯ ಸುಲಿದು ತಿಳಲನೊಂದೆ
ಜೀವ ಜೀವಾಳದಲಿ
ಹೃದಯಾಂತರಾಳದಲಿ
ಇಳಿದು ನೋಡು
ಬಗೆಯ ಬಾನ್‌ಬಯಲನ್ನು
ಅಳೆದುನೋಡು.
ಹಚ್ಚಿ ರೆಕ್ಕೆಗೆ ರೆಕ್ಕೆ ಹಾರಿ ನೋಡು.
ಈಸಾಡು ತೇಲಾಡು ಮುಂದೋಡು ಮೇಲಾಡು
ಅಣಕ ಮೂದಲಿಕೆಯಲಿ ಕಟಕಬೇಡ
ಕೆನ್ನೀರ ಕೆಸರನ್ನು ಕಲಕಬೇಡ.

೩
ಯುಗ ಯುಗದ ಕಣ್ಣೀರು
ಎದೆಯೊಳಿದೆ ಮುನ್ನೀರು
ಅದರ ತೆರೆಗಳ ತೆರೆದು ಮುಳುಗಿ ನೋಡು
ನೆಲೆಯಿರದ ನೆಲವನ್ನು ಬಗೆದು ನೋಡು.
ನಾಗಲೋಕದ ರತ್ನ–
ರಾಶಿ ತರುವ ಪ್ರಯತ್ನ

ವ್ಯರ್ಥ ಆಯಾಸದಲಿ ಮಾಡಬೇಡ
ನನ್ನದಿದು ನಿನ್ನದದು
ಎಂದು ಎರಡುನು ಬಗೆದು
ಪಾಲುಗಾರಿಕೆಗಾಗಿ ಹೆಣಗಬೇಡ
ನಿನಗೆ ನೀರಿಲ್ಲೆಂದು ಒಣಗಬೇಡ.

ನಿನ್ನ ಮೈಸಿರಿಯೇನು?
ನನ್ನ ಐಸಿರಿಯೇನು?
ಒಂದುಸಿರೆ ತಾನಾಡಿದಂತೆ ಇಹುದು
ಹೀಗಿರಲು ಬಾಳುದ್ದ ಬದುಕಬಹುದು.
ಗಾಳಿಮಾತುಗಳೆಂದು, ಉಸಿರನೆಳೆದಾಡಿದರೆ
ಪ್ರಾಣವೇ ಬರಿ ಗಾಳಿಯಾಗಲಹುದು.

೪

ಗಂಡು ದರ್ಪವ ಹರಿದು
ಬಿರುಸು ಬಿಂಕವ ತೊರೆದು
ತೋಳ ತೊಟ್ಟಿಲ ಮಗುವು ಆಗಿ ಬಂದೆ.
ಗೊಂಬೆಯಾಡಿಸಿದಂತೆ ಆಡಿಸೆಂದೆ.
ನಿನ್ನ ತಾಯ್ತನದ ಸೈರಣೆಯ ವಿತರಣೆ ಬೇಕು.
ನಿನ್ನ ತಾಳ್ಮೆಯ ಸೈಪಿನೊಂದು ಕರುಣೆಯು ಸಾಕು.
ಮಲಗಿರುವ ಹಾವನ್ನು
ಕೆಣಕಬೇಡ
ಕಚ್ಚಿ ವಿಷ ಕಾರಿದರೆ
ತಿಣಕಬೇಡ.

೫

ನಗೆಯ ನಾಗಸ್ವರವ
ಅದರದೇ ತರ ತರವ
ಹಚ್ಚಿ ನೋಡು
ನನ್ನದೆಯ ಒಲೆದಾಟ
ನನ್ನ ತಲೆದೂಗಾಟ
ಮೆಚ್ಚಿ ನೋಡು.

ಸಿಡುಕಿರಲಿ ಮಿಡುಕಿರಲಿ
ಯಾವುದೇ ಒಡಕಿರಲಿ
ಅದರ ಸಪ್ಪಳವನ್ನು ಮಾಡಬೇಡ
ಹಾಳು ರಾಗವ ಮತ್ತೆ ಹಾಡಬೇಡ.
ಅದಕಾಗಿ ಜೀವದುಸಿರೆತ್ತಬೇಡ.

೬

ಹುಟ್ಟು ಹುಸಿನಗೆಯಲ್ಲಿ
ತಿಳಿದವರ ಬಗೆಯಲ್ಲಿ
ನನ್ನ ಜೀವನಕೆ ಬೆಳಕಿತ್ತು ನೋಡು.
ಮುನಿದರೂ ಕ್ಷಮಿಸುವೆನು
ಕೂಸಿನೊಲು ರಮಿಸುವೆನು
ಅಂಗೈಯ ಹುಣ್ಣಿನಾರೈಕೆ ಕೊಡುವೆ
ಕೂಸೆಂದು ಹುಡುಗನೊಲು ಮುತ್ತನಿಡುವೆ.
ನಿನ್ನ ಕಣ್ಣೀರ್ಮುತ್ತು

ನನ್ನ ಕೊರಳಿನ ಸುತ್ತು
ಆಭರಣವೆಂದು ಮೆರೆದಾಡುತ್ತಿರುವೆ
ಸ್ವರ್ಗ ನರಕಕ್ಕೆ ಕರೆದಲ್ಲಿ ಬರುವೆ.
ಇದಿರಾಡದಿರು ಮತ್ತೆ
ಎದಿರಾಡದಿರು ಇತ್ತ
ಮಾಡದಿರು ಬಾಳನ್ನು ಬೇಳೆಯಂತೆ
ಕೂಡಿರಲಿ ಬಾಳು ಇಡಿಗಾಳಿನಂತೆ.
ನಾನೆಂದರೂ ಒಂದೆ
ನೀನೆಂದರೂ ಒಂದೆ
ಹೊಂದುಗೂಡಿಕೆ ಇರದ ಜನಕೆ ನೊಂದೆ
ನೀನು ನನ್ನವಳೆಂದು ಬಳಿಗೆ ಬಂದೆ
ಹೊಸ ಹುಟ್ಟು ಬರವದಿದೆ ಇನ್ನುಮುಂದೆ
ಆಗೋಣ ಆ ಜಗದ ತಾಯಿತಂದೆ.

**(ಆಕರ: ನಾದಲೀಲೆ, ಸಂ: ವಾಮನ ಬೇಂದ್ರೆ, ಶ್ರೀಮಾತಾ ಪ್ರಕಾಶನ, ಹುಬ್ಬಳಿ, ೨೦೦೩)**

**ಶಬ್ದಾರ್ಥ :** ಸಲುವಳಿಕೆ=ಚಲಾವಣೆ, ಯೋಗ್ಯವಾದ ನಡತೆ. ಅಡಕು=ಒಳಸೇರು. ತಿಣುಕ=ತಿಣಿಕು=ಕಷ್ಟಪಡು.

# ೨. ಹೆಂಡತಿಯೊಬ್ಬಳು ಮನೆಯೊಳಗಿದ್ದರೆ...

**– ಡಾ. ಎಚ್.ಎಸ್. ಶ್ರೀಮತಿ**

ಮನೆಗೆ ಗೃಹಿಣಿಯೇ ಶೋಭಾಯಮಾನಳು ಎಂಬ ಮಾತು ಬಹಳ ಹಳೆಯದು. ಹೆಣ್ಣನ್ನು ಕುರಿತ ಇಂತಹ ಹೊಗಳಿಕೆಯ ಹಿಂದೆ ಇರುವ ಆದೇಶ ಅಷ್ಟೇನೂ ಮುಚ್ಚುಮರೆಯದಲ್ಲ. ಇಚ್ಛೆಯನರಿವ ಸತಿ ಇರಲು ಸ್ವರ್ಗಕ್ಕೆ ಕಿಚ್ಚು ಹಚ್ಚಲೂ ಬಹುದ/ದು. ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ನನಗದು ಕೋಟಿ ರೂಪಾಯಿ ಎಂದು ಬೀಗಬಹುದು. ಇಂತಹ ಮಾತುಗಳೇ ಸಾಕು. ಗಂಡಸಿನ ಕ್ಷಣಕ್ಷಣದ ಅಗತ್ಯಗಳನ್ನು ಪೂರೈಸಲೆಂದೇ ಹೆಂಡತಿಯು ಇರಬೇಕಾಗುತ್ತದೆ ಎಂಬುದು ಇಲ್ಲಿನ ರೂಢಿ. ಕೆಲವೊಮ್ಮೆ ಗಂಡಸಿನ ಈ ಆಶಯ ಬಹಿರಂಗವಾಗಿಯೇ ಕ್ರೂರವಾಗಿದ್ದು ಹೊಡೆದು ಬಡಿದು ಹೆದರಿಸಿ ಬೆದರಿಸುವ ಪ್ರದರ್ಶನವಾಗಬಹುದು. ಉಳಿದ ಎಷ್ಟೋ ಸಲ ಬಲು ಮೆಲುಮಾತಿನ ಪ್ರೀತಿಯ ಮುಸುಕು ಹೊತ್ತ ಆದೇಶವಾಗಿರಬಹುದು. ಒಟ್ಟಾರೆಯಾಗಿ ಗಂಡನ ಅಗತ್ಯಗಳನ್ನು ಪೂರೈಸಲು ಒಬ್ಬ ಹೆಂಡತಿಯಂತೂ ಬೇಕೇಬೇಕು. ಹೆಂಡತಿಯ ಅಗತ್ಯಗಳನ್ನು ಪೂರೈಸುತ್ತಾನಲ್ಲವೇ ಎಂಬ ಪ್ರಶ್ನೆ ಎಷ್ಟೊಂದು ಹಾಸ್ಯಾಸ್ಪದವಾದುದು ಎಂಬುದನ್ನು ವಿವರಿಸುವುದು ಸುಲಭವಲ್ಲ. ಏಕೆಂದರೆ ಕಣ್ಣಿಗೆ ಕಾಣುವಂತೆ ಅವನು ಅವಳಿಗೆ ಉಡಲು ಉಣಲು ತನ್ನ ಮನೆಯಲ್ಲಿ ವಾಸಿಸಲು ಅವಕಾಶ ಕೊಡುವುದಷ್ಟೇ ಅಲ್ಲದೆ ತಾಯ್ತನವನ್ನು ದಯಪಾಲಿಸಿ ಅವಳಿಗೆ ಗೌರವದ ಸಾಮಾಜಿಕ ಸ್ಥಾನಮಾನಗಳನ್ನು ಕಲ್ಪಿಸುತ್ತಾನೆ. ಇಷ್ಟೆಲ್ಲವನ್ನೂ ಪೂರೈಸುವ ಗಂಡನನ್ನು ಹೆಂಡತಿಯು ಹೇಗೆ ತಾನೆ ಬದುಕಿಗೆ ಅಗತ್ಯವಾದವನಲ್ಲವನೆಂದು ಹೇಳಬಹುದು? ಹೌದು.

ಅವಳಿಗೆ ಗಂಡನ ಆಶ್ರಯ ಬೇಕು. ಈ ಮಾತಿನಲ್ಲೇ ಎಷ್ಟೊಂದು ಸೂಕ್ಷ್ಮವಿದೆ ಎನ್ನುವುದನ್ನು ಗಮನಿಸಿ. ಹೆಂಡತಿಗೆ ಗಂಡನು ಆಶ್ರಯವನ್ನಿತ್ತು ಆ ಮೂಲಕ ಅವಳ ಯಜಮಾನನಾಗುತ್ತಾನೆ. ಆದರೆ ಸ್ವತಃ ಅವಳು ಗಂಡನ ಅಗತ್ಯಗಳನ್ನು ಪೂರೈಸುವ ಕೆಲಸದಲ್ಲಿ ನಿಯೋಜಿತಳಾಗಿ ಅವನ ಸೇವಕಳಾಗುತ್ತಾಳೆ. ಈ ಸಂದರ್ಭವನ್ನು ಪರಸ್ಪರ ಎಂದು ಅರ್ಥೈಸಬೇಕು ಎಂಬುದು ಈ ಸಮಾಜದ ನಿಲುವು. ಆಯ್ಕೆಯೇ ಇಲ್ಲದ ಈ ಒತ್ತಡವನ್ನು ನಿಭಾಯಿಸಬೇಕಾದ ಹೆಣ್ಣಿನ ಸಂದರ್ಭವನ್ನು ನೆನಸಿಕೊಂಡರೆ ನಮ್ಮ ಕೆ.ಎಸ್.ನ. ಅವರ ಕವನದ ಸಾಲುಗಳು ನೆನಪಾಗುತ್ತವೆ. 'ಕಾರಾದರೇನು/ ಎತ್ತಿನ ಬಂಡಿಯಾದರೇನು? ಕಾರೇ ನನಗಿರಲಿ' (ಬಂಡಿ ನಿನಗಿರಲಿ) ಎಂಬ ರೀತಿಯ ಸಾಲುಗಳು. ಕವನದ ಸಾಲುಗಳು ಹೀಗೇ ಇವೆಯೆಂದಲ್ಲ. ಒಟ್ಟಿನಲ್ಲಿ ಕಷ್ಟವಾದರೇನು ಸುಖವಾದರೇನು ಎಂದು ಹೇಳುತ್ತಲೇ ಕಷ್ಟವೆಲ್ಲ ನಿನಗಿರಲಿ, ಸುಖವೆಲ್ಲ ನನಗಿರಲಿ ಎಂಬ ದಗಲಬಾಜಿ ನ್ಯಾಯವನ್ನು ಹೇಳುವ ರೀತಿಯದು ಗಂಡ ಹೆಂಡಿರ ಪರಸ್ಪರದ ತರ್ಕವೂ ಇದೇ ಬಗೆಯದು.

ಈ ನ್ಯಾಯದಲ್ಲಿ ಹೆಂಡತಿ ಎನ್ನುವವಳು ಒಂದು ಹೆಣ್ಣಾಗಿಯಷ್ಟೇ ಉಳಿದಿರುವುದಿಲ್ಲ. ಗಂಡನಿಗಾಗಿ ತನ್ನ ಶ್ರಮ, ಸಮಯ, ಬುದ್ಧಿಭಾವಗಳೆಲ್ಲವನ್ನೂ ಮೀಸಲಾಗಿರಿಸಿ ಬದುಕಬೇಕಾದ ಒಂದು ಪ್ರಾಣಿಯಾಗಿಬಿಟ್ಟಿರುತ್ತಾಳೆ. ಇದಕ್ಕೆ ಕರ್ತವ್ಯ, ಪ್ರೀತಿ ವಿಷಯ, ಪ್ರೇಮಗಳೆಂಬ ಸಿಹಿಸಿಹಿ ಲೇಪನಗಳನ್ನು ಹಚ್ಚಿಕೊಂಡು ನುಂಗುತ್ತಾಳೆ ಎಂಬುದು ಬೇರೆಯ ಹೆಂಡತಿಯಾಗಿ ಹೆಂಗಸು ನಿರ್ವಹಿಸಬೇಕಾದ ಈ ಪಾತ್ರವನ್ನು ಕುರಿತು ಬೆಳೆಸುವ ಗಂಭೀರ ಚರ್ಚೆಗಳು ತಲೆಚಿಟ್ಟು ಹಿಡಿಸಬಹುದು. ಒಂದಿಷ್ಟು ಗೇಲಿ ಎಬ್ಬಿಸಿ, ಒಂದಿಷ್ಟು ತಮಾಷೆಯ ಲೇಪ ಹಚ್ಚಿದರೆ ಇದೇ ವಿಷಯವನ್ನು ಕುರಿತು ಮುಖ ಗಂಟಿಕ್ಕದೇ ನಗುನಗುತ್ತಾ ಮಾತನಾಡಬಹುದು. ಒಳಗಿನ ಹಿಂಸೆ ತೀವ್ರವಾಗಿರುವಾಗ ನಗುಮುಖದಿಂದ ಪ್ರಸ್ತಾಪಿಸುವುದು ಹೇಗೆ ಸಾಧ್ಯವಾದೀತು ಎಂದು ನಾನು ಯೋಚಿಸಿದ್ದೇನೆ. ಆದರೆ ಇತ್ತೀಚೆಗೆ ಜೂಡಿ ಸೈಫರ್ಸ್ ಎಂಬಾಕೆಯ ಒಂದು ಲೇಖನ ಓದಿದೆ. ಲೇಖನದ ಶೀರ್ಷಿಕೆ ಓದಿದರೇನೇ ಒಂದು ಕ್ಷಣ ಗಲಿಬಿಲಿಯಾಗುತ್ತದೆ. ಮರುಕ್ಷಣಕ್ಕೆ ನಗು ಉಕ್ಕಿಬರುತ್ತದೆ. ಆಕೆಯ ಲೇಖನದ ಹೆಸರು: "ನನಗೊಬ್ಬಳು ಹೆಂಡತಿ ಬೇಕು" ಎಂದು. ಯಾವುದೋ ನಾಟಕದ ಹೆಸರು ನೆನಪಾಗುತ್ತದೆ. ಗಂಡಿಗೆ ಹೆಣ್ಣು ಹುಡುಕುವುದನ್ನು, ಹೆಣ್ಣಿಗೆ ಗಂಡು ಹುಡುಕುವುದನ್ನು ಕೇಳಿದ್ದೇವೆ. ಹೆಂಗಸೊಬ್ಬಳು ನನಗೆ ಹೆಂಡತಿ ಬೇಕಾಗಿದ್ದಾಳೆ ಎಂದು ಜಾಹಿರಾತು ಕೊಟ್ಟರೆ ನಗು ಬರಬಹುದು ಅಥವಾ ಇದೇನೋ ಅಸಹಜ ಸಂದರ್ಭ ಎಂಬ ಅನುಮಾನವೂ ಬರಬಹುದು. ಆದರೆ ಅತ್ಯಂತ ಗಂಭೀರವಾದ ಹೆಣ್ಣಿನ ಸಮಸ್ಯೆಯೊಂದನ್ನು ಹಾಸ್ಯ ಲೇಖನವಾಗಿಸಿಯೂ ಅತ್ಯಂತ ಸೂಕ್ಷ್ಮದ ಚರ್ಚೆಯನ್ನು ಬೆಳೆಸಬಹುದು ಎಂಬ ಕಲ್ಪನೆಯೇ ಚೇತೋಹಾರಿಯಾದದ್ದು. ಸೈಫರ್ಸ್‌ನ ಈ ಲೇಖನದ ಸಾರವನ್ನು ಸ್ವಲ್ಪದರಲ್ಲಿ ಹೇಳುತ್ತೇನೆ. ಗಂಡ ಹೆಂಡಿರ ಸಂಬಂಧದಲ್ಲಿ ಅಂತರ್ಗತವಾಗಿರುವ ಯಜಮಾನ ಸೇವಕಿಯ ಆಶಯವನ್ನು ಸ್ಪಷ್ಟಪಡಿಸುವುದಕ್ಕಾಗಿಯಷ್ಟೇ.

ಒಂದು ಸುಖೀ ಕುಟುಂಬದಲ್ಲಿ ನಾನೊಬ್ಬ ಗಂಡನಿಗೆ ಹೆಂಡತಿ. ಒಂದು ಮಗುವಿಗೆ ತಾಯಿಯೂ ಆಗಿದ್ದೇನೆ. ನಾನು ಉದ್ಯೋಗಸ್ಥೆಯಾಗಿದ್ದೆ. ಸದ್ಯಕ್ಕೆ ಅದನ್ನು ನಿರ್ವಹಿಸುವ ಸ್ಥಿತಿಯಲ್ಲಿ ನಾನಿಲ್ಲ. ಚಿಕ್ಕ ಮಗುವಿದೆಯಲ್ಲ. ಇದೇ ವೇಳೆಯಲ್ಲಿ ನನ್ನ ಪುರುಷ ಸಹೋದ್ಯೋಗಿಯೊಬ್ಬ ವಿವಾಹ ವಿಚ್ಛೇದನ ಪಡೆದ. ಕೆಲವೇ ದಿನಗಳಲ್ಲಿ ಹೊಸ ಹೆಂಡತಿಗಾಗಿ ಹುಡುಕಾಟ ನಡೆಸಿದ್ದೇನೆ ಎಂದ. ಮೊದಲ ಹೆಂಡತಿಯಲ್ಲಿ ಒಂದು ಮಗು ಇದ್ದದು ಹೌದಾದರೂ ಅದರ ಜವಾಬ್ದಾರಿ ಸಹಜವಾಗಿಯೇ ಆ ಹೆಂಡತಿಗೆ ಸೇರಿತ್ತು. ನನ್ನ ಉದ್ಯೋಗದ ಹಂಬಲವನ್ನು ನೆನೆಸಿಕೊಂಡೆ. ಉದ್ಯೋಗ ಮತ್ತು ಮನೆಗೆಲಸಗಳಲ್ಲಿ ಒಟ್ಟೊಟ್ಟಿಗೆ ತೊಡಗಿಕೊಳ್ಳಬೇಕಾದ ಅನಿವಾರ್ಯ ಎಲ್ಲ ಉದ್ಯೋಗಸ್ಥ ಮಹಿಳೆಯರಿಗೂ ಇದ್ದದ್ದೇ. ಇದ್ದಕ್ಕಿದ್ದಂತೆ ಈ ಎಲ್ಲದರ ಸುಸೂತ್ರ ನಿರ್ವಹಣೆಗೆ ನನಗೊಬ್ಬ ಹೆಂಡತಿ ಇದ್ದರೆ ಎಷ್ಟು ಚೆನ್ನ ಎನ್ನಿಸಿಬಿಟ್ಟಿತು. ಹೀಗೊಬ್ಬ ಹೆಂಡತಿ ಇದ್ದರೆ ನನ್ನ ಪಾಡಿಗೆ ನಾನು ಉದ್ಯೋಗಕ್ಕೆ ಹೋಗಬಹುದು. ನನಗೆ ಇದರಿಂದ ಆರ್ಥಿಕ ಸ್ವಾತಂತ್ರ್ಯ ದೊರೆಯುತ್ತದೆ ಜೊತೆಗೆ ಇದ್ದು ಬಿಡುಬೀಸಾಗಿ ಓಡಾಡುವ ಅವಕಾಶವನ್ನೂ ನನಗೆ ಒದಗಿಸಿ ಕೊಡುತ್ತದೆ.

ಕೆಲಸಕ್ಕೆ ನಾನು ಹೊರಡುವ ಮೊದಲ ಎಲ್ಲ ಸಿದ್ಧತೆಗಳನ್ನು ನನಗಾಗಿ ಹೆಂಡತಿ ಮಾಡಿಕೊಡುತ್ತಾಳೆ. ಸ್ನಾನ, ತಿಂಡಿ, ಉಡುಪು, ಮಧ್ಯಾಹ್ನಕ್ಕೆ ಊಟದ ಡಬ್ಬಿಗಳಷ್ಟೇ ಏಕೆ, ನೀಟಾಗಿ ಮಡಿಸಿದ ಕರ್ಚೀಫ್ ಕೂಡ ನನ್ನ ಕೈಗೆ ಅಂದಿಸುತ್ತಾಳೆ. ನಾನು ಮನೆಗೆ ಹಿಂದಿರುಗುವವರೆಗೂ ಉಳಿದ ಮನೆಗೆಲಸ, ಮಕ್ಕಳ ನಿಗಾ ಯಾವುದರ ಬಗ್ಗೆಯೂ ನನಗೆ ಚಿಂತೆ ಇಲ್ಲ. ಎಲ್ಲವನ್ನೂ ಸೂಸೂತ್ರವಾಗಿ ನಿಗದಿತ ವೇಳಾ ಪಟ್ಟಿಯಂತೆ ನಡೆಸಿಕೊಂಡು ಹೋಗಲು ಹೆಂಡತಿ ಇದ್ದಾಳಲ್ಲ. ಮಕ್ಕಳಿಗೆ ಆರೋಗ್ಯ ತಪ್ಪಿತೆಂದು ನನ್ನ ನೌಕರಿಯ ದಿನಚರಿಯನ್ನು ತಪ್ಪಿಸಬೇಕಾಗಿಲ್ಲ. ಒಂದುವೇಳೆ ಈ ನನ್ನ ಹೆಂಡತಿಯೂ ನೌಕರಿಯಲ್ಲಿರುವವಳಾದರೂ ರಜೆ ಹಾಕುತ್ತಾಳೆ. ನೌಕರಿಯ ಜಾಗದಲ್ಲಿ ಯಾವುದೇ ಬೈಗುಳ ಅಥವಾ ಇನ್ನಿತರ ತೊಂದರೆಗಳಿದ್ದರೆ ಮೇಲಾಧಿಕಾರಿಗಳಲ್ಲಿ ಯಾಚಿಸಿ ಒಂದಿಷ್ಟು ರಿಯಾಯಿತಿ ಗಳಿಸುವುದೇನೂ ಅಂಥಾ ಕಷ್ಟದ ಮಾತಲ್ಲ. ಒಂದುವೇಳೆ ಇದರ ಪರಿಣಾಮವಾಗಿ ಅವಳಿಗೆ ಬಡ್ತಿಗಳು ದೊರೆಯದಿದ್ದರೆ, ಸಂಪಾದನೆ ಕಡಿಮೆಯಾದರೆ ನಾನೇ ಸಹಿಸಿಕೊಂಡು ಹೋಗುತ್ತೇನೆ. ಇದ್ದಷ್ಟು ಸಂಪಾದನೆಯಲ್ಲಿ ಸಾಧ್ಯವಾದಷ್ಟು ಖರ್ಚುಗಳನ್ನು ನಿಭಾಯಿಸಿದರೆ ಸಾಕು. ಹೇಗೋ ಹೊಂದಿಕೊಳ್ಳುತ್ತೇನೆ. ನನ್ನ ಮನೆಯನ್ನು ನನ್ನ ಮಕ್ಕಳನ್ನು ಜೋಪಾನ ಮಾಡುವ ಕರ್ತವ್ಯ ಖಂಡಿತವಾಗಿಯೂ ಅವಳದೇ. ತುಂಬಾ ಪ್ರೀತಿಯಿಂದ ಮನೆಯ ಶುಭ್ರತೆ ಒಪ್ಪ ಓರಣಗಳಲ್ಲಿಯೂ, ನಮ್ಮೆಲ್ಲರ ಬಟ್ಟೆಬರೆಗಳು ಮೊದಲುಗೊಂಡು ಎಲ್ಲ ಅಗತ್ಯಗಳ ಕಡೆಯೂ ಗಮನ ಕೊಡುತ್ತಾಳೆ. ಒಂದು ಮೂಗೊರೆಸುವ ಕರ್ಚೀಫ್ ಕೂಡ ಅಗತ್ಯವೆಂದ ಕೂಡಲೇ ಕೈಗೆಟುಕುವಂತೆ ನೋಡಿಕೊಳ್ಳುವಲ್ಲಿ ಅವಳು ತುಂಬಾ ಸಮರ್ಥಳು. ಅವಳ ಕೈ ಅಡಿಗೆಯ ರುಚಿಯನ್ನು ಸರಿಗಟ್ಟುವ ಯಾವ ನಳಪಾಕವೂ ಇಲ್ಲ. ಅಕ್ಕಿಬೇಳೆ ತರಕಾರಿ ಬೇಕೆಂದು ಅವಳು ನನ್ನನ್ನು ಒಂದು ದಿನವೂ ಪೀಡಿಸಿ ಅಂಗಡಿಗೆ ಅಟ್ಟಿದ್ದೇ ಇಲ್ಲ. ಬಲೇ ಚುರುಕಿನವಳು. ಎಲ್ಲವನ್ನೂ ನಿಭಾಯಿಸುವ ಛಾತಿಯವಳು. ದಿನದಿನದ ನೌಕರಿಯ ಜಂಜಡದಿಂದ ನನಗೆ ಬೇಸರ ಬಂದರೆ ವಿಶೇಷ ಅಡಿಗೆ ತಿಂಡಿಗಳಿಂದಲೋ ಸೊಗಸಾದ ವಿಹಾರಗಳನ್ನು ಏರ್ಪಡಿಸುವುದರಿಂದಲೋ ಖುಷಿ ಪಡಿಸುತ್ತಾಳೆ.

ಇಷ್ಟೆಲ್ಲ ಮಾಡುವಾಗಲೂ ಒಮ್ಮೆಯಾದರೂ ಅಯ್ಯೋ ಹೆಂಡತಿಯಾಗಿ ನನ್ನ ಹಣೆಬರಹವೇ ಎಂದು ಕೊಂಕು ಮಾತನಾಡುವುದಿರಲಿ ಹುಬ್ಬು ಕೂಡ ಗಂಟಿಕ್ಕುವುದಿಲ್ಲ. ಅವಳ ನಗುಮುಖವೇ ನಮ್ಮ ಮನೆಯ ನಂದಾದೀಪ. ಇವಳು ತುಂಬಾ ಜಾಣೆ. ಎಷ್ಟೋ ಸಲ ನನ್ನ ಆಫೀಸಿನ ಕಾಗದ ಪತ್ರಗಳನ್ನು ಕೂಡಾ ಅವಳೇ ಟೈಪು ಮಾಡಿಕೊಡುತ್ತಾಳೆ. ಇವಳ ಅಪರೂಪದ ಗುಣಗಳನ್ನು ಎಷ್ಟು ಹೊಗಳಿದರೂ ಕಡಿಮೆಯೇ. ನನ್ನ ಬಂಧುಬಾಂಧವರೊಂದಿಗೆ ಸ್ನೇಹಿತರೊಂದಿಗೆ ಸಂಬಂಧಗಳನ್ನು ನಿರ್ವಹಿಸುವುದೆಂದರೆ ಇವಳಿಗೆ ತುಂಬಾ ಇಷ್ಟ. ಪೂಜೆ ಪುನಸ್ಕಾರ, ಹಬ್ಬ ಹರಿದಿನ, ಪಾರ್ಟಿ ಗೀರ್ಟಿಗಳಲ್ಲಿ ತುಂಬಾ ಉತ್ಸಾಹ. ನಮ್ಮ ಸಂಸ್ಕೃತಿಯನ್ನು ರಕ್ಷಿಸಿಕೊಂಡು ಹೋಗಲು ಇಂತಹ ಹೆಂಡತಿಗಲ್ಲದೆ ಇನ್ನಾರಿಗೆ ತಾನೇ ಸಾಧ್ಯವಾದೀತು. ಅವಳ ಕಡೆಯವರು ನನ್ನ ಕಡೆಯವರು ಎಂಬ ಭೇದವಿಲ್ಲದೆ ನಡೆದುಕೊಳ್ಳುವ ಅವಳ ಸ್ವಭಾವ ನನಗೆ ತುಂಬಾ ಅಚ್ಚುಮೆಚ್ಚು.

ಅವಳಿಗೆ ಪರಿಚಿತರೇ ಅಲ್ಲದ ನನ್ನ ಸಹೋದ್ಯೋಗಿಗಳೇ ದಿಢೀರೆಂದು ಮನೆಗೆ ಬಂದಾಗಲೂ ಅವಳು ತೋರುವ ಆತಿಥ್ಯದ ಪರಿಯಿಂದಾಗಿ ನನ್ನ ಆಫೀಸಿನ ವಲಯದಲ್ಲಿ ನಾನು ತುಂಬಾ ಜನಪ್ರಿಯತೆ ಗಳಿಸಿದ್ದೇನೆ. ನನ್ನ ಸಾಮಾಜಿಕ ಸಂಬಂಧಗಳು ತುಂಬಾ ಸುಂದರವಾಗಿವೆ, ಇನ್ನು ಕೊನೆಯದಾಗಿ, ನನ್ನ ಲೈಂಗಿಕ ಆಸಕ್ತಿಗಳನ್ನು ತಣಿಸುವಲ್ಲಿ ಅವಳೂ ತೋರುವ ವಿಲೀನ ಭಾವ ಶರಣಾಗತಿಗಳಂತೂ ನನ್ನ ಜೀವನದ ಸುಖದ ಕ್ಷಣಗಳು. ನನ್ನ ಆಸೆ ಭಾವನೆ ಮೂಡುಗಳಿಗೆ ತಕ್ಕುದಾದ ರೀತಿಯಲ್ಲಿ ಅಗತ್ಯವಾದ ವೇಳೆಯಲ್ಲಿ ಅವಳು ಸ್ಪಂದಿಸುವ ರೀತಿಯಿಂದಾಗಿ ನಾನು ಅವಳ ಆರಾಧನೆಯಲ್ಲಿ ಮುಳುಗಿಹೋಗುತ್ತೇನೆ. ತನಗಾಗಿ ಈ ಕ್ಷಣ ಬೇಕು ಎಂದು ಅವಳೆಂದೂ ವ್ಯಕ್ತಮಾಡಿದ್ದೇ ಇಲ್ಲ. ನಾನು ಸದ್ಯಕ್ಕೆ ನಮಗೆ

ಮಕ್ಕಳು ಸಾಕು ಎಂದುಕೊಂಡಿದ್ದೇನೆ. ಆದರೆ ಸಂತಾನ ನಿಯಂತ್ರಣದ ವಿಧಾನಗಳು ಸುಖಕ್ಕೆ ಅನಗತ್ಯ ತಡೆಗಳೆನಿಸುತ್ತವೆ. ಇವೆಲ್ಲವನ್ನೂ ಹೇಗೋ ಮಾಡಿ ಅವಳೊಬ್ಬಳೇ ನಿಭಾಯಿಸಿಬಿಡುತ್ತಾಳೆ ಎಂಬುದರಿಂದ ನನಗಂತೂ ನಿಶ್ಚಿಂತೆ. ಆಕೆ ಬಹುಶೀಲವಂತೆ, ನನ್ನನ್ನು ಹೊರತುಪಡಿಸಿ ಯಾರತ್ತಲೂ ಕಣ್ಣು ಹಾಯಿಸಿದ್ದಿಲ್ಲ. ಆದರೂ ಏಕ ಪತ್ನಿವ್ರತದಲ್ಲಿ ನನಗೇನೂ ಆಸಕ್ತಿಯಿಲ್ಲ ಎಂಬುದಕ್ಕೆ ಅವಳ ಆಕ್ಷೇಪವೇನೂ ಇಲ್ಲ. ನಾನು ಇನ್ನೊಬ್ಬಳು ಹೆಂಡತಿಯನ್ನು ತಂದರೆ ಅವಳನ್ನು ತಂಗಿಯೆಂದು ಪ್ರೀತಿಸುತ್ತಾಳೆ. ಒಂದು ವೇಳೆ ಇಂತಹ ಹೆಂಡತಿ ಕೂಡ ಏಕತಾನತೆಯಿಂದಾಗಿ ಬೋರೆನಿಸಿ ಬಿಡಬಹುದು. ಆಗ ಇವಳನ್ನು ಹೊರಗೆ ಹಾಕಬೇಕೆಂದು ನನಗೆ ಅನ್ನಿಸಿದರೆ ಹಾಗೆ ಮಾಡಿ ಹೊಸ ಹೆಂಡತಿಯನ್ನು ಹುಡುಕಿ ಹೊಸಜೀವನವನ್ನು ಆರಂಭಿಸುವ ಅವಕಾಶವನ್ನಂತೂ ನಾನು ಬಿಟ್ಟುಕೊಡಲಾರೆ. ಇವಳೋ ಪಕ್ಕಕ್ಕೆ ಸರಿದು ನನಗೆ ದಾರಿ ಮಾಡಿಕೊಡುತ್ತಾಳಷ್ಟೆ. ಜೀವನ ಎಂದರೆ ಹರಿಯುವ ನದಿ. ಈ ಚೈತನ್ಯಕ್ಕೆ ಇಂತಹವೆಲ್ಲ ತೊಡಕುಗಳೆನಿಸಬಾರದು.

ಹೀಗೆ ತನ್ನ ಕಲ್ಪನಾ ಲಹರಿಯನ್ನು ಜೂಡಿ ಸೈಫರ್ಸ್ ಹರಿಸುತ್ತಾಳೆ. ಇಂತಹ ಹೆಂಡತಿ ಯಾರಿಗೆ ತಾನೇ ಬೇಡ? ಒಬ್ಬ ಗಂಡಿನ ಬದುಕಿನಲ್ಲಿ ಇಂತಹ ಹೆಂಡತಿ ಸಹಜವಾಗಿಯೇ ದಕ್ಕುತ್ತಾಳೆ. ಹೆಂಗಸಿಗಾದರೆ ಇದು ಕೈಗೆಟುಕದ ಕಲ್ಪನಾ ಲೋಕ ಮಾತ್ರ. ಒಬ್ಬ ಗಂಡನನ್ನು ಈ ಜಾಗದಲ್ಲಿ ಕಲ್ಪಿಸುವ ಬದಲು ಒಬ್ಬ ಹೆಂಡತಿಯನ್ನೇ ಕಲ್ಪಿಸಿದ ಸೈಫರ್ಸ್ ಹಾಸ್ಯದ ನೆಪದಲ್ಲಿ ಹೆಂಡತಿಯ ಪರಿಸ್ಥಿತಿಯನ್ನು ಬಲು ಸೂಕ್ಷ್ಮವಾಗಿ ಚಿತ್ರಿಸಿದ್ದಾಳೆ. ಗೌರಿದುಃಖದ ಎಷ್ಟೋ ಸಂಚಿಕೆಗಳಲ್ಲಿ ಹೆಂಡತಿಯಾಗಿ ಪಾತ್ರ ನಿರ್ವಹಿಸುವ ಹೆಣ್ಣಿನ ಸಮಸ್ಯೆಗಳನ್ನು ಚರ್ಚಿಸಿದ್ದಿದೆ. ಆದರೆ ದುಃಖವನ್ನು ತೋಡಿಕೊಂಡ ರೀತಿಯಿಂದಾಗಿ ಹೆಂಗಸರಲ್ಲಿ ಅಸಹಾಯಕತೆಯ ಭಾವವನ್ನು, ಗಂಡಸರಲ್ಲಿ ಸಿಟ್ಟಿನ ಪ್ರತಿಕ್ರಿಯೆಯನ್ನು ಹುಟ್ಟು ಹಾಕಿರಬಹುದು. ಸೈಫರ್ಸ್‌ನಂತೆ ಮುಕ್ತವಾದ ಮನಸ್ಸಿನಿಂದ ನಗುನಗುತ್ತಾ ಇದೇ ಸಮಸ್ಯೆಯನ್ನು ಪರಿಶೀಲಿಸುವುದನ್ನು ಕಲ್ಪಿಸಿದರೆ, ಸ್ತ್ರೀಪುರುಷರು ಒಟ್ಟುಗೂಡಿಯೇ ಸಮಾಧಾನದಿಂದ ಸಂವಾದಕ್ಕೆ ತೊಡಗಬಹುದೇನೋ ಎಂದು ಆಸೆಯಾಗುತ್ತದೆ. ಇಂತಹ ಸಂವಾದಗಳು ಅರ್ಥಪೂರ್ಣ ವಿವೇಚನೆಗೆ ದಾರಿ ಮಾಡಿಕೊಡಬಹುದು. ಇಂತಹ ತಿಳುವಳಿಕೆಯಲ್ಲಿ ಮನೆಗೆ ಶೋಭೆಯನ್ನು ತರುವ ಸಂಪೂರ್ಣ ಹೊಣೆಗಾರಿಕೆಗೆ ಹೆಣ್ಣು ಮಾತ್ರವೇ ತಲೆಯೊಡ್ಡಬೇಕು ಎಂಬ ಆಗ್ರಹ ಇಲ್ಲವಾದೀತು. ಸ್ತ್ರೀಪುರುಷರಿಬ್ಬರೂ ಒಟ್ಟುಗೂಡಿಯೇ ಮನೆಯನ್ನು ಸಾಂಗವಾಗಿ ನಡೆಸಿಕೊಂಡು ಹೋಗಲು ಸಿದ್ಧರಾದಾಗ ಇಬ್ಬರೂ ಕೂಡಿಯೇ ಮನೆಗೊಂದು ಶೋಭೆಯಾದಾರು.

**(ಆಕರ: ಗೌರಿ ದುಃಖ: ಸ್ತ್ರೀವಾದಿ ಲೇಖನಗಳ ಸಂಕಲನ, ವಿಕಾಸ ಪ್ರಕಾಶನ, ಬೆಂಗಳೂರು, ೨೦೦೯, ೨೦೧೯)**

# ೩. ಮದುವೆ ಆಟ

**– ಡಾ.ಎಚ್.ಎಸ್. ಅನುಪಮಾ**

ಕಾಬಾ ಗಾಂಧಿ ಅವರ ನಾಲ್ಕನೇ ಮಗ ಮೋಹನದಾಸ. ಮೋಕ ಮೋಕ ಅಂತಿದ್ರು ಎಲ್ಲ. ಅವನಿಗೆ ಒಂದಾದಮೇಲೆ ಒಂದು, ಎರಡು ಹುಡುಗೀರನ್ನ ನೋಡಿದ್ದರಂತೆ. ಆದರೆ ಅವೆರಡೂ ನಿಶ್ಚಿತಾರ್ಥ ಆಗುವುದರೊಳಗೇ ಸತ್ತೋದವು. ಆಗೆಲ್ಲ ನಮ್ಮೂರಲ್ಲಿ ಅದು ಸಾಮಾನ್ಯ. ಕೊನೆಗೆ ಈ ಕಸ್ತೂರ್‌ನ ನೋಡಿದರು. ನೋಡದು ಅಂದ್ರೇನು, ಅವನ ಅಪ್ಪ, ನನ್ನ ಅಪ್ಪ ಮಾತಾಡಿಕೊಂಡರು. ತಿಂಗಳ ಲೆಕ್ಕ ಹಿಡಿದರೆ ನಾನೇ ಅವನಿಗಿಂತ ಆರು ತಿಂಗಳು ದೊಡ್ಡೋಳು. ಗಂಡನಿಗಿಂತ ಹೆಂಡತಿ ಸ್ವಲ್ಪ ದೊಡ್ಡವಳಾಗಿರೋದು ನಮ್ಮೂರಲ್ಲಿ ಆಗ ವಿಶೇಷ ಏನಲ್ಲ. ಆದರೂ ಗಂಡನ್ನ ನೀನೂ ತಾನು ಅನ್ನೋ ಹಾಗಿಲ್ಲ, 'ಅವರು, ಇವರು' ಅಂತನೇ ಕರೀಬೇಕು. ದಿನಾ ಬೆಳಿಗ್ಗೆ ಪಾದ ಹಣೆಗೆ ಮುಟ್ಟಿಸಿ ಏಳಬೇಕು. ಸಂಜೆ ಅವರು ಬಂದ್ಮೇಲೆ ಪಾದ ತೊಳೀಬೇಕು. ಹೆಸರು ಹಿಡಿದಂತೂ ಯಾವತ್ತೂ ಕರೆಯೋ ಹಾಗಿಲ್ಲ. ನಾನೂ ನನ್ನ ಗಂಡನ್ನ ಉಳಿದವರು ಕರೀತಾ ಇದ್ದ ಹಾಗೆಯೇ ಕರೀತಾ ಇದ್ದಿದ್ದು. ಅವರ ಹೆಸರು ಮೋಕ ಗಾಂಧಿ, ಹರಿಯ ಅಪ್ಪ, ನನ್ನ ಮಕ್ಕಳ ಅಪ್ಪ, ಮೋಕಭಾಯಿ, ಗಾಂಧಿ ಭಾಯಿ, ಬಾಪು ಅಂತ ಬದಲಾಗ್ತಾ ಹೋದಹಾಗೆ ನಾನೂ ಬದಲಾಯಿಸಿಕೊಂಡೆ.

ಮೊದಲು ನಾವು ಭೇಟಿಯಾದಾಗ ನಮ್ಮಿಬ್ಬರ ವಯಸ್ಸು ಏಳು ವರ್ಷ. ಸಣ್ಣದಾಗಿ ನಿಶ್ಚಿತಾರ್ಥ ಶಾಸ್ತ್ರ ಮಾಡಿದ್ದರು. ಅವತ್ತು ನನ್ನ ಮನೆಗೆ ನನ್ನ ಗೆಳತೀರೆಲ್ಲ ಬಂದಿದ್ರು, ನಾವು ಬೇಗಬೇಗ ಶಾಸ್ತ್ರ ಮುಗಿಸಿ ಸಮುದ್ರಕ್ಕೆ ನೀರಾಡಲಿಕ್ಕೆ ಹೋಗಬೇಕೂಂತ ಇದ್ವಿ, ಆದ್ರೆ ಕಾಲಿಗೆ ಬೀಳು, ಪಾದ ಹಿಡಿ ಅಂತ ಶಾಸ್ತ್ರ ಮುಗಿಸ್ತನೇ ಇಲ್ಲ. ಅವನು ನನ್ನಂಗೇ ಇದಾನೆ, ಸಣ್ಣೋನು, ಯಾಕೆ ಅವನ ಪಾದ ಹಿಡೀಬೇಕು ಅಂತ ಸಿಟ್ಟು ನಂಗೆ. ನಮ್ಮನೆಯೋರು ನನ್ನ ಮುಖ ನೋಡಿ ಕಣ್ಣಲ್ಲೇ ಗದರತಾ ಇದ್ದರು. ಅಷ್ಟೇ ನೆನಪು. ಆಮೇಲೆ ಸಿಹಿ ಹಂಚಿ, ಅವರೆಲ್ಲ ಹೋದಮೇಲೆ ನನ್ನನ್ನ ಹೊರಗೆ ಹೋಗಕ್ಕೆ ಬಿಟ್ಟಿದ್ದು. ಆಮೇಲೆ ಐದಾರು ವರ್ಷ ಅವನ್ಯಾರೋ, ನಾನ್ಯಾರೋ. ಅದಕ್ಕೆ ಸರಿಯಾಗಿ ಮಾವನ ಮನೆಯೋರೆಲ್ಲ ರಾಜಕೋಟೆಗೆ ಹೋಗಿಬಿಟ್ರು. ಮೋಕನೂ ಅಲ್ಲೇ ಕಲೀತಿದ್ದ. ಆದ್ರೇನು? ನನ್ನ ಗಂಡ ಆಗೋನ ಮನೆ ಮುಂದೆ ಕದ್ದುಮುಚ್ಚಿ ಓಡಾಡಬೇಕು. ಕಾಬಾ ಮಾವ ಅವರ ಮೂಲ ಮನೆ ಎದುರು ಹೋಗಬೇಡ ಅಂತಲೇ ಅಮ್ಮ ಹೇಳೋಳು. 'ಚೆಲ್ಲುಚೆಲ್ಲಾಗಿ ಆಡಬೇಡ, ಏನು ತಿಳಕಂಡಾರು ನಿನ್ನನ್ನ ತಗಂಡು ಹೋಗೋರು' ಅನ್ನೋಳು. ಎದ್ದರೆ, ಕೂತರೆ, ಅತ್ತರೆ, ಜೋರಾಗಿ ನಕ್ಕರೆ ಎಲ್ಲಕ್ಕೂ ಕಾಬಾ ಗಾಂಧಿ ಹೆಸರು ಹೇಳಿ ಹೆದರಿಸೋದು. 'ಕಾಬಾ ಬಾಬು ಅಂದ್ರೆ ಏನಂದ್ಕಂಡಿದೀ ನೀನು? ಅಲ್ಲಿ ಹೋದಮೇಲೆ ಹೀಗೆಲ್ಲ ಮಾಡಿ ನಮ್ಮ ಮರ್ಯಾದೆ ತೆಗೀಬೇಡ, ಅಂತಿದ್ರು. ಅಲೆಅಲೆ, ಇವರ್‍ಯಾರು ಇವರು, ಅಲ್ಲೆಲ್ಲೋ ಇದ್ದರೂ ನಾನು ಅವರಿಗೆ ಹೆದರ್‍ಕಂಡು ಇರಬೇಕು ಅಂತಿದ್ದಾರಲ್ಲ ಅಂತ ಕಾಬಾ ಮಾವನ ಮನೆಯೋರ ಮೇಲೆ ಸಿಟ್ಟು ಬರ್‍ತಿತ್ತು. ಹಂಗೇ ಕೇಳಿ ಬಿಡತಿದ್ದೆ. ಪುಣ್ಯಕ್ಕೆ ನಮ್ಮನೇಲಿ ಹೊಡೆತ, ಬಡಿತ ಇರಲಿಲ್ಲ. ಕೆಲವು ಮನೆಗಳಲ್ಲಿ ಬೆನ್ನು ಮುರಿಯೋ ಹಂಗೆ ಹೊಡೆಯೋರು. ಮಕ್ಕಳಿಗಷ್ಟೆ ಅಲ್ಲ, ಹೆಂಡತಿಯರಿಗೆ, ಕೆಲಸದವರಿಗೂ ಹೊಡೆದಿದ್ದು ನೋಡಿದೇನೆ. ಆದರೆ ನಮ್ಮನೇಲಿ ಮನುಷ್ಯರಿಗೆ ಯಾರೂ ಹೊಡೀತಿರಲಿಲ್ಲ. ನಮ್ಮಮ್ಮ ಕಟಕಟ ಅಂತ ಹಲ್ಲು ಕಡಿದು ಹೇಳೋಳೇ ಹೊರತು ಮೈಮುಟ್ಟ ಇರಲಿಲ್ಲ. ಅಪ್ಪ ಬಿಡಿ, ಇದ್ಯಾವ ಸುದ್ದಿಗೇ ಬರ್ತಾ ಇರಲಿಲ್ಲ. ಉಲ್ಟಾ ಮಾತಾಡ್ತಿ ಅಂತ ಯಾವಾಗಲೂ ಬೈಯೊದು ಅಮ್ಮ, ಅಕ್ಕ ಇವರೇ.

ನನ್ನ ಮಾತೆಲ್ಲ ಸಣ್ಣಲ್ಲೇ ಮುಗಿದು ಬಿಡ್ತೇನೋ ಅನ್ನುವ ಹಾಗೆ ದೊಡ್ಡವಳಾಗ್ತಾ ಆಗ್ತಾ ಮಾತು ಕಡಿಮೆಯಾಗಿ ಮೌನಿಯಾಗಿಬಿಟ್ಟೆ.

ಹದಿಮೂರು ವರ್ಷ ಆದಾಗ ಮದುವೆ ಆಯ್ತು. ಮದುವೆ ಅಂದ್ರೆ ಬಾರಿ ಕುಶಿ. ಯಾಕಂದ್ರೆ ಮನೆಗೆ ನೆಂಟರು, ಅವರ ಮಕ್ಕಳು ಬರ್ತಾರೆ, ಅವರ ಜೊತೆಗೆ ಆಡಬೋದು. ಹೊಸಹೊಸಾ ಬಟ್ಟೆ, ಒಡವೆ ಕೊಡಿಸ್ತಾರೆ. ರಾಶಿಗಟ್ಲೆ ಸಿಹಿ, ತಿಂಡಿ ಮಾಡ್ತಾರೆ. ಮದುವೆ ಆದ್ಮೇಲೂ ಇಲ್ಲೇ ಇರಬೋದು. ಎಲ್ಲ ನಮ್ಮನ್ನೇ ಮಾತಾಡಿಸ್ತಾರೆ, ಜೈಜೈ ಅಂತಾರೆ. ಅಂತೂ ಇಂತದಕ್ಕೆ ಅಂತಿಲ್ಲ, ಒಟ್ಟಾರೆ ಮದುವೆ ಅಂದ್ರೆ ಕುಶಿ. ಆಗ ನನಗಾಗಲೀ, ಮೋಕನಿಗಾಗಲೀ, ಇಷ್ಟು ಸಣ್ಣ ವಯಸ್ಸಿಗೇ ಯಾಕೆ ಮದುವೆ ಆಗ್ತಿದೀವಿ ಅನ್ನೋ ಪ್ರಶ್ನೆಯೇ ಬರಲಿಲ್ಲ. ನಮ್ಮದು ಬಾಲ್ಯವಿವಾಹ, ಅದುತಪ್ಪು ಅಂತ ಎಳ್ಳುಕಾಳಷ್ಟೂ ಗೊತ್ತಿರಲಿಲ್ಲ. ನಿಜ ಹೇಳಬೇಕು ಅಂದ್ರೆ ಮದುವೆ ಬಗ್ಗೆ ನಮಗೆ ತುಂಬ ಕುತೂಹಲ ಇತ್ತು.

ಅವರ ಮನೇಲಿ ಮೂರು ಮದುವೆ ಒಟ್ಟಿಗೇ ಮಾಡಣ ಅಂದ್ರು. ನಮ್ಮದು, ಕರ್ಷಣದಾಸ ಬಾವ, ಮತ್ತೊಬ್ಬ ನೆಂಟ ಹುಡುಗನ ಮದುವೆ ಒಟ್ಟಿಗೇ. ಹಾಗೆ ನೋಡಿದರೆ ಬಾವಂದಿರ ಹೆಸರು ಹೇಳಬಾರದು. ಹಿರೀಬಾವ, ನಡುಗಲ

ಬಾವ, ಕಿರೀ ಬಾವ, ಎತ್ತರದ ಬಾವ, ಕುಳ್ಳಬಾವ ಹಿಂಗೇ ಕರೀಬೇಕು. ಆದರೆ ನಾನು ಗಂಡನ ಹೆಸರನ್ನೇ ಹೇಳಲಿಕ್ಕೆ ಕಲಿತ ಮೇಲೆ ಬಾವಂದಿರದ್ದೇನು ಲೆಕ್ಕ? ಇರಲಿ. ಕೂಡುಕುಟುಂಬಗಳಲ್ಲಿ ಹಾಗೇ. ಖರ್ಚು ಕಡಿಮೆ ಆಗುತ್ತೆ ಅಂತ ಒಂದರ ಜೊತೆ ಮತ್ತೊಂದನ್ನ ಸೇರಿಸಿ ಮಾಡಿಬಿಡ್ತಿದ್ರು. ೧೮೮೩ನೇ ಇಸವಿ, ಮೇ ತಿಂಗಳ ಯಮಸೆಕೆಯ ದಿನಗಳು. ಪೋರಬಂದರಲ್ಲಿ ನಮ್ಮ ಮದುವೆ ಆಗಿದ್ದು. ಮದುವೆಗೆ ಅಂತ ಮೋಕನ ಶಾಲೆ, ಪರೀಕ್ಷೆ ಎಲ್ಲ ತಪ್ಪಿ ಒಂದು ವರ್ಷ ದಂಡ ಆಗುತ್ತೆ ಅಂತ ಮಾತಾಡಿಕೊಳ್ಳುತ್ತ ಇದ್ದರು. ಆದರೂ ದೊಡ್ಡವರಿಗೆ ಅನುಕೂಲ ಅಂತ ಪರೀಕ್ಷೆ ತಪ್ಪಿಸಿ ಮೂರು ಜನರ ಮದುವೆ ಒಟ್ಟಿಗೆ ಮಾಡೇ ಬಿಟ್ಟರು. ಮದುವೆ ಹಿಂದಿನ ದಿನ ಗಾಡೀಲಿ ಕಾಬಾ ಮಾವ ಪೋರಬಂದರಿಗೆ ಬಂದರು. ಬರುವಾಗ ಗಾಡಿ ಉಲ್ಟಾ ಆಗಿ ಬಿದ್ದು ಗಾಯ ಆಗಿ ಬಟ್ಟೆ ಸುತ್ಕೊಂಡು ಬಂದಿದ್ರು. ಅದು ನೆನಪಿದೆ ನನಗೆ.

ನಮ್ಮ ಕಡೆ ಉಳಿದಿದ್ದಕ್ಕೆ ಪೈಸೆಪೈಸೆ ಲೆಕ್ಕ ಇಟ್ಟು ಖರ್ಚು ಮಾಡಿದ್ರೂ ಮದುವೆಗೆ ಮಾತ್ರ ಎಷ್ಟು ಬೇಕಾದ್ರೂ ಖರ್ಚು ಮಾಡ್ತಾರೆ. ಮದುವೆ ಅಂದ್ರೆ ಸರೀ ಒಂದು ವಾರ. ಏನೇನೋ ಆಚರಣೆ ಇರುತ್ತೆ. ಗಣಪತಿ ಪೂಜೆ, ಮಂಡಪ್ ಆಚರಣೆ, ಗಂಧದ ನೀರು ಚಿಮುಕುಸ್ತ, ಹಾಡುತ್ತ ಕುಣಿಯುತ್ತ ಮೆರವಣಿಗೆಯಲ್ಲಿ ಹೋಗಿ ಕುಂಭ ತರದು, ಎರಡೂ ಮನೆಯೋರು ಪರಸ್ಪರರಿಗೆ ಕೊಡುಗೆ ಬದಲಾಯ್ಸಿಕೊಳ್ಳೋದು, ಮೆಹೆಂದಿ ಹಚ್ಚಿಕೊಳ್ಳೋದು, ಹೀಗೇ. ಅನಂತರ ಗೌರಿ ಪೂಜೆ. ಅದಾಗುವಾಗ ತವರು ಮನೆಯೋರು ತಾವು ಹಾಕಬೇಕಾದ ಬಂಗಾರನ ಹುಡುಗಿ ಮೈಮೇಲೆ ಹಾಕ್ತಾರೆ. ಆಮೇಲೆ ಹುಡುಗಿ ಅಮ್ಮ ಅಳಿಯನ ಪಾದ ತೊಳೆದು ಕರಕಂಡು ಬರತಾಳೆ. ಇಷ್ಟಾದಮೇಲೆ ಮದುವೆ ಶಾಸ್ತ್ರ. ಹಾರ, ಸಪ್ತಪದಿ, ಕನ್ಯಾದಾನ ಎಲ್ಲಾ ಮಾಮೂಲಿ.

ಮದುವೆ ದಿನ ನಾನು ಕಂಡಕೂಡಲೇ ಮೊದಲು ಅವನು ಮಾಡಿದ್ದು ಏನು ಗೊತ್ತ? ತನ್ನ ಎರಡೂ ಕೈಯನ್ನ ಅರಳಿಸಿ ತೋರಿಸಿದ್ದು! ಅವನ ಕೈಗೂ ಮೆಹೆಂದಿ ಹಚ್ಚಿದ್ದರು. ನಮ್ಮ ಕಡೆ ಹುಡುಗಂಗೂ ಮೆಹೆಂದಿ ಹಚ್ತಾರೆ. ಅವನಂತೂ ತನ್ನ ಕೈಮೇಲಿನ ಚಿತ್ರ ನೋಡಿ ಬಲು ಖುಷಿ ಆಗಿಬಿಟ್ಟಿದ್ದ. ಹಸೆಮಣೆ ಮೇಲೆ ನಾವಿಬ್ಬರೂ ಪಕ್ಕಪಕ್ಕ ಕೂತಾಗ ಕಣ್ಣಲ್ಲೇ ಸನ್ನೆ ಮಾಡಿ ನಂಗೆ ಕೈ ತೋರಿಸಕ್ಕೆ ಹೇಳಿದ. ನನ್ನ ಕೈಲಿ ಹಿಡೀಲಿಕ್ಕೆ ಏನೇನೋ ಕೊಟ್ಟಿದ್ರು. ಆದರೂ ಒಂದ್ಸಲ ಕೈ ಅರಳಿಸಿ ತೋರಿಸಿದ್ದೆ. ಕಣ್ಣರಳಿಸಿದ ಅವನ ಆ ಮುಖ ಇನ್ನೂ ನೆನಪಲ್ಲಿ ಹಾಗೇ ಇದೆ.

ಅವನಿಗೆ ದೆವ್ವ, ಹಾವು ಇಂಥದೆಲ್ಲ ಕಂಡರೆ ತುಂಬ ಹೆದರಿಕೆ. ನಂಗೆ ಅಂಥ ಹೆದರಿಕೆಗಳೆಲ್ಲ ಇರಲೇ ಇಲ್ಲ. ನಾನು ಗಟ್ಟಿ ಮನಸಿನವಳು. ನಂಗಿಷ್ಟ ಬಂದಂತೆ ನಡೀತಿದ್ದವಳು. ಅದು ಅವನಿಗೆ ಮೊಂಡುತನ, ಹಠಮಾರಿತನದ ಹಾಗೆ ಕಾಣತಿತ್ತು. ಮದುವೆ ಆಗುವಾಗ ನಾನಾದ್ರೂ ಚೂರು ಹೆಂಗ್ಸಿನ ತರ ಕಾಣ್ತಿದ್ದೆ. ಅವನಿನ್ನೂ ಓದ್ತಿದ್ದ. ಪೀಚಲು ಜೀವ. ಮೀಸೆನೂ ಮೂಡಿರಲಿಲ್ಲ. ನೋಡಕ್ಕೆ ಒಂಥರ ಮಗು ಹಾಗೆ ಅನಿಸ್ತಿದ್ದ. ಎಲ್ಲಕ್ಕೂ ಬಲು ಅವಸರ. ಕೆಸುವಿನ ದಂಟಿಗೆ ಕರು ಕಟ್ಟಿ ಹಾಕಿ ಬಂದವರ ಹಾಗೆ ಅವಸರ. ತಕಪಕ ಕುಣಿತಾ ಇರುತ್ತಿದ್ದ. ಸಮಾಧಾನ ಕಮ್ಮಿ.

ಆದ್ರೆ ನೋಡಕ್ಕೆ ಮಗುವಿನ ತರಹ ಇದ್ದನೇ ಹೊರತು ಮಗು ಅಲ್ಲ ಅಂತ ಬೇಗ ಗೊತ್ತಾಯ್ತು. ಮದ್ವೆ ಆದ್ಮೇಲೂ ನಾನು ನಮ್ಮಪ್ಪನ ಮನೇಲೇ ಒಂದಷ್ಟು ದಿನ, ದಿನ ಏನು ಒಂದಷ್ಟು ವರ್ಷ ಇದ್ದೆ. ಆಗೆಲ್ಲ ಹಾಗೇ. ಸಣ್ಣ ವಯಸ್ಸಲ್ಲಿ ಮದುವೆ ಮಾಡೋರು. ಹುಡುಗಿಗೆ ಹದಿನೇಳು, ಹದಿನೆಂಟು ಆಗೋವರೆಗೂ ತವರುಮನೇಲೆ ಇರೋಳು. ಅಲ್ಲಿದ್ದ ಹಾಗೇ ಒಂದೆರೆಡು ಬಾಣಂತನನೂ ಆಗತಿತ್ತು. ಹಾಗಾಗಿ ಪೋರಬಂದರಕ್ಕೆ ಅವನೇ ಬರ್ತಿದ್ದ. ಕೆಲವು ಸಲ ರಾತ್ರಿ ಉಳಿದೂ ಬಿಡ್ತಿದ್ದ, ಅಬಬಾ, ಅದೇನ್ ಜೋರು ಅವನದು. ನೀ ಹಿಂಗೇ ಕೂರ್ಬೇಕು, ಹಿಂಗೇ ಮಾತಾಡ್ಬೇಕು, ಹಿಂಗೇ ಸೀರೆ ತಲೆ ಮೇಲೆಳ್ದು ಮಕ ಮುಚ್ಚಬೇಕು ಅಂತೆಲ್ಲ ನಂಗೆ ಕಟ್ಟುನಿಟ್ಟು ಮಾಡೋನು. ಅದಾರಾ ಹೋಗಲಿ, ಅವನೆದುರು ಹ್ಞೂಂ ಅಂದು ಆಮೇಲೆ ನನ್ನಿಷ್ಟ ಬಂದಂಗೆ ಇರ್ತಿದ್ದೆ. ಆದರೆ ಬೇಗ ಮನೆಗೆ ಬಾ, ಬೇಗ ಮನೆಗೆ ಬಾ ಅಂತ ಅವಸರ ಮಾಡ್ತಿದ್ದ. ನಂಗೇನೂ ಅವಸರ ಇರಲಿಲ್ಲ. ಆದರೂ ಅವರ ಮನೆಗೆ ಕಳಿಸೋ ಶಾಸ್ತ್ರ ಆಯ್ತು. ಹೋಗಲೇಬೇಕಲ್ಲ, ಹೋದೆ. ಪೋರಬಂದರದಿಂದ ರಾಜಕೋಟೆಗೆ ಹೋದೆ. ಅಲ್ಲಿ ನಮ್ಮ ಮಾವ ಕಟ್ಟಿಸಿದ ಮನೆ, ತುಂಬ ಚಂದದ ಕಾಥೇವಾಡಿ ಮನೆ. ಅದರ ಹತ್ರನೇ ಒಂದು ಹೈಸ್ಕೂಲು ಇತ್ತು. ಮೋಕ ದಿನಾ ಹೋಗತಾ ಇದ್ದಿದ್ದು ಅದೇ ಸ್ಕೂಲಿಗೆ. ಆ ಸ್ಕೂಲಿಗೆ ನೀನೂ ಹೋಗೋ ಹಾಗೆ ಆಗಬೇಕು ಕಲಿ ಕಲಿ ಅಂತ ಒತ್ತಾಯ ಮಾಡತಿದ್ದ. ನಾನು ಶಾಲೆಗೇ ಹೋಗಿರಲಿಲ್ಲ. ಅಕ್ಷರನೇ ಬರ್ತಿರಲಿಲ್ಲ. ಅಂತಹ ನನಗೆ ಪಾಠ ಹೇಳೋ ಹುಚ್ಚು ಅವನಿಗೆ. ಆಗಿಂದ ಶುರುವಾಗಿದ್ದು ಕೊನೇತನಕ ನನಗೆ ಗುಜರಾತಿ ವ್ಯಾಕರಣ, ಕವಿತೆ, ಇತಿಹಾಸದ ಮಾಸ್ತರಾಗಿ ಪಾಠ ಮಾಡ್ತನೇ ಇದ್ದ.

ಅವನ ಮನೆಗೆ ಹೋದಮೇಲೆ ನನ್ನನ್ನ ಹೇಗಾದರೂ ಪೂರ್ತಿ ತನ್ನ ಅಂಕೇಲಿ ಇಟ್ಕೋಬೇಕೂಂತ ಬಾರೀ ಪ್ರಯತ್ನಪಟ್ಟ. ಹೆಚ್ಚುಕಮ್ಮಿ ಮೊದಲು ಒಂದಷ್ಟು ವರ್ಷ ನನ್ನನ್ನ ನಿಯಂತ್ರಿಸೋದೇ ಅವನ ಮುಖ್ಯ ಚಿಂತೆ ಆಗಿತ್ತು. ಭಾರತೀಯ ಗಂಡನಾಗಿ ತನ್ನ ಮೊದಲ ಕರ್ತವ್ಯ ಹೆಂಡತಿಗಾಗಿ ನಿಯಮ ಮಾಡಿ ಅದರಂತೆ ಅವಳು ನಡೀತಾಳೋ ಇಲ್ವೋ ನೋಡುವುದು ಅಂತ ಎಲ್ಲೆಲ್ಲೋ, ಪುಸ್ತಕದಲ್ಲೆಲ್ಲ ಓದಿದನಂತೆ. ತಗ, ನನ್ನನ್ನ ಪತಿವ್ರತೆ ಮಾಡಕ್ಕೆ ಏನೇನೋ ನಿಯಮ ಹಾಕಿದ. ಮೊದಲ ನಿಯಮ: 'ನನ್ನ ಕೇಳದೇ ಎಲ್ಲೂ ಹೋಗುವ ಹಾಗಿಲ್ಲ.' ಅವನನ್ನು ಕೇಳದೇ ನಾನು ಮನೆಯಿಂದ ಹೊರಗೆ ಹೋಗುವ ಹಾಗೇ ಇಲ್ಲ. ಹೋಗುವಾಗ ನಮ್ಮತ್ತೆ ಅಥವಾ ಮತ್ತ್ಯಾರಾದರೂ ಜನರ ಜೊತೆಗೇ ಹೋಗಬೇಕು. ತವರಿಗೆ ಹೋಗ್ತೀನಿ ಅನ್ನುವಂತಿಲ್ಲ. ಅಲ್ಲಿ ಎಲ್ಲ ಗಂಡಸರ ಜೊತೆ ಮಾತಾಡುವಂತಿಲ್ಲ. ಹೋಗೋ ಮುಂಚೆ ಅನುಮತಿ ಪಡೆದು ನಂತರ ಮನೆಯ ಉಳಿದ ಹಿರಿಯರನ್ನೆಲ್ಲ ಕೇಳಬೇಕು. ಹೋಗಿ ಬಂದ ಮೇಲೆ ಅಲ್ಲಿ ಅಷ್ಟು ಹೊತ್ತು, ಅಷ್ಟು ದಿನ ಯಾರ ಜೊತೆ ಏನೇನು ಮಾತಾಡಿದೆ ಅಂತೆಲ್ಲ ಹೇಳಬೇಕು. ಯಾವಾಗಲೂ 'ಹೇಳಿದಷ್ಟು ಕೇಳು', 'ಸುಮ್ನಿರು', 'ನಿಂಗ್ ಗೊತ್ತಾಗಲ್ಲ', 'ಎದುರುತ್ರ ಕೊಡ್ಬೇಡ', 'ಏನ್ ಗೊತ್ತಾಗುತ್ತೆ ನಿಂಗೆ' ಇಂಥವೇ ಮಾತು ಕಿವಿ ಮೇಲೆ ಬೀಳ್ತಿದ್ದಿದ್ದು. ಅಯ್ಯೋ, ಬಲು ಕಿರಿಕಿರಿ.

ಆದ್ರೆನಾಯೇನ್ ಕಮ್ಮಿ. ಅವನಷ್ಟೇ ದೊಡ್ಡೋಳಲ್ವೆ, ಅವನಿಗಿಂತಲೂ ದೊಡ್ಡೋಳಲ್ವೆ? ನಂಗೆ ಬೇಕಾದ ಹಾಗೇ ಇರ್ತಿದ್ದೆ. ಅನಿಸಿದ್ದನ್ನೇ ಹೇಳಿಬಿಡ್ತಿದ್ದೆ. ಒಂದೊಂದ್ಸಲ ಸರೀ ಜಗಳ ಆಗದು. ದಿನಗಟ್ಲೆ, ವಾರಗಟ್ಲೆ, ಕೆಲವೊಂದ್ಸಲ ತಿಂಗ್ಳುಗಟ್ಲೆ ಮಾತಿಲ್ಲ, ಕತೆಯಿಲ್ಲ. ಮೌನಯುದ್ಧ. ಮಾತಿಲ್ದಿದ್ರೂ ಮತ್ತೆಲ್ಲ ನಡೆಯೋದೇ ನಡೆಯೋದು. ಒಂದ್ಸಲ ಅತ್ತೆ ಜೊತೆ ದೇವಸ್ಥಾನಕ್ಕೆ ತನ್ನನ್ನು ಕೇಳದೇ ಹೋದೆ ಅಂತ ಬೈದ. 'ನೀನು ದೊಡ್ಡೋನೋ, ನಿಮ್ಮಮ್ಮ ದೊಡ್ಡೋರೋ? ಅವರ ಜೊತೆ ಹೋಗಲಿಕ್ಕೆ ಅವರ ಮಗನ ಅನುಮತಿ ತಗೋಬೇಕಾ?' ಅಂದೆ ತಣ್ಣಗೆ. ಅವತ್ತಿಂದ ಸ್ವಲ್ಪ ಮೆತ್ತಗಾದ.

ಹೀಗೆ ಎರಡು ಎಳೇ ಜೀವಗಳು ಗಂಡಹೆಂಡತಿ ಆಟ ಆಡ್ತಾ ಇದೀವೇನೋ ಅನ್ನೋ ಹಾಗೆ ನಮ್ಮ ಸಂಸಾರ ಶುರು ಆಯ್ತು.

ರಾತ್ರಿ ಆಗದನ್ನೇ ಕಾಯ್ಕೊಂಡಿರೋನು. ಅಯ್ಯಬ್ಬ, ಅದೇನ್ ಆಸೆ ಅಂದ್ರೆ.. ಹೆಂಗ್ ಹೇಳಲಿ? ಅದುವರೆಗೆ ನಾವು ಮಕ್ಕಳು ಬೇಕಾದಷ್ಟು ಆಟ ಆಡಿದ್ವಿ. ಹುಡುಗೀರೇ ಸೇರಿ ಗಂಡಹೆಂಡತಿ ಆಟನೂ ಆಡಿದ್ವಿ. ನಮ್ಮ ಗಂಡಹೆಂಡತಿ ಆಟ ಅಂದರೇನು? ಗಂಡ ಆದವರು ಬೈಯುವುದು, ಹೆಂಡತಿ ಆದವರು ಸೇವೆ ಮಾಡುವುದು. ಹುಡುಗಿಯರೇ ಗಂಡ ಆಗಿರ್ತಿದ್ವಲ, ಗಂಡ ಆದೋರು ಇಲ್ಲ ಮೀಸೆ ತಿರುವುವುದು, ಎದೆಯುಬ್ಬಿಸಿ, ಬೆನ್ನು ನೇರ ಮಾಡಿ, ಕಾಲು ಅಗಲಿಸಿ ಕೂರುವುದು, ಗಡಸಾಗಿ ಜೋರು ದನಿಯಲ್ಲಿ ಗದರುವುದು, ತಲೆ–ಕಾಲು–ಬೆನ್ನು ಒತ್ತಿಸಿಕೊಳ್ಳುವುದು, ಬೆನ್ನು ಕೆರೆಸಿಕೊಳ್ಳುವುದು ಹೀಗೇ. ಹೆಂಡತಿ ಅಂದರೆ ಅಡಿಗೆ ಮಾಡುವುದು, ಸೆರಗು ತಲೆಮೇಲೆ ಎಳಕೊಳ್ತಾ ಇರುವುದು, ಹಾಲು ಕುಡಿಸೋ ಭಂಗೀಲಿ ಕೂರುವುದು, ಮಕ್ಕಳಿಗೆ ಗದರುವುದು, ಡಬ್ಬಿಯಲ್ಲಿ ದುಡ್ಡು ಬಚ್ಚಿಟ್ಟುಕೊಳ್ಳುವುದು, ಒಡವೆ ಮಾಡಿಸಿಕೊಡಿ ಅಂತ ಪೀಡಿಸುವುದು, ಇಲ್ಲ ಅಂದರೆ ಆಚೆ ತಿರುಗಿ ಮಲಗುವುದು, ಬಸುರಿ ತರ ನಡೆದು ಉಸ್ಸಪ್ಪ ಅನ್ನುವುದು, ಜಗಳ ಮಾಡುವುದು.. ಹೀಗೇ. ಕೊನೆಗೆ ಆಟ ಆಡತಾ ಆಡತಾ ಹೆಂಡತಿ ಊಟ ಬಡಿಸಿ, ಪಾತ್ರೆಗಳ ತೆಗೆದಿಟ್ಟು ಗಂಡನ ಪಾದಕ್ಕೆ ಹಣೆ ತಗುಲಿಸಿ ಇಬ್ಬರೂ ಒಂದೇ ಹೊದಿಕೆಯೊಳಗೆ ಮಲಗಿ ಆಟ ಮುಗೀತಿತ್ತು.

ಈಗಲೂ ಅದೇ ಆಟ. ಆದರೆ ಆಗ ಚಾದರ ಹೊದ್ದಮೇಲೆ ಆಟ ಮುಗೀತಿತ್ತು. ಈಗ ಶುರುವಾಗ್ತ ಇದ್ದಿದ್ದೇ ಚಾದರ ಹೊದ್ದ ನಂತರ.

ನಾನು ಬ್ರಹ್ಮಚರ್ಯ ಸ್ವೀಕರಿಸಿದವಳು, ಈಗ ಇದನ್ನೆಲ್ಲ ನೆನಪು ಮಾಡಿಕೊಳ್ಳೋದೂ ಸರಿನೋ ಅಲ್ಲವೋ ಗೊತ್ತಿಲ್ಲ. ಆದರೆ ಇಷ್ಟು ಮಾತ್ರ ಹೇಳಬೋದು. ಮೊದಮೊದಲು ಕೊಸರಿದೆ, ಎಗರಾಡಿದೆ. ಆದರೆ ಬರಬರ್ತ ನಂಗೂ ಒಂದು ರೋಮಾಂಚನ ಆದದ್ದು ಸುಳ್ಳಲ್ಲ. ನಾನು ದೂರದೂರ ಸರಿದು ಸೆಟೆದು ನಿಲ್ಲಬೇಕು. ಅವ ಓಡೋಡುತ್ತ ಹತ್ತಿರ ಬರಬೇಕು ಅಂತಲೇ ಮನಸ್ಸಾಗ್ತಿತ್ತು. ಅವನಿದ್ದಾಗ ಕೊಸರಿಕೊಂಡು ದೂರ ಸರಿಯುವುದು ಹೇಗೆ ಅಂತ ಯೋಚಿಸುತ್ತ ಇದ್ದರೆ, ಅವ ದೂರ ಇದ್ದಾಗ ಈಗ ಬಂದಾನೋ, ಇನ್ನೊಂದು ಕ್ಷಣಕ್ಕೆ ಬಂದಾನೋ ಅಂತ ಕಾಯುತ್ತಿದ್ದೆ. ಅವಕಚ್ಚಿದ ಗುರುತುಗಳು ನನ್ನ ಬೆನ್ನು, ಕೆನ್ನೆ, ಭುಜದ ಮೇಲೆಲ್ಲ ಮೂಡುವಾಗ ಇನ್ನು ನಿನ್ನ ಹತ್ತಿರ ಬರಲ್ಲವೆಂದು ಬೈಯುತ್ತಿದ್ದೆ, ಆದರೆ ಮೈಮೇಲಿನ ಕೆಂಪು ಗುರುತು ಕಂಡು ಮನೆಯ ಹೆಣ್ಣುಮಕ್ಕಳು ಚುಡಾಯಿಸಿದರೆ ಪುಳಕಗೊಳ್ಳುತ್ತಿದ್ದೆ. ಅಂತಹ ಒಂದು ಆರುವುದರಲ್ಲಿ ಮತ್ತೊಂದು ಮೂಡುವಾಗ ಒಳಗೊಳಗೇ ಹಿಗ್ಗುತ್ತಿದ್ದೆ.

ನಮ್ಮನೆಯಲ್ಲಿ ಇದ್ದ ಹಲವಾರು ಬೆಕ್ಕುಗಳಂತೇ ನಾನೂ ಇದೇನೆ ಅನಿಸ್ತಾ ಇತ್ತು. ಮೋಳ ಅಂದರೆ ಗಂಡು ಬೆಕ್ಕುಹತ್ತಿರ ಬಂದರೆಗದರಿ ದೂರ ಅಟ್ಟುವುದು. ಕೊನೆಗೆ ಅದರ ಎದುರೇ ಹೋಗಿ ಕೂತು ಗೊರಗೊರ ಸುಖದ ಸದ್ದು ಮಾಡುವುದು. ಮುಟ್ಟಲು ಹೋದರೆ ಸಿಡಿಮಿಡಿ. ಮುಟ್ಟದೇ ಕೂತಾಗ ಮುಟ್ಟಬರುವವರದೇ ಧ್ಯಾನ.

ಭೂಮಿ ತಿರುಗುತ್ತ ಇರುವುದೇ ಇದಕ್ಕೆ ಮಗೂ.

ತಿಂಗಳಿಗೆ ಸರಿಯಾಗಿ ಮುಟ್ಟಾಗತಾ ಇದ್ದೆ. ಐದು ದಿನ ಹೊರಗೆ. ಹಾಗೆ ತಿಂಗಳಿಗೆ ಐದು ದಿನ ಆರಾಮ ಇರಲಿಕ್ಕೆ ಒಂಥರಾ ಖುಷಿ. ಆದರೆ ನನ್ನ ಗಂಡನಿಗೆ ಐದು ರಾತ್ರಿ ಅವನ ಜೊತೆ ಇರಲಿಲ್ಲವಲ್ಲ ಅಂತ ಬಲು ಬೇಸರ. ಆರನೇ ದಿನ ಹಿಂದೆಮುಂದೆ ಸುಳಿದಿದ್ದೇ ಸುಳಿದಿದ್ದು. ಒಂದುಸಲ ಏನೀರಾಗಿ ಒಳಬಂದಿದ್ದೆ, 'ಮುಟ್ಟಾದಾಗ ಹೊರಗೆ ಯಾಕೆ ಇರ್ಬೇಕು ನೀನು? ಒಳಗೇ, ನನ್ನ ಹತ್ರನೇ ಇರು' ಅಂದ. ನಿಮಗೆ ನಗು ಬರಬಹುದು, ಅವನಿಗೆ ಮುಟ್ಟು ಅಂದರೆ ಏನೂಂತನೇ ಗೊತ್ತಿರಲಿಲ್ಲ! ಕಾಬಾಗಾಂಧಿ ಮನೇಲಿ ಹೆಣ್ಣುಮಕ್ಕಳು ತುಂಬ ಕಡಿಮೆ. ಬರೀ ಗಂಡುಗಳೇ. ನಂಗೂ ಅಷ್ಟೇ ತಾನೇ? ನನ್ನ ಹೊಟ್ಟೇಲಿ ಒಂದು ಹೆಣ್ಣುಕೂನೆ ಮೂಡಲಿಲ್ಲ ಅಂತ ಎಷ್ಟುದಿನ ಕೊರಗಿತ್ತು ಗೊತ್ತ? ನಮ್ಮ ಬಾವಂದಿರಿಗೂ ಅಷ್ಟೆ, ಹೆಣ್ಣು ಕಡಿಮೆ. ಹೆಣ್ಣುಗಂಡುಗಳ ಮಧ್ಯೆ ಪರದೆನೇ ಹೆಚ್ಚು ಇದ್ದಿದ್ದರಿಂದ ಹೆಣ್ಣುಗಳಿಗೆ ಸಹಜವಾಗಿ ಏನಾಗುತ್ತೆ ಅಂತ ಹುಡುಗರಿಗೆ ಗೊತ್ತೇ ಇರಲಿಲ್ಲ. ಹೆಣ್ಣುಮಕ್ಕಳಿಗೆ ಅಯ್ಯೋ ಪಾಪ ಅಂದರೆ ಹೆಣ್ಣಿಗನೆಂಬ ಬಿರುದು ಬರುತ್ತೆ ಅನ್ನೋ ಭಯವೂ ಗಂಡಸರಿಗೆ ಇದ್ದಿರಬೋದು.

ಕೊನೆಗೆ ನನ್ನ ಗಂಡನಿಗೆ, ಮೋಕ ಬಾಬುವಿಗೆ ಹೇಳಿದೆ, ಮುಟ್ಟು ಅಂದರೆ ಹೀಗೆಹೀಗೆ ಆಗುತ್ತೆ. ನೋಡು ಇಲ್ಲಿ ನಂಗೆ ತುಂಬ ನೋವು ಬರುತ್ತೆ ಅಂತ ಅವನ ಕೈ ತಗೊಂಡು ಹೊಟ್ಟೆ ಮೇಲಿಟ್ಟು ತೋರಿಸಿದೆ. ಅವತ್ತಷ್ಟೇ ಏನೀರು ಮುಗಿಸಿ ಬಂದಿದ್ದೆ. ಪೋರಬಂದರದಲ್ಲಿದ್ದಾಗ ಹೊಟ್ಟೆನೋವಿಗೆ ಅಮ್ಮ ಉಪ್ಪು ಬಿಸಿ ಮಾಡಿ ಬಟ್ಟೇಲಿ ಸುತ್ತಿ ಶಾಖ ಕೊಡ್ತಿದ್ಲು, ಆಮೇಲೆ ತಾನು ಸ್ನಾನ ಮಾಡಿ ಶುದ್ಧ ಆಗುತ್ತಿದ್ದಳು ಅಂತ ಹೇಳತಾ ಹೇಳತಾ ಯಾಕೋ ನಂಗೆ ಅಮ್ಮ, ತವರುಮನೆ ಎಲ್ಲ ನೆನಪಾಗಿ ಅಳು ಬಂದುಬಿಡ್ತು. ಆದರೆ ಆಶ್ಚರ್ಯ ಅಂದ್ರೆ ನಾನು ಅಳೋದು ನೋಡಿ ಅವನಿಗೂ ಅಳು ಬಂದುಬಿಡ್ತು. ಆ ರಾತ್ರಿ ಇಬ್ಬರೂ ಸುಮ್ಮನೆ ದುಃಖ ಪಟ್ವಿ. ಯಾತಕ್ಕೆ? ಈ ಜಗತ್ತಿನ ಹೆಣ್ಣುಗಳೆಲ್ಲ ಹೆಣ್ಣು ಅನ್ನೋ ಕಾರಣಕ್ಕೇ ಅನುಭವಿಸುವ ಎಲ್ಲ ಕಷ್ಟಗಳಿಗೆ. 'ನೀವು ಹೆಣ್ಣುಮಕ್ಕಳು ಬಾಳಾ ದೊಡ್ಡೋರು' ಅನ್ನೋ ಮಾತು ಅವನ ಬಾಯಿಂದನೇ ಬಂತು. ತನ್ನ ತಾಯಿ, ಅಕ್ಕ, ಅಜ್ಜಿ ಯಾರಿಗೂ ಇಷ್ಟು ಕಷ್ಟ ಆಗತಿತ್ತು ಅಂತ ಗೊತ್ತೇ ಇರಲಿಲ್ಲವಲ್ಲ ಅಂತ ಪಶ್ಚಾತ್ತಾಪ ಆಯಿತಂತೆ ಅವನಿಗೆ.

ಈ ದೇಹ ಅನ್ನುವುದು, ಗಂಡು ಹೆಣ್ಣು ಅನ್ನುವುದು ಅದೆಂಥಾ ಮಾಯೆನೇ ತಾಯಿ! 'ಶಾಲೆಯಲ್ಲಿದ್ದರೂ ನಿನ್ನ ಜೊತೆ ಇದ್ದ ನೆನಪೇ ಆಗತ್ತೆ ನಂಗೆ, ಏನ್ಮಾಡಲಿ?' ಅಂತಿದ್ದ ಮೋಕ. ಅಷ್ಟು ಕಾಯಮೋಹಿಯಾಗಿದ್ದ. ಈಗ ಘಟನೆ ನಂತರ ಹೆಣ್ಣು ಕಾಯದ ಒಳಗಿನ ನೋವನ್ನೂ ಸ್ವಲ್ಪಸ್ವಲ್ಪನೇ ತಿಳಕೊಳ್ಳಲಿಕ್ಕೆ ಶುರು ಮಾಡಿದ.

ಅಷ್ಟೊತ್ತಿಗೆ ನಮ್ಮ ಮಾವನವರಿಗೆ ತುಂಬ ಅನಾರೋಗ್ಯ ಆಯ್ತು. ೧೮೮೫ ಅನಿಸುತ್ತೆ. ಅವರನ್ನು ನೋಡಿಕೊಳ್ಳುವ ಜವಾಬ್ದಾರಿ ಎಲ್ಲರಿಗೂ ಬಂತು. ಪಂಡಿತರು ಬಂದು ನೋಡಿದರು. ಹಕೀಮರು ನೋಡಿದರು. ಡಾಕ್ಟರು ಬಂದು ನೋಡಿದರು. ಇಂಗ್ಲಿಷ್ ವೈದ್ಯರು ಶಸ್ತ್ರಚಿಕಿತ್ಸೆ ಆಗಬೇಕು ಅಂದರೆ ಉಳಿದವರು ಬೇಡ ಅಂದರು. ಕೊನೆಗೆ ಇನ್ನೇನೂ ಮಾಡಲಿಕ್ಕೆ ಆಗಲ್ಲ, ಇರುವಷ್ಟು ದಿನ ಅವರ ಸೇವೆ ಮಾಡುವುದಂತ ಆಯಿತು. ಸೇವೆಯನ್ನ ಹೆಚ್ಚು ಮಾಡ್ತಾ ಇದ್ದಿದ್ದು ಮೋಕನೇ. ದೊಡ್ಡ ಬಾವಂದಿರು ಕೆಲಸ, ರಾಜಕೀಯ, ಪೋರಬಂದರು ಅಂತ ಓಡಾಡತಾ ಇರ್ತಿದ್ದರು. ಸೇವೆ ಮಾಡೋ ಕೆಲಸನ ಮೋಕ ತುಂಬ ಚೆನ್ನಾಗಿ ಮುತುವರ್ಜಿ, ನಿಷ್ಠೆಯಿಂದ ಮಾಡೋನು. ರೋಗಿಯ ಕೈಕಾಲಿನ ಚಲನೆ ಮಾತ್ರದಿಂದ ಅವರಿಗೆ ಏನಾಗತಾ ಇದೆ, ಏನು ಬೇಕು ಅಂತ ಅರ್ಥ ಮಾಡಿಕೊಂಡು ಬಿಡ್ತಿದ್ದ. ಅವರ ಪಕ್ಕನೇ ಕೂತು ಅವರಿಗೆ ಸುಖವಾಗುವ ಹಾಗೆ ಏನಾದರೂ ಮಾಡುವುದರಲ್ಲಿ ಮೋಕ ಎತ್ತಿದ ಕೈ. ಕೈಕಾಲು ಸವರುವುದು, ಕೂದಲು ನೇವರಿಸುವುದು, ಬೆನ್ನು ಹಣೆ ತಿಕ್ಕುವುದು, ಭಜನೆ ಹೇಳುವುದು, ಚೂರುಚೂರೇ ನೀರು ಕುಡಿಸುವುದು ಹೀಗೇ. ಮಾವ ರಾತ್ರಿ ಪದೇಪದೇ ಏಳೋರು. ನೀರು ಕೇಳೋರು, ಮೂತ್ರಕ್ಕೆ ಕರಕೊಂಡು ಹೋಗಬೇಕಿತ್ತು. ಸನ್ನೆ ಮಾಡಿದರೆ ಎಬ್ಬಿಸಿ ಕೂರಿಸಬೇಕಿತ್ತು. ಅವರು ದೊಡ್ಡ ಆಳು ಬೇರೆ. ನಮ್ಮತ್ತೆ ಕೈಲಿ ಆಗ್ತಿರಲಿಲ್ಲ, ಮಾಡುವ ಹಾಗೂ ಇರಲಿಲ್ಲ.

ಹಿಂಗಿರ್ತ ಒಂದು ರಾತ್ರಿ..

ಮಾವ ತುಂಬ ತ್ರಾಸೆಂದು ಒದ್ದಾಡುತ್ತಿದ್ದರು. ಅವರಿಗೆ ಗಾಳಿ ಹಾಕಿ, ಮೈಮೇಲೆ ಒರಗಿಸಿಕೊಂಡು ನೀರು ಕುಡಿಸಿ, ಹಣೆ ಬೆನ್ನು ಸವರುವಾಗ ನಿದ್ದೆ ಹತ್ತಿತ್ತು. ಆಗ ನಮ್ಮ ಲಕ್ಷ್ಮಿದಾಸ ಬಾವನೋರು ಬಂದರು. ಅವರು ಮಾವನವರ ಹತ್ತಿರ ಕೂತಾಗ ಮೋಕ ನನ್ನ ಕೋಣೆಗೆ ಬಂದ. ನಾನು ಆಗ ಚೊಚ್ಚಲ ಬಸುರಿ. ದಿನ ತುಂಬುತ್ತ ಇತ್ತು. ನಿದ್ದೆ ಮಾಡಿದ್ದೆ. ಒಳಬಂದೋನೆ ಮೋಕ ಬಾಗಿಲು ಚಿಲಕ ಹಾಕಿದ. ಐದು ನಿಮಿಷ. ಕಡಲು ಭೋರ್ಗರೆದಿತ್ತು ಅಷ್ಟೇ. ಬಾಗಿಲು ಟಕಟಕ ಸದ್ದಾಯಿತು. ಮಾವ ಉಸಿರಾಡುತ್ತಿಲ್ಲ ಅಂತ ಕರೆ ಬಂತು. ಅವರು ತೀರಿಹೋಗಿದ್ದರು. ಆಗವರಿಗೆ ೬೩ ವರ್ಷ. ಮೋಕ ಓಡಿಹೋದ. ಆದರೆ ಕೊನೆಗಳಿಗೆಯಲ್ಲಿ ಅವರೊಡನೆ ಇರಲಿಲ್ಲವೆಂಬ ಪಾಪಪ್ರಜ್ಞೆಯಲ್ಲಿ ನನ್ನ ಗಂಡ ಅದೆಷ್ಟೋ ದಿನ ನರಳಿಬಿಟ್ಟ. ಆಮೇಲೆ ಹೆರಿಗೆಯಾಗಿ ಮಗು ಸತ್ತು ಹೋದಾಗಲಂತೂ ತನ್ನ ಪಾಪದಿಂದಲೇ ಹಾಗಾದದ್ದು ಅಂತ ಭಾವಿಸಿದ.

ಮಾಯೆಯನ್ನು ಗೆಲ್ಲತೀನಿ ಅಂತ ಹೋಗಿ ಬಲು ಕಷ್ಟಪಟ್ಟ ನನ್ನ ಗಂಡ ನಿಜವಾಗಿ ಬಲು ತೀವ್ರತೆಯ ಮನುಷ್ಯ. ನಂಗೆ ಇಷ್ಟ ಆಗ್ತಿತ್ತೋ, ಇಲ್ಲವೋ, ಆದರೆ ಅವನ ರಭಸಕ್ಕೆ ತೆತ್ತುಕೊಳ್ಳುವುದಲ್ಲದೆ ಬೇರೆ ಯಾವ ಸುಖನೂ ಇದೆ ಅಂತ ಅನಿಸಿರಲಿಲ್ಲ. ಇವ ನನ್ನ ಮೇಲೆ, ನನ್ನ ದೇಹದ ಮೇಲೆ ಇಟ್ಟಿರೊ ಗಮನವನ್ನ ಶಾಲೆ ಮೇಲೆ, ಕೆಲಸದ ಮೇಲೆ ಇಟ್ಟಿದ್ದರೆ ಇನ್ನೂ ಜಾಣ ಆಗ್ತಿದ್ದ ಅನಿಸಿತ್ತು. ಹಾಗಂತ ಅವನಿಗೆ ಹೇಳಿರಲಿಲ್ಲ ಅಷ್ಟೇ.

ಅಷ್ಟೊತ್ತಿಗೆ ಅವ ನನ್ನಿಂದ ದೂರ, ವಿದೇಶಕ್ಕೆ ಹೋಗೋ ಪ್ರಸ್ತಾಪ ಬಂತು. ಬಹುಶಃ ಇದರ ಜೊತೆಗೇ ಗಂಡಹೆಂಡತಿ ಅಂತ ನಾವಿಬ್ಬರೂ ಬಲು ಸಂಭ್ರಮಪಟ್ಟ, ಒಬ್ಬರಿಗೊಬ್ಬರು ಕಾದ, ಖುಷಿಪಟ್ಟ, ಜೊತೆಯಲ್ಲಿದ್ದ ಕಾಲನೂ ಮುಗಿದು ಹೋಯ್ತು ಅನಿಸುತ್ತೆ.

**(ಆಕರ: ನಾನು... ಕಸ್ತೂರ್: ಕಸ್ತೂರಬಾ ಜೀವನ ಕಥನ, ಲಡಾಯಿ ಪ್ರಕಾಶನ, ಗದಗ, ೨೦೧೮)**

## ೪. ಪತಿವೃತಾ ನೀಲಾವತಿ ಲಾವಣಿ (ಓದು ಪಠ್ಯ)

**– ಜನಪದ**

ಮೃತ್ಯದೊಳಗ ಎಷ್ಟೋ ಮಂದಿ ಪತಿವೃತಿಯರು
ತಮ್ಮ ಪತಿ ಮಾಡಿ ಪಡದಾರ ಏಸಾ ।
ಅವರ ಪೈಕಿ ನೀಲಾವತಿ ದಿವ್ಯಚರಿತ್ರೆ ಹೇಳುವೆನು
ಸಾವಧಾನದಿಂದ ಕೇಳ್ರಿ ಸಾವಕಾಶಾ ।
ಮೇಲಗರ್ತಿ ನೀಲಾವತಿ ತೆಲಿ ಮೇಲೆ ವಾಳಿ
ಅತ್ತಿ ಹೊರಸಿದಾಳ ಹಾದರ ದೋಷಾ ।
ನೀಲಕಂಠನಿಂದ ಆದಾಳ ನಿರ್ದೋಷಾ ॥ ಪಲ್ಲವಿ ॥

ಗಂಡ–ಹೆಣತಿ ಭಾಳ ಪ್ರೀತಿ
ಉಂಡತಿಂದ ನೆಟ್ಟಗಿದ್ರ ಕಂಡಾಪಟ
ಬದುಕಿತ್ತ ಮನಿ ಒಳಗ

ಸತಿ ನೀಲಾವತಿ ತನ್ನ ಪತಿ ಪಾದ
ಪೂಜಾ ಮಾಡಿ ತೀರ್ಥಾ ತಗೋತಿಳ್ಳ
ಎರಡೂ ವ್ಯಾಳೆದಾಗ ।
ರಂಡಿ ಮುಂಡಿ ಅತಿ ಒಂದ
ತುಂಡನಂಗ ತಿರಗತಿತ್ತ ಕಂಡ ಮಂದಿ
ಕಿಲಾಪ ತಕ್ಕೊತ ಬೇಗು ಬೆಳಗ ।
ಉಂಡ್ರ ಸೇರಾಕಿಲ್ಲ ನೆರಮನೆವು ಕಮ್ಮಗ ॥
ಒಂದ ದಿವಸ ಅವರ ಮನಿಗಿ ಬಂದ
ಒಬ್ಬ ಸಾಧು ಬಾವಾ ಭಿಕ್ಷಾಂ ದೇಹಿ
ಅಂತ ನಿಂತ ಬಾಗಿಲ್ಹೊದರಗ ।

ಪುಣ್ಯವಂತಿ ನೀಲಾವತಿ ಉಣ್ಣೂದ
ಬಿಟ್ಟ ಓಡಿ ಹೋಗಿ ಅನ್ನಾ
ನೀಡಿದಾಳ ಆ ಸಾಧು ಬಾವಾಗ ।
ಕಣ್ಣ ನೂವ ಆಗಿ ಬಾವಾ ಅನ್ನೆವಿನ್ನೆ
ತಳಮಳಸ್ತಿದ್ದ ಸಣ್ಣರವದಿ
ಹಾರಿ ಬಿದ್ದಿತವನ ಕಣ್ಣಾಗ ।
ನೀಲಾವತಿ ನಾಲಿಗಿ ಹಾಕಿ ತಗದಾಳವಗ ॥

**ಚಾಲ:**

ಪಂಚಜಾಕ್ಷಿಯ ಹಣಿ ಸೊಂಕಿ
ಮಾತ್ರದಿ ಕುಂಕಮ ಮೂಡಿತ
ಬಾವಾನ ಹಣಿಗಿ ।
ಅಷ್ಟರೊಳಗ ಕೆಟ್ಟಗಣ್ಣಿಲಿ
ನೋಡುತ ನಿಷ್ಟುರತ್ತಿ ಬಂದಾಳ
ಅದ ಹೊತ್ತಿಗಿ ।
ಕಣಗೇಡಿ ಬಾವಾ ನಿನ್ನ ಹಣಿಮ್ಯಾಲ
ಕುಂಕುಮ್ಯಾಕೊ ಹಣದೇನ ಹೋಗ
ಅಂದಾಳ ಮುಂದಿನ ಓಣಿಗಿ ।

**ಏರು:**

ಭಾವಾರ್ತನಕ ಬಿದ್ದ ಇವಳು
ಬಾವಾನ ಸಂಗ ಮಾಡ್ಯಾಳಂತ
ನೀಲಾವತಿ ಮ್ಯಾಲೆ ಹೊರಶ್ಯಾಳ ಹಾದರ ದೋಷಾ ।
ನೀಲಕಂಠನೆಂದ ಆದಾಳ ನಿರ್ದೋಷಾ

॥ ೧ನೇ ಚೌಕ ॥

ಸಿಟ್ಟಿಗೆದ್ದ ತನ್ನ ಮಗ್ಗ ಹೇಳಿದಾಳ
ಬಿಟ್ಟ ಬಿಡೋ ನಿನ್ನ
ಹೆಣತಿ ಭಾಳ ಕೆಟ್ಟಾಳು ।

ಖಬರದಾರ ಅಂತ ಮದಲ ಜಬರದಸ್ತಿ
ಇಡಲಿಲ್ಲ ಖಬರಗೇಡಿ
ರಂಡಿ ನಿನ್ನ ಅಬ್ರು ಕಳದಾಳು ।
ಹೆಂಡತಿ ಒಳ್ಳೆಕ್ಕಿ ಅಂತ ಆಕಿ
ಕುಂಡಿ ಸುತ್ತ ತಿರಗತಿದ್ಯೋ
ಬಂಡ ಮಾಡಿ ಅವಳ ಇದಬಾವಾನ ಹ್ವಾದಳು ।
ಗಂಡನ ಅಂಜಕಿ ಇಲ್ದ ತೀರ ಗಂಡ ಮಿರ‍್ಯಾಳು ॥
ತಾಯಿ ಮಾತ ಕೇಳ ಮಗಾ
ಕೈಮುಗದ ಹೇಳಿಕೊಂಡ ಸಾಯುವಳ್ಳ
ಬಿಡ ಕುಂಡ್ರ ದೀರ ಮನದೊಳು ।
ರೊಕ್ಕ ಇದ್ರ ಹಿಂತಾ ಹೆಂಡ್ರ
ಲಾಖೋ ಮಂದಿ ಸಿಗತಾರ ಸೊಕ್ಕ
ಮುರಿಲಿ ಪಡಕಿ ಆಗಿ ಬಿಳಲಿವಳು ।
ಪತಿವೃತೇರಂಗ ನನ್ನ ಪಾದಾ
ತೊಳದ ಪೂಜಾ ಮಾಡಿ ಸೀತಾ
ದ್ರೌಪತಿಯರ ಡೌಲ ತೋರಸತಿದ್ದಾಳು ।
ಪತ್ತೆ ಇಲ್ಲದ ಸನಾಯಾಸಿ ಬಾವಾ ಹೆಂಗ ಕೆಟ್ಟಾಳು ॥
ಪುರುಷ ಅತ್ತಿ ಆಡಿದ ಮಾತ
ಉದರದಲಿ ಭೇದಿಸಿ ನಾರಿ
ಮೂರ್ಛಿಸಿ ಆಗಿ ಧರಣಿಗಿ ಹೊರಳಿದಳು ।
ತನ್ನ ಮೂರ್ಛವನ್ನು ತಾನೆ
ಚೆನ್ನಾಗಿ ಸವರಿಕೊಂಡು ಸಂನ್ಯಾಸಿ
ವೃತ್ತಾಂತ ಅವರಿಗೆ ಅರುಹಿದಳು ।
ಕಣ್ಣಾಗಿನ ಕಸರ ತಗದ ಅನ್ನಾ
ನೀಡಿದೇನ ಅವಗ ಅನ್ಯಾಯ
ನಂದೇನ ಹೇಳ್ರಿ ಇದರಾಗ ಹೇಳ್ರಿ ಅಂದಾಳು ।
ಮನಿಸ್ಸಿಗೆ ಇದೊಮ್ಮೆ ಕ್ಷಮಾ ತಾಳಿರಿ ಅಂದಾಳು ॥

**ಚಾಲ:**

ನೀಲಾವತಿ ಎಷ್ಟ ಹೇಳಿದ್ರ
ಸುದ್ದಾ ಕಾಲಿಲ ಒದ್ದಾಳ
ಅವರ ಅತ್ತೆಯು ।
ಉಪ ಮುಖ ಮೀರಿದ ಉಪಕಾರ
ಮಡದಿಗೆ ಅಪರಾಧ
ಹೊರಿಶ್ಯಾನ ಆಕಿ ಪತಿಯು ।
ಯೋಳ ದಿವಸ ಕೂಳ ಇಲ್ಲದ
ನೀರ ಇಲ್ಲದ ನಡಿಸ್ಯಾಳ

ಶಿವನ ಸ್ತುತಿಯು ।

**ಏರು:**

ಅಕಿ ಪತಿವೃತಾ ಲೀಲಾ
ಸೀಲ ಮಾಡಿ ತೋರಸಬೇಕಂತ
ಪರಮೇಶ್ವರಗ ಹುಟ್ಟಿತ ಅಭಿಲಾಷಾ ।
ನೀಲಕಂಠನಿಂದ ಆದಾಳ ನಿರ್ದೋಷಾ ॥ ೨ನೇ ಚೌಕ ॥

ಏಕಾಏಕಿ ಆದ ಊರಿಗಿ ಭೂಕಾಲ
ಬಂಕ ಪುರದ ನಾಲ್ಕು ಅಗಸಿ
ಕದಗೋಳ ಇಕ್ಕಿ ಆದು ಬಂದಾ ।
ಸಿಫಾಯಿ ಹಳಬರ ಭಾಳ ಉಪಾಯ
ಮಾಡಿ ನೋಡಿದಾರ ಸಪಾಯ
ಅವೇನ ಬಿಡಲಿಲ್ಲಾ ಸಂದಾ ।
ಊರ ಅರಸಗ ವರದಿ ಹೋತ
ಮೂರು ಅಪ್ಪಣಿ ಒಮಗೀಲೆ
ಕೊಟ್ಟ ಹಾರಿಹಾಕಿ ಮೇಟಿ ಕಳಾಸ ಬಿಡಸರೆಂದಾ ।
ಮೀರಿದ ಕಾಲಕ ಮೂರು ಫಡಕ ಕಡಸರೆಂದಾ ॥
ಸಿಟ್ಟಿಗೆದ್ದ ಹೋಗಿ ಎಷ್ಟೋ ಮಂದಿ
ಅಷ್ಟು ಪಡಕಾ ಕಡೀದಿದಾರ
ರೆಟ್ಟಿ ಸೋತ ಶಕ್ಕಿ ಏಳಲಿಲ್ಲಾ ವಂದಾ ।
ಕರಗಸ ಕೊಡ್ಲಿ ಬಾಚಿಗೋಳ
ಮುರಮುರದ ಪುಡಿ ಆಗಿ ಬಿದ್ದು
ಧರಣೀಪತಿ ಅರಸ ನೋಡಿ ಹುಚ್ಚು ಆದಾ ।
ಬ್ಯಾಡಗೊಲಿದ ಸಾಂಬನ ಮಹಿಮಾ
ಮೂಢ ಅರಸಗ ಏನ ಗೊತ್ತ
ಗುಟ್ಟ ಯಾರಿಗೂ ತಿಳದಿದ್ದಿಲ್ಲ ಭಕ್ತಿದಾ ।
ಲೀಲಾ ತೊರಿಸಿದಾನ ಲೀಲಾವತಿ ಕಡಸಿಂದಾ ॥
ಅರಸನ ಮಗಳು ಮದಿವಿ ಇತ್ತ
ಹರಷದಿಂದ ನಿಬ್ಬಣ ಊರ ಹೊರಗ
ಇಳಕೊಂಡಿತ್ತ ಅಗಸ್ಯಾಗ ಬಂದಾ ।
ಭೀಗರ ಬೆಟ್ಟಿ ಭೀಗರಿಗಿಲ್ಲಾ
ಅಗಸಿ ಬಾಗಿಲ ತಗದಿದ್ದಿಲ್ಲ
ಲಗ್ನಕ್ಕ ಹಕತ್ತ ಆತ ಪ್ರತಿಬಂಧಾ ॥
ಆತುರದಿಂದ ಅರಸ ಹೋಗಿ ಜ್ಯೋತಿಷ್ಯ ಹೇಳುವರನ ಕರೆದ
ಪ್ರೀತಿಯಿಂದ ಪ್ರಶ್ನ ಮಾಡಿದ ಅವರಿಗೆ ಛಂದಾ ।
ಏನ ಮಾಡಿದ್ರ ಅಗಸೀ ಬಾಗಿಲ ತಗಿತಾವಂದಾ ॥

**ಚಾಲ:**

ಸಂಭಟ್ಟರ ಅಂದಾರ ಕುಂಭಕ
ಗುರು ಬಂದಾ ರಂಭರಿಂದಲಿ
ಪಿಡಾ ಪರಿಹಾರವು ।
ಪತಿವೃತೆಯರ ಕೈಸೊಂಕಿದ
ಮಾತ್ರವೆ ಅತಿ ಬೇಗದಿಂದಾ
ತೆರೆಯುವವು ಪುರದ್ವಾರವು
ಧರಿಸುರರ ನುಡಿಕೇಳಿ ಹರುಷದಿಂದ
ಅರಸನು ಪುರದೊಳಗ

ಹೊಡಿಸಿದ ಡಂಗುರವು ।

**ಏರು:**

ಖರೆ ಪತಿವೃತೆಯರು ನಮ್ಮ
ಪುರದ್ವಾರ ತಗಿಸಿದರ ದೂರ
ಮಾಡುವೆನೆಂದಾ ಅವರ ದರೀದ್ರ ದೋಷಾ ।
ನೀಲಕಂಠನಿಂದ ಆದಾಳ ನಿರ್ದೋಷಾ ॥ ೩ನೇ ಚೌಕ ॥

ಆನಿ ವಜ್ರ ಭಂಗಾರ ಹೇರಿಸಿ
ಓಣಿಓಣಿ ತಿರಗಿಸಿ ಮಾನಕೊಡ
ಕೊಡತೀನಂದ ಅಗಸಿ ತೆಗೆಸಿದವರಿಗಿ ।
ಊರ ಒಳಗ ಹೆಂಗಸರಿದ್ದ ದ್ವಾರಗಳ
ತೆಗಿಲಿಲ್ಲ ಯಾರೂ ಒಬ್ಬರೂ
ಸುಳಿವಲ್ಲರ ಅಗಸೀ ಕಡಿಗಿ ।
ಕಂಡ ರಾಜಾ ಮಂತ್ರಿ ತಮ್ಮ ಹೆಂಡರಿಗಿ
ಹೇಳಿದಾರ ಬಂಡಿ ವಜ್ರ
ಭಂಗಾರ ಕೊಡತೇವ ನಿಮ್ಮ ಪಾಲಿಗಿ ।
ನಾಲ್ಕು ಅಗಸಿ ತೆಗಿ ಬರ್‍ರೆಂದ್ರ ನಾಳಿಗಿ
ಆರಾಣೇರ ಅಂತಾರ ನಮ್ಮ
ಶ್ಯಾಣೆತನಕ್ಕ ಬೆಂಕಿ ಹಚ್ಚಲಿ
ಜಾಣೆಯರನ್ನು ಯಾಕ ಹಾಕತೀರ ಬೈಲಿಗಿ ।
ಮರಾ ಏರಿದವರ ಕಾಲ ಊರುರ
ಒಮ್ಮೆ ಧರಣಿಗಿ ನಾರೆರನ್ನ
ಯಾಕ ಹಚ್ಚತೇರಿ ವರಿಗಿ ।
ಕಣ್ಣು ಮುಚ್ಚಣಿಕಿ ಆಡೂವಾಗ
ಮಣ್ಣಿಗಿ ಮಣ್ಣ ಕಲಿಸೀದೆವು
ಸಣ್ಣ ಹುಡುಗೋರದಿತ್ತೊ ನಮಗ ಸಲಿಗಿ ।

ಆಡಿದೇವ ಅಂದ್ರ ಗಂಡಾಹೆಣತಿ ಆಗಿ ॥
ಎಷ್ಟೋ ಮಂದಿ ಹೆಂಗಸರೆಲ್ಲಾ
ಖೊಟ್ಟಿ ಹೇಳಿ ಉಳಕೊಂಡಾರ
ಹೊಟ್ಟಿ ಕಡಿತಾವಂತ ಹಾಕ್ಯಾರ ಹಾಸಿಗಿ ।
ಶೆಟ್ಟಿ ಸಾವಕಾರ ಹೆಂಡ್ರ ತಮ್ಮ
ಗುಟ್ಟ ತಿಳಿಗೊಡಲಿಲ್ಲ ಮುಟ್ಟಾಗಿ
ಕುಂತೇವ ಅಂದ್ರ ಮೂಲಿಗಿ ।
ಆಗುಲ್ಲಾ ಗಂಟೇರ ಅಂದ್ರ ನಮಗ
ಗುಳ್ಳಿಬ್ಯಾನಿ ಬಂದಿದ್ದು ಆಗ
ಎಲ್ಲೆಲ್ಲಿ ವೈದ್ಯರ ಬಂದ ಕೈ ಹಚ್ಚಿದಾರ ನಮ್ಮ ಮೈಗಿ ।
ಪತಿವೃತಾ ನಮ್ಮ ಹಾಳಾಗಿ ॥

**ಚಾಲ:**

ಅರಸೇರ ಆಡಿದಂಥಾ ಬಿರುಸು
ಭಾಷಣ ಕೇಳಿ ದೊರೆಮಂತ್ರಿ
ಗಳಿಗಾತ ಉಪರತಿಯು ।
ವನಜಾಕ್ಷಿ ನೀಲಾವತಿ ಕನಸಿನಲ್ಲಿ
ಪರಮೇಶ್ವರ ಬಂದ
ಘನ ಯುಕ್ತಿ ತಿಳಿಸ್ಯಾನ ಪಶುಪತಿಯು ।

ನಾಳಿಗಿ ಹೋಗಿ ನಾಳಿಗಿ
ನಾಲ್ಕೂ ಅಗಸೀ ತಗಸಿ ಬಾರವ್ವ ।

**ಏರು:**

ಜಗದೊಳಗ ಅನಿಸಿತು ಪತಿವ್ರತೆಯು ।
ಇಷ್ಟ ಕೇಳಿ ಚಟ್ಟನೆದ್ದ
ನೋಡಿದಾಳ ಮಟಾಮಯ ಆಗಿದ್ದ ಸರ್ವೇಶಾ ।
ನೀಲಕಂಠನಿಂದ ಆದಾಳ ನಿರ್ದೋಷಾ ॥ ೪ನೇ ಚೌಕ ॥

ಸುರ್ಯೋದಯಕ್ಕ ಸ್ನಾನಾ ಮಾಡಿ
ಗುರು ಕೊಟ್ಟ ವಿಭೂತಿ ಧರಿಸಿ
ಪರಿಶುದ್ಧಾದ ಪಂಚಾಕ್ಷರಿ ಜಪಿಸಿದಳು ।
ನಿತ್ಯದಂತೆ ಹೋಗಿ ತನ್ನ
ಪತಿಪಾದ ಪೂಜಾ ಮಾಡಿ
ಭಕ್ತಿಯಿಂದ ನಮಸ್ಕಾರ ಮಾಡಿದಳು ।
ಆ ಪ್ರಾಣೇಶನ ಪಾದ ತೀರ್ಥ
ಚಾಣಿಗಿಯೊಳಗ ತುಂಬಿಕೊಂಡ
ಓಣಿ ಹಿಡದ ನೀಲಾವತಿ ಹೊರಟಾಳು ।
ಗೌರಿಪೂಜೆಗೆ ಹೋದಂಗಾತು ಬಾನನ ಮಗಳು ॥

ಊರ ಜನರು ಹೋಗಿ ಆಕಿನ
ಅದರ ಬಿಟ್ಟ ನೋಡಾಕತ್ರ
ಹರದೇರ ನಿಂತಿದ್ರ ಎಡಬಲದೊಳು ।
ಸೊಗಸಿನಿಂದ ಹೋಗಿ ನಾಲ್ಕೂ
ಅಗಸಿ ಬಾಗಿಲ ಪೂಜಾ ಮಾಡಿ
ಭಕ್ತಿಯಿಂದ ಪತಿತೀರ್ಥ ಸಿಡಿಸಿದಳು ।
ಷಡಕ್ಷರಿ ನುಡಿದಾಕ್ಷಣಕ್ಕ
ಖಢಢಢಾ ತಗದಾವು ಪುರದ್ವಾರಗಳು ।
ತಡಾ ಇಲ್ದ ವೃತ್ತಾಂತ ಹೋತ ರಾಜನ ಸಭೆಯೊಳು ॥
ಪ್ರೀತಿಯಿಂದ ಅರಸಕೀಗಿ ಹತ್ತೂರ
ಭಕ್ಷೀಸ ಕೊಟ್ಟ ಮುತ್ತಿನ
ಉಡಕ್ಕಿ ಹಾಕಿಸಿದ ಉಡಿಯೊಳು ।
ಆನಿ ವಜ್ಜೆ ಭಂಗಾರ ಹೇರಿಸಿ
ಮಾವಪಾನ ಕಲುಹೀದಾನ
ಹೀನ ಅತ್ತಿ ನೋಡಿ ಹಿಗ್ಯಾಳ ತನ್ನ ಮನದೊಳು ।
ಗಂಡನ ಸಂಶೆ ತೊಳದ ಹೋತ
ಮಂಡಲದೊಳಗ ಕೀರ್ತಿ ಉಳಿತ
ಹೆಂಡತಿ ಇದ್ರ ಇರಬೇಕೆಂದ ಇಂಥವಳು ।
ಪತಿವೃತಾ ಕುಲ ಉದ್ದರಿಶಾಳು ॥

**ಚಾಲ:**

ನೀಲಾವತಿ ಪದ ಕೇಳಿದವರಿಗಿ
ಭಾಳ ಪುಣ್ಯೇವು ಭಾಳ ಪುಣ್ಯೇವು
ಶಿವ ಕೊಡುವನು ಆಶ್ರಯವು ।
ಸತಿಯರು ಅಕಿಯಂತೆ ಪತಿ
ಸೇವಾ ಮಾಡಿದರ ಅತೀಭಾಗ್ಯ-
ದಿಂದ ಪುಣ್ಯ ದೊರೆಯವವು ।

ಧರೆಯೊಳು ಪುರದ ಗೋಕಾವಿ
ಶಾಹೀರಗಳು ಸರ್ವ–
ಪಂಡಿತರಿಗೆ ಅತಿ ಪರಿಚಯವು ।

**ಏರು:**

ಸಾತು ಕ್ಯಾಮಣ್ಣಂತಾರ ಹಿಂತಾ
ಪತಿವೃತಾ ಸತಿ ಇದ್ರ ಅತಿ
ಭಾಗ್ಯದಿಂದ ದೊರೆಯುವದು ಮುಕ್ತಿ ದೋಷಾ ।
ನೀಲಕಂಠನಿಂದ ಆಗಿದಾಳ ನಿರ್ದೋಷಾ ॥ ೫ನೇ ಚೌಕ ॥

**(ಆಕರ: ಸಾತು ಕ್ಯಾಮಣ್ಣನ ಲಾವಣಿಗಳು: ಸಂ. ಡಾ. ನಿಂಗಣ್ಣ ಸಣ್ಣಕ್ಕಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪)**

# II. ಬೇಟೆ

ಮನುಷ್ಯನ ಆದಿಮ ಪ್ರವೃತ್ತಿಗಳಲ್ಲಿ ಪ್ರಾಣಿ ಪಕ್ಷಿಗಳ ಬೇಟೆಯು ಒಂದಾಗಿದೆ. ಆದಿ ಮಾನವನ ಚರಿತ್ರೆಯನ್ನು ಗಮನಿಸಿದರೆ ಆತ ಮೊದ ಮೊದಲು ಆಹಾರ ಸಂಗ್ರಾಹಕನಾಗಿದ್ದ. ತನ್ನ ಸುತ್ತಮುತ್ತಲೂ ವಾಸಿಸುತ್ತಿದ್ದ ಪ್ರಾಣಿ ಪಕ್ಷಿಗಳನ್ನು ಬೇಟೆಯಾಡುವುದರ ಮೂಲಕ ತನಗೆ ಅಗತ್ಯವಾಗಿರುವ ಆಹಾರವನ್ನು ಪಡೆದುಕೊಳ್ಳುತ್ತಿದ್ದ. ಕ್ರಮೇಣ ಆತ ಪ್ರಾಣಿಗಳನ್ನು ಪಳಗಿಸುವುದನ್ನು ಕಲಿತುಕೊಂಡು ಅವುಗಳನ್ನು ಸಾಕಲು ತೊಡಗಿದ. ಮನುಷ್ಯನಿಗೆ ಬೇಟೆ ಆಡುವುದು ಒಂದು ಮನರಂಜನೆಯ ಕ್ರಿಯೆ ಕೂಡ ಹೌದು.

ಮನುಷ್ಯನನ್ನು ಹೊರತುಪಡಿಸಿದರೆ ಬೇಟೆ ಎನ್ನುವುದು ಪ್ರಾಣಿ ಪಕ್ಷಿಗಳ ಜಗತ್ತಿನಲ್ಲಿ ಬದುಕಿಗಾಗಿ ನಡೆಯುವ ಸಂಘರ್ಷವೇ ಆಗಿರುತ್ತದೆ. ಎಷ್ಟೊಂದು ಕ್ರಿಮಿ, ಕೀಟಗಳು ಪರಾವಲಂಬಿಯಾಗಿ ಜೀವಿಸುತ್ತವೆ. ತಾವು ಜೀವಿಸುವುದಕ್ಕಾಗಿ ಬೇರೆ ಜೀವಿಗಳನ್ನು ಬಲಿ ಪಡೆಯುತ್ತವೆ. ಶಕ್ತಿಶಾಲಿ ಪ್ರಾಣಿಗಳು ದುರ್ಬಲ ಜೀವಿಗಳನ್ನು ಬೇಟೆಯಾಡುತ್ತವೆ. ಈ ಹಿನ್ನೆಲೆಯಲ್ಲಿ ತಮ್ಮ ಪರಿಸರಕ್ಕೆ ಹೊಂದಿಕೊಳ್ಳುವ ಜೀವಿಗಳು ಬದುಕಿ ಉಳಿಯುತ್ತವೆ. ಜೀವ ವಿಜ್ಞಾನಿ ಡಾರ್ವಿನ್ ಪ್ರಕಾರ ಶಕ್ತಿಶಾಲಿಯಾಗಿರುವ ಜೀವಿಗಳು ನಿಸರ್ಗದಲ್ಲಿ ಅಸ್ತಿತ್ವವನ್ನು ಪಡೆಯುತ್ತವೆ; ಹೊದಿಕೊಳ್ಳದ ದುರ್ಬಲ ಜೀವಿಗಳು ಅಳಿದು ಹೋಗುತ್ತವೆ. ಅಂದರೆ ನಿಸರ್ಗದಲ್ಲಿ ಕೇವಲ ಬಲಶಾಲಿಯಾದ ಪ್ರಾಣಿ ಪಕ್ಷಿಗಳಿಗಷ್ಟೇ ಬದುಕುವ ಹಕ್ಕಿದೆಯೇ? ಹಾಗೆ ನೋಡಿದರೆ ಎಲ್ಲ ಜೀವಿಗಳಿಗೂ ಬದುಕುವ ಹಕ್ಕಿದೆ. ಆದರೆ ಬಲವುಳ್ಳ ಜೀವಿಗಳು ಕೇವಲ ಆಹಾರಕ್ಕಾಗಿಯಷ್ಟೇ ಬೇಟೆ ಆಡುತ್ತವೆ. ತಮ್ಮ ಹಸಿವನ್ನು ನೀಗಿಸಿಕೊಂಡ ಮೇಲೆ ಅವುಗಳು ವಿರಮಿಸುತ್ತವೆ. ಇದರಿಂದಾಗಿ ನಿಸರ್ಗವು ತನ್ನದೇ ರೀತಿಯಲ್ಲಿ ಸಮತೋಲನವನ್ನು ಕಾಯ್ದುಕೊಳ್ಳುತ್ತದೆ.

ಮನುಷ್ಯ ಕೂಡ ಒಬ್ಬ ಪ್ರಾಣಿಯೇ. ಆದರೆ ಮನುಷ್ಯ ಭಾಷೆ ಹಾಗೂ ವಿಚಾರಶಕ್ತಿಯಿಂದ ಎಲ್ಲ ಪ್ರಾಣಿಗಳಲ್ಲಿ ಅತ್ಯಂತ ಬುದ್ಧಿಶಾಲಿಯಾಗಿ ಹೊರಹೊಮ್ಮಿದ. ನಿಸರ್ಗದ ಮೇಲೆ ಅವಲಂಬಿತನಾಗಿದ್ದ ಮಾನವ ನಿಧಾನವಾಗಿ ಅದನ್ನು ದುರುಪಯೋಗ ಮಾಡಿಕೊಂಡ. ದುರಾಸೆಗೆ ಬಿದ್ದು ನೈಸರ್ಗಿಕ ಸಂಪತ್ತನ್ನು ದೋಚಿದ. ಪ್ರಾಣಿಗಳ ಬೇಟೆಯ ಮುಂದೆ ಮನುಷ್ಯನ ದುರಾಸೆಯ ಬೇಟೆಯು ಇಡೀ ಕಾಡನ್ನು ನಾಶಪಡಿಸಿತು; ವೈವಿಧ್ಯಮಯ ಸಸ್ಯ ಸಂಪತ್ತು ಮರೆಯಾಯಿತು; ಕಾಡನ್ನು ಅವಲಂಬಿಸಿದ್ದ ಎಷ್ಟೊಂದು ಜೀವಿಗಳು ನಶಿಸಿ ಹೋದವು. ಮನುಷ್ಯ ಬೇಟೆ ಅವ್ಯಾಹತವಾಗಿ ನಡೆಯುತ್ತಿದೆ. ಏನೆಯಾದರೂ ಮನುಷ್ಯ ನಿಸರ್ಗದ ವಿರುದ್ಧ ಹೋಗಿದ್ದರಿಂದ ಇದರ ಪರಿಣಾಮಗಳನ್ನು ಆಗಾಗ ಎದುರಿಸುತ್ತಲೇ ಬಂದಿದ್ದಾನೆ. ಇದರ ಪರಿಣಾಮವಾಗಿ ಇಂದು ಬರಿಗಣ್ಣಿಗೆ ಕಾಣದ ಕೋವಿಡ್ ೧೯ ಎಂಬ ವೈರಾಣು ಮನುಷ್ಯ ಲೋಕವನ್ನು ಬೇಟೆಯಾಡುತ್ತಿದೆ.

# ೧. ಈಶ್ವರಾರ್ಜುನ ಯುದ್ಧ (೮ನೇ ಆಸ್ವಾಸ)

## ಪಂಪ

**ಗದ್ಯಾನುವಾದ: ಡಾ.ಎಲ್. ಬಸವರಾಜು**

ತಂದೆ ಎಂದರಿಯದೆಯೂ ಮುತ್ತಮುದುಕನ ರೂಪದಲ್ಲಿದ್ದ ಇಂದ್ರನನ್ನು ಕಂಡ ಅರ್ಜುನನ ಕಣ್ಣಲ್ಲಿ ಕಂಬನಿ ಸುರಿಯಿತು.

ಶ್ರೀಯನ್ನು ತನ್ನ ಭುಜಬಲದಿಂದ ನಿರ್ದಾಯಾದ್ಯ ಮಾಡುವ ನಿರ್ಧಾರದಿಂದ, ನಿಯಮಶ್ರೀಯನ್ನು– ಸರ್ವಾಂಗವಾಗಿ ಅಳವಡಿಸಿಕೊಂಡು ನಿಂತ ರಾಜಾ "ಉದಾತ್ತ ನಾರಾಯಣ"ನನ್ನು (೮.೧)– (ಇಂದ್ರನು) ಕಂಡು, ಆ ತನ್ನ ಪುತ್ರನ ಸಾಮರ್ಥ್ಯವು ತನ್ನ ಮನವನ್ನು ತಣಿಸಲು – ಮುದಿ ಹಾರುವ ನಾಗಿ ಮೆಲ್ಲಮೆಲ್ಲಗೆ ಹತ್ತಿರ ಬರುತ್ತಿರುವ(ಆ ದೇವೇಂದ್ರ)ನನ್ನು ಕಾಣುತ್ತಲೇ ಗಾಂಡೀವಿ(ಬಿರುದಿನ ಅರ್ಜುನನಿ)ಗೆ ತಾನೇ ತಾನಾಗಿ ಕಣ್ಣೀರು ಗಳಗಳನೆ ಸುರಿಯಿತು. (೮.೨)

**ತಂದೆ ಮಕ್ಕಳ ನಡುವೆ ನಡೆದ ಆತ್ಮೀಯ ಸಂಭಾಷಣೆ**

ಅಂತು ಮನದಲ್ಲಾದ ಮೋಹರಸವೇ ಕಣ್ಣಿಂದ ತುಳುಕುವಂತೆ ಹೊರಹೊಮ್ಮುವ ಆ ಕಂಬನಿಯನ್ನು "ಉತ್ತರೀಯವಲ್ಕಲ ವಸನೋಪಾಂತ"ದಿಂದ ಒತ್ತಿಕೊಳ್ಳುತ್ತ– ಆ ಬಂದ ಅತಿಥಿಗೆ ಅತಿಥಿ ಸತ್ಕಾರವನ್ನೆಲ್ಲ ಸಂಪೂರ್ಣವಾಗಿ ಮಾಡಿದಾಗ–ಆ ದೇವೇಂದ್ರನು ಆ ನರೇಂದ್ರತಾಪಸನನ್ನು ಕುರಿತು (೮.೨ವ) ನೀನು ಯಾರು, ನಿನ್ನ ಹೆಸರೇನು, ಈ ತಪೋನಿಯಮಕ್ಕೇಕೆ ನಿನಗೆ ಮನಸ್ಸಾಯಿತು– ಇದು ನಿಜವಾಗಿಯೂ ಆಶ್ಚರ್ಯಕರವಾದೊಂದು ಸಂಗತಿಯೇ ಆಗಿದೆ–ಮತ್ತು ನೀನು ಅಜ್ಞಾನಿಯಂತಿದ್ದೀಯೆ–ಮಾಡುವ ತಪಸ್ಸಿಗೆ ಈ ಬಿಲ್ಲು ಬಾಣ ತರವೇ ? (೮.೩) ಎನ್ನಲು, ಸಾಹಸಾಭರಣ ಅರ್ಜುನನು ಇಂತೆಂದನು (೮.೩ವ)–

ನೀನು ಅಂದಂತೆಯೇ–ನನ್ನ ಇರುವ ಈ ರೀತಿ ಮೋಕ್ಷಮಾರ್ಗಕ್ಕೆ ಹೊಂದುವುದಿಲ್ಲ–ನನ್ನ ಈ ತಾಪಸವೇಷದಲ್ಲಿ ಐಹಿಕವೂ ಬೆರೆತಿದೆ ನಿಜ ! ಅದರ ವಿವರವನ್ನು ನಿನಗೆ ತಿಳಿಸದೆ ನಿನ್ನನ್ನು ಕುತೂಹಲಿ ಮಾಡಿ ಕಾಡುವುದು ನನಗೆ ತರವಲ್ಲ ! (೮.೪) ನಿನಗೆ ಹೇಳುವುದಾದರೆ ಪಾಂಡುರಾಜನ ಪುತ್ರ ಗಾಂಡೀವಿ ನಾನು. ದಾಯಾದಿಗೆ ರಾಜ್ಯವನ್ನು ಜೂಜಿನಲ್ಲಿ ಕಳೆದುಕೊಂಡು, ಕಾಡನ್ನು ಹೊಕ್ಕು, ಅಣ್ಣನು ಹೇಳಿದ ಮಾತನ್ನೂ ಮೀರದೆ–ದೇವೇಂದ್ರನನ್ನು ನೀನು ಆರಾಧಿಸು ಎಂದು ವ್ಯಾಸ ಮಹರ್ಷಿಗಳು ಪ್ರೀತಿಯಿಂದ ಮಾಡಿದ ಉಪದೇಶದನುಸಾರ ನಾನೀಗ ಆ ಇಂದ್ರನು ಪ್ರತ್ಯಕ್ಷವಾಗುವವರೆಗೆ ತಪಸ್ಸು ಮಾಡುವವನಿದ್ದೇನೆ. (೮.೫)

ಅದೂ ಅಲ್ಲದೆ (೮.೫ವ) ಈ ಪವಿತ್ರವಾದ ಇಂದ್ರಕೀಲ ಪರ್ವತದ ಕಂದರದಲ್ಲಿ ಘೋರವಾಗಿ ತಪಸ್ಸು ಮಾಡಿ–ಆ ತಪೋಗ್ನಿಯಿಂದ ಈ ನನ್ನ ಒಡಲನ್ನು ಕರಗಿಸುತ್ತೇನೆ, ಮತ್ತು ದೇವೇಂದ್ರನು ಪ್ರತ್ಯಕ್ಷವಾಗಿ ಕೊಡುವ ಒಂದು ವರದ ಬಲದಿಂದ ನನ್ನ ಶತ್ರುವರ್ಗವನ್ನು ಕರಗಿಸುತ್ತೇನೆ–ಇದಿಷ್ಟನ್ನು ಬಿಟ್ಟು ಬೇರೊಂದು ಮಾತಿಲ್ಲ ನನಗೆ–ಹಿಂದು ಮುಂದು ನೋಡದೆ ಶ್ರಮಿಸುತ್ತೇನೆ. (೮.೬)

**ಇಂದ್ರನು ನಿಜರೂಪದಲ್ಲಿ ಪ್ರತ್ಯಕ್ಷವಾದ**

ಅರ್ಜುನನು ಹೀಗೆ ಅನ್ನುತ್ತಿದ್ದಂತೆಯೇ–ರತ್ನರಶ್ಮಿಗಳಿಂದ ಝುಗಝುಗಿಸುವ ಕಿರೀಟ, ಮಣಿಕುಂಡಲ, ತೊಳಗುವ ಭಂಗಾರದ ಬಣ್ಣದ ಮೈಕಾಂತಿ, ಆ ಇಂದ್ರನ ಮೈತುಂಬ ಇದ್ದ ಸಾವಿರ ಕಣ್ಣುಗಳೂ–ಸರೋವರದ ಎಲ್ಲ ತಾವರೆಗಳೂ ಅರಳಿದಂತೆ ಅರಳಲು–ಇಂದ್ರನು ವಿಕ್ರಮಾರ್ಜುನನ ಮನಸ್ಸಿಗೆ ಹರ್ಷವನ್ನುಂಟುಮಾಡಿ–ತನ್ನ ನಿಜರೂಪವನ್ನು ಅವನಿಗೆ ತೋರಿದನು. (೮.೭)

**ಶಿವನನ್ನು ಕುರಿತು ತಪಸ್ಸು ಮಾಡೆಂದು ಅರ್ಜುನನಿಗೆ ಇಂದ್ರನು ಹೇಳಿ ಅದೃಶ್ಯನಾದ**

ಅಂತು ತನ್ನ ಸಹಜರೂಪವನ್ನು ತೋರಿ, ತನ್ನ ಮನತುಂಬಿದ ಅಕ್ಕರೆಯನ್ನು ಪ್ರಕಟಿಸಲೆಂದು ಮಗ(ಅರ್ಜುನ)ನನ್ನು ಅಪ್ಪಿಕೊಂಡು (೮.೭ವ)–ಶತ್ರುರಾಜರೊಡನೆ ಸೆಣಸಬೇಕಾದರೆ, ಅಸ್ತ್ರ ಸಂಚಯನ ಮಾಡಬೇಕಾದರೆ ನೀನು ನಿನ್ನ ತನುವನ್ನು ತಪೋಗ್ನಿಯಿಂದ ಇನ್ನಷ್ಟು ದಂಡಿಸು, ಮತ್ತು ಎಲೆ ಮಗನೆ, ನೀನು ಕಷ್ಟಪರಿಹಾರಕನಾದ ಹರನನ್ನು ಆರಾಧಿಸು (೮.೮) ಎಂದು ಹೇಳಿ ದೇವೇಂದ್ರನು ಮಾಯವಾಗಲು, ಇತ್ತ ಅರ್ಜುನನು ಒಂಟಿಕಾಲಮೇಲೆ ನಿಂತು "ಏಕಪಾದ ತಪ"ವನ್ನು ಆಚರಿಸುತ್ತಿದ್ದರೆ, ಆ ತಪಸ್ಸಿನ ಜ್ವಾಲೆಯಿಂದ ಆ ವನದಲ್ಲಿದ್ದ ಇತರ ತಪಸ್ವಿಗಳ ತಪವೆಲ್ಲಾ ಸುಟ್ಟುಹಾಳಾಯಿತು (೮.೯) (ಮತ್ತು) ಆ ಜ್ವಾಲೆ ಹಗಲಿನಲ್ಲಿ ಸೂರ್ಯನ, ರಾತ್ರಿಕಾಲದಲ್ಲಿ ಚಂದ್ರನ ಕಿರಣಾವಳಿಯನ್ನೆಲ್ಲ ಬೆನ್ನಟ್ಟಿ ಓಡಿಸಿ ಆಕಾಶವನ್ನೆಲ್ಲ ಆದ್ಯಂತವಾಗಿ ಆವರಿಸಿತು. (೮.೧೦)

ಅರ್ಜುನನು ಅಂತು ಉಗ್ರಾತಿಉಗ್ರ ತಪಸ್ಸನ್ನು ಮಾಡಲು, ಅವನ ಆ ತಪಸ್ಸಿನ ಸುಡುಸುಡು ಪ್ರಭೆ ತಮಗೆ ತಪೋವಿಘ್ನವನ್ನು ಮಾಡಲು, ಆ ಕೂಡಲೇ–ಆ ಇಂದ್ರಕೀಲ ಪರ್ವತದ ತಪಸ್ವಿಗಳೆಲ್ಲರೂ ನಿಯೋಗ ಹೊರಟು– ಕೈಲಾಸದಲ್ಲಿ ವಿಲಾಸಬೆರಸು ಗಿರಿಜೆಯೊಡನಿದ್ದ ಶಿವನಿಗೆ–ಆ ಸಾಮಂತ ಚೂಡಾಮಣಿ (ಅರಿಕೇಸರಿ ಅರ್ಜುನ)ನ ತಪಃಪ್ರಭಾವವನ್ನು ಕುರಿತು ಈ ಮುಂದಿನಂತೆ ಬಿನ್ನಹ ಮಾಡಿಕೊಂಡರು (೮.೧೦ವ)–

**ಅರ್ಜುನನ ಘೋರ ತಪೋಗ್ನಿಯಿಂದ ಘಾಸಿಗೊಂಡ ಋಷಿಗಳೆಲ್ಲಾ ಶಿವನಲ್ಲಿ ಮೊರೆಯಿಟ್ಟರು**

ಅವನು ಯಾವನೆಂದು ತಿಳಿಯಬರುತ್ತಿಲ್ಲ–ಅಪೂರ್ವವಾದವನೊಬ್ಬನು, ಶತ್ರುಭಯಂಕರ, (ಏಕಪಾದ) ತಪಸ್ಸಿನಲ್ಲಿ ನಿರತನಾಗಿದ್ದಾನೆ. ಅವನ ತಪೋಗ್ನಿಯು ಕಾಳ್ಗಿಚ್ಚಿನಂತೆ ಹಬ್ಬಲು ನಮ್ಮ ತಪಸ್ಸೆಲ್ಲಾ ಹಾಳಾಯಿತು. ಈಗ ನಾವು ಇನ್ನಾವ ಪರ್ವತದಲ್ಲಿ ಹೋಗಿರಬೇಕು ಹೇಳು–ಎಲೆ ತ್ರಿಪುರಾಂತಕ ? (೮.೧೧) ಆ ತಪಸ್ವಿ ಬಿಲ್ಲು ಹಿಡಿದಿದ್ದಾನೆ, ಕವಚ ಧರಿಸಿದ್ದಾನೆ, ಬೆನ್ನಿಗೆ ಬತ್ತಳಿಕೆಗಳನ್ನು ಬಿಗಿದುಕೊಂಡಿದ್ದಾನೆ–ಅವನು ತಪಸ್ವಿಗಳಲ್ಲಿ ಯಾರಂತೆಯೂ ಇಲ್ಲ–ತ್ರಿಪುರವನ್ನು ಸುಡುವ ನಿನ್ನಂತೆಯೇ ಇದ್ದಾನೆ– (೮.೧೨). ಎನ್ನುತ್ತಲೂ–ಅದೆಲ್ಲವನ್ನೂ ಕೇಳಿ, ಅವನು ಯಾರೆಂಬುದನ್ನು ತಿಳಿಯಲೆಂದು (೮.೧೨ವ)–

**ಶಿವನು ಯೋಗದೃಷ್ಟಿಯಿಂದ ಆ ಆತಂಕಕಾರೀ ತಪಸ್ವಿ ಅರ್ಜುನನೆಂಬುದನ್ನು ಮನಗಂಡು ಲೀಲೆಗಾಗಿ ಸಪರಿವಾರ ಕಿರಾತವೇಷ ಧರಿಸಿ ಹೊರಟ**

ಶಿವನು ತನ್ನ ಕಣ್ಣುಗಳನ್ನು ಅರೆಮುಚ್ಚಿ ಧ್ಯಾನಮಗ್ನನಾಗಿ–ನಿಶ್ಚಲವಾಗಿ ಮೈಮರೆತು ಮಲಗಿದ ಮೀನಿರುವ ಮಡುವಿನಂತಿದ್ದನು. (೮.೧೩)

ಅಂತಿದ್ದು ದಿವ್ಯಜ್ಞಾನದಿಂದ ಶಿವನು–ಆ ತಪಸ್ವಿ ಉದಾರಮಹೇಶ್ವರ(ನಾದ ಅರ್ಜುನ)ನೇ ಆಗಿರುವುದನ್ನು ಅರಿತು, ಬೆರಳಿಂದ ಚಿಟಿಕೆ ಹೊಡೆದು, ಮುಗುಳ್ನಗೆ ನಕ್ಕು, ಏನನ್ನೋ ಯೋಚಿಸಿ–ಆತನಿಗೆ ತಕ್ಕುದನ್ನೇ ಬಲ್ಲೆನೆನ್ನುತ್ತ–ನಿಯೋಗ ಬಂದಿದ್ದ ಮುನಿಗಳನ್ನೆಲ್ಲ ಹೋಗಿರೆಂದು ಕಳಿಸಿ– ಹಿಂದೆ ದೇವೇಂದ್ರನು ತನಗೆ ಮೂಕದಾನವನಿಂದ ಆಗುವ ಆತಂಕವನ್ನೆಲ್ಲಾ ಬಿನ್ನವಿಸಿಕೊಂಡಿದ್ದನ್ನು ಸ್ಮರಿಸಿ, ಆ ಮೂಕದಾನವನು ಆದಿವರಾಹ ರೂಪ*(= ವೇಷ)ದಲ್ಲಿದ್ದುದನ್ನೂ (ನೋಡಿ ೮.೧೩ವ) ಅರಿತು, ಮನುಜಮಾಂಧಾತ (ಬಿರುದಾಂಕಿತ ಅರಿಕೇಸರಿ ಅರ್ಜುನ)ನಿಂದ ಆ ದೈತ್ಯನನ್ನು ಕೊಲಿಸಲೆಂದೂ, ಸಾಹಸಾಭರಣ(ನಾದ ಆ ಅರಿಕೇಸರಿ)ನಲ್ಲಿ ಏನಾದರೂ ಎಡವಟ್ಟು ಮಾಡಿ ಮಾಯಾಯುದ್ಧದಲ್ಲಿ ಆತನ ಸಾಹಸದ– ಛಲದ–ಬಲದ–ಬಲ್ಲಾಳ್ತನದ ಆಯಾಮಗಳನ್ನು ಅಳೆದುನೋಡಿ–(ಆಮೇಲೆ) ವರ ಕೊಡುವೆನೆಂದೂ ನಿಶ್ಚಯಿಸಿ (೮.೧೩ವ)–

ಸ್ವತಃ ಶಿವನು ಬೇಡನಾಗಿ, ಪಾರ್ವತಿಯನ್ನು ಬೇಡಿತಿಯನ್ನಾಗಿ ಮಾಡಿ, ಪ್ರೀತಿಪಾತ್ರ ಷಣ್ಮುಖನನ್ನು ಬೇಡಪಡೆಯ ನಾಯಕನನ್ನಾಗಿ ಮಾಡಿ, ಇದ್ದಬದ್ದ ಭೂತಗಳನ್ನೆಲ್ಲ ಬೇಡ ಪಡೆ ಮಾಡಿ– ಪ್ರಳಯಕಾಲದ ಮೇಘ ಸಮೂಹವು ಸಮುದ್ರವನ್ನು ಆದ್ಯಂತವಾಗಿ ಕವಿಯುವಂತೆ ಆ ತಪೋವನವನ್ನು ಬೇಟೆಯ ನೆಪದಲ್ಲಿ ಕವಿದನು. (೮.೧೪)

**ತನ್ನ ಕಡೆಗೇ ನುಗ್ಗಿ ಬಂದ ಆ ಮೂಕದಾನವ ವರಾಹವನ್ನು ಅರ್ಜುನ ಬಾಣ ಬಿಟ್ಟು ಉದ್ದುದ್ದವಾಗಿ ಕೊಂದ–ಅದೇ ಕಾಲಕ್ಕೆ ಶಿವನೂ ಬಾಣ ಬಿಟ್ಟು ಅದನ್ನು ಅಡ್ಡಡ್ಡವಾಗಿ ಸೀಳಿಹೋಗುವಂತೆ ಮಾಡಿ ಕೊಂದ.**

ಅಂತು ಕವಿದರೆ ಆ ಕಳಕಳಕ್ಕೆ ಘಾಸಿಗೊಂಡು ಆ ವರಾಹ ರೂಪದ ಮೂಕದಾನವನು (೮.೧೪ವ) ಹೊರಳಿದರೆ– ಸಮುದ್ರಗಳು ಕಲಕಿದವು, ಮೈಯುಜ್ಜಿದರೆ–ಆ ಎತ್ತರವಾದ ಮಂದರ ಪರ್ವತವೇ ಅಲುಗಾಡಿತು, ಘೀಳಿಟ್ಟರೆ–ದಿಗ್ಗಜಗಳೂ

ಹಿಂದಕ್ಕೆ ಸರಿದವು, ಆಕಾಶಕ್ಕೇ ಕೋರೆಹಲ್ಲುಗಳಿಂದ ತಿವಿದಾಡಲು–ನಕ್ಷತ್ರಗಳು ಸಡಿಲಗೊಂಡು ಆಕಾಶ ಬೆರಸಿಯೇ ಅವು ಕೆಳಗೆ ಬಿದ್ದವು–ಆ ದೈತ್ಯ ವರಾಹನ ಹಿರಿಮೆ ಅದೇನು ಹಿರಿದಾದುದು ! (೮.೧೫)

ಅಂತು ಆ ವರಾಹನು ಆದಿವರಾಹನಾದ ಮುರಾಂತಕ(ವಿಷ್ಣು)ವನ್ನೂ ಲಘುಮಾಡಿ, ಭೂಮಿಯೆಲ್ಲ ಕಪ್ಪಂಗವಿಯಾಗುವಂತೆ(ನುಗ್ಗಿ) ಬರಲು, ಅದರ ಹಿಂದೆ ಆ ಕೃತಕ ಕಿರಾತ(ಶಿವ)ನು ಬೆನ್ನಟ್ಟಿ ತನ್ನತ್ತಲೇ ಬರುತ್ತಿರುವುದನ್ನು ಕಂಡು–ಅಮೋಘಾಸ್ತ್ರನಾದ ಧನಂಜಯ(ಅರ್ಜುನ)ನು ತುಂಬಿದ ಬತ್ತಳಿಕೆಯಿಂದ ಒಂದು ಅಮೋಘಾಸ್ತ್ರವನ್ನು ಸೆಳೆದುಕೊಂಡು ಗಾಂಡೀವ ಧನುಸ್ಸಿನಲ್ಲಿ ಹೂಡಿ (೮.೧೫ವ) ಸೆಳೆದು ಬಿಡಲು, ಆ ಬಿಟ್ಟ ಬಾಣ ಆ ಹಂದಿಯನ್ನು ಮೂತಿಯಿಂದ ಬಾಲದವರೆಗೆ ಉದ್ದುದ್ದವಾಗಿ ಸಂಬಳಿಗೆ (= ಸಂಪುಟ)ವೋದಂತಾಯಿತು ಎಂಬಂತೆ ಸವರಿ ಹೆಚ್ಚಿಕೊಂಡು ಹೋಯಿತು. (ಅದೇ ವೇಳೆಗೆ) ಅತ್ತ ಶಿವನು ಗುರಿಯಿಟ್ಟು ಬಿಟ್ಟ ಬಾಣವೂ ಮೇಲಿಂದ ಕೆಳಕ್ಕೆ ಅಡ್ಡಡ್ಡವಾಗಿ ಆ ಹಂದಿಯನ್ನು ಕತ್ತರಿಸಿ(ಕೊಂಡು ಹೋಗಿ), ಆಕಾಶದಲ್ಲಿ ಪ್ರೇಕ್ಷಕರಾಗಿದ್ದ ದೇವತೆಗಳಿಗೆ ಅತ್ಯಾಶ್ಚರ್ಯವನ್ನುಂಟು ಮಾಡಿತು. (೮.೧೬)

**ಈಶ್ವರಾರ್ಜುನ ಘರ್ಷಣೆ**

ಅಂತು ಮೂಕದಾನವನನ್ನು ಆ ನೆವದಲ್ಲೇ ಕೊಂದು, ಆ ವರಾಹಾರುಣ ಜಲಧಾರಾರುಣವಾಗಿದ್ದ ತನ್ನ ಬಾಣವನ್ನು ಪರಾಕ್ರಮಧವಳ(ಅರಿಕೇಸರಿ ಅರ್ಜುನ)ನು ಮೆಲ್ಲಗೆ ಕೊಂಡು ಬತ್ತಳಿಕೆಯಲ್ಲಿಟ್ಟು ಕೊಂಡು ಹೋಗಿ, ಹೂಗೊಳದಲ್ಲಿ ಕೈಕಾಲು ತೊಳೆದುಕೊಂಡು, ಮರಳಿ–ತಪಸ್ಸಿನಲ್ಲಿ ನಿಲ್ಲಲು (೮.೧೬ವ)–

------------

*ಪಂಪನ ಪ್ರಕಾರ ಆ ಹಂದಿಯನ್ನು ಕೊಂದವನು ಅರ್ಜುನನೆ. ಅದು ಸಾಮಾನ್ಯವಾದೊಂದು ಹಂದಿಯಲ್ಲ–ಇಂದ್ರನಿಗೂ ಆತಂಕಕಾರಿಯಾಗಿದ್ದ "ಮೂಕ"ನೆಂಬೊಬ್ಬ ರಾಕ್ಷಸ ಆದಿವರಾಹವೇಷದಲ್ಲಿದ್ದ.

ಶಿವನು ಆ ಅರ್ಜುನನಲ್ಲಿಗೆ ಷಣ್ಮುಖನನ್ನು–ತನ್ನ ಬಾಣವನ್ನು ಕೇಳಿ ತಾರೆಂದು ಕಳಿಸಿದರೆ, ಆತ ಬಂದು (೮.೧೬ವ)–ಗೊರವರೇ ಈ ಬೂದಿ ಈ ಜಡೆಯೇನೋ ಸರಿ ತಪಸ್ಸಿಗೆ–ಆದರೆ ಈ ಕವಚ, ಈ ಭಯಂಕರ ಬಿಲ್ಲು, ಖಡ್ಗ, ಗುರಾಣಿ, ಈ ಎರಡೂ ಬತ್ತಳಿಕೆ ತುಂಬಿದ ಬಾಣ– ಇವೆಲ್ಲಾ ಯಾಕೆ ತಪಸ್ಸಿಗೆ ? ಅವಿದ್ದರೆ ತಪಸ್ಸೆಂಬುದೂ ಇಲ್ಲವಲ್ಲಾ ! (ಅದಿರಲಿ), ಈಗ ನಮ್ಮ ಅರಸರು ಪ್ರೀತಿಪಟ್ಟು ಪ್ರಯೋಗಿಸಿದ ಬಾಣವನ್ನು–ಇನ್ನು ಹೆಚ್ಚಾಗಿ ಮಾತಾಡದೆ–ತಂದುಕೊಡುವಿರಾ ? (೮.೧೭) ನೀವು ತಿಳಿಯದೆ ತಂದಿದ್ದರೇನಂತೆ–ನಮ್ಮ ಒಡೆಯರಿಗೆ ಅದನ್ನು ನನ್ನ ಕೈಯಲ್ಲಿ ಕಳಿಸಿ ಕೊಡಿರಿ. ನೀವು ತಿಳಿದೂ ತಿಳಿದೂ ಹೀಗೆ ಪರರ ಒಡವೆಯನ್ನು ಗಪ್ಪೆಂದು (ಬತ್ತಳಿಕೆಯೊಳಕ್ಕೆ) ಹಾಕಿ ಕೊಂಡಿರುವಿರಲ್ಲಾ ! ಇದೆಲ್ಲಿಯಾದರೂ ಉಂಟೆ ? (೮.೧೮) ಎಂದು ಕಿರಾತದೂತನು ತನ್ನನ್ನು ಅತಿಕ್ರಮಿಸಿ ಮಾತನಾಡಿಸಿದ್ದಕ್ಕೆ ಮುನಿದು ಪರಾಕ್ರಮಧವಳ(ಅರ್ಜುನ)ನು ಈ ಮುಂದಿನಂತೆಂದನು (೮.೧೮ವ)–ಬೇಡನಾದವನಿಗೆ ಒಂದು ಮೃಗವನ್ನು ಕೊಲ್ಲಲು ಒಂದು ಮೊಳೆಯೋ ಗೂಟವೋ ಸಾಕು. ಈ ಜಗತ್ತುಗಳನ್ನೇ ಅಲ್ಲಾಡಿಸುವ ನನ್ನ ಉಗ್ರಾಸ್ತ್ರದ ಹೆಸರೆತ್ತಲಾದರೂ ಅವನಿಗೆ ಯೋಗ್ಯತೆ ಯಿದೆಯೆ ? ಇಲ್ಲ, ಆ ಖಳನಿಗೆ ತನ್ನ ಇತಿಮಿತಿ ತಿಳಿಯದಲ್ಲ ! (೮.೧೯)–ಇದು ಜಗಳ ಕೀಳಲು ಆಡುವ ಮಾತು–ಅಲ್ಲದೆ ಈ ಮಾತೂ–ಪಟ್ಟುಹಾಕುವ, ಬಲತೋರುವ, ಧಿಮಾಕಿನ ಕಿಹಿ ಸ್ವರದಲ್ಲಿದೆ–ಅದೆಲ್ಲ ನಮ್ಮ ಹತ್ತಿರ ನಡೆಯದು. ಎಲೋ ಬೇಡ, ಆ ಬಾಣವನ್ನು ಬೇಡ ಬೇಡ. ಛಲದಿಂದ ಬಾಣವನ್ನು ಬಾಣಕಾರುವಂತೆ ಯುದ್ಧ ಮಾಡುವ ಆಶೆಯಿದ್ದರೆ–ಬರಹೇಳೆಲವೋ–ಆ ನಿನ್ನ ಒಡೆಯನನ್ನು. (೮.೨೦)

ಎಂದು ಬಂದ ಆ ಕಿರಾತದೂತನನ್ನು ವಿಕ್ರಾಂತತುಂಗನು ಝುಂಕಿಸಿದರೆ–ಆ ಮಾತೆಲ್ಲವನ್ನೂ ಆ ರೀತಿಯಲ್ಲೇ–ಹೋಗಿ ಕಪಟಕಿರಾತ(ಶಿವ)ನಿಗೆ ತಿಳಿಸಲು (೮.೨೦ವ)–

ಆ ಶಿವನೂ ಮಾಯಾಯುದ್ಧವನ್ನು ಮಾಡಲು ಬಗೆದು ಆನೆ–ಕುದುರೆ–ರಥ–ಕಾಲಾಳು ಸೈನ್ಯಗಳನ್ನು ಯಥೇಚ್ಛವಾಗಿ ಎದುರಲ್ಲಿ ಒಡ್ಡಿ ನಿಲ್ಲಿಸಲು–ಆ ಪರಸೈನ್ಯಭೈರವ(ಅರಿಕೇಸರಿ ಅರ್ಜುನ)ನೂ ಮಹಾಪ್ರಳಯ ಭೈರವಾಕಾರವನ್ನು ತಾಳಿ ಏಕಾಂಗವಾಗಿ ಬಂದು ಮೇಲೆ ಬೀಳಲು (೮.೨೦ವ) (ಇಡಿಯಾಗಿ) ಆ ಚತುರ್ಬಲವೂ ಕೆದರಿತು–ಒಂದೊಂದು ದಳವೂ ಬೆದರಿತು. ಆನೆಗಳಲ್ಲಿ ಬಹುಪಾಲು ಕೆಳಗುರುಳಿ ಅಗ್ಗಿತಗ್ಗಿತು–ಉಳಿದುವು ಹಿಮ್ಮೆಟ್ಟಿ ಘೀಳಿಟ್ಟವು. ಹೀಗೆ ಗುಣಾರ್ಣವ (ಅರಿಕೇಸರಿ)ಯ ಬಾಣ ಲಕ್ಷಾಂತರ ಲೆಕ್ಕದಲ್ಲಿ ನಾಟಿ ಆ ಚತುರಂಗಬಲವೆಲ್ಲಾ ಅಳಿದು

ಹಾಳಾದರೂ– ಆ ಹರನು ಮಾತ್ರ (ವೈಯಕ್ತಿಕವಾಗಿ) ಬಿಡದೆ ಅರ್ಜುನನೊಡನೆ ಹೋರಾಡಿದ–ದಿಗ್ಗಜದೊಡನೆ ದಿಗ್ಗಜವು ಹೋರಾಡುವಂತೆ. (೮.೨೧)

ಅಂತು ಬರಿಗೈಯಲ್ಲೇ ಆ ಇಬ್ಬರೂ ಹೆಣೆದುಕೊಂಡು, ಆದ ಹಲವು ಘಾಯಗಳಲ್ಲಿಯೂ ಆಯ ತಪ್ಪದೆ ಬಹಳ ಹೊತ್ತಾಗುವವರೆಗೂ ಹೋರಾಡಲು, ಅದನ್ನು ದೇವತೆಗಳೆಲ್ಲರೂ ಆಕಾಶದಲ್ಲಿದ್ದು (ಗೂಳಿಯ ಅಥವಾ ಕೋಳಿಯ) ಅಂಕವನ್ನು ನೋಡುವಂತೆ ನೋಡುತ್ತಿರಲು (೮.೨೧ವ)–

**ನಡೆದ ದ್ವಂದ್ವಯುದ್ಧದಲ್ಲಿ ಸೋತ ಕಿರಾತನೇ ಶಿವನಾಗಿ ಪ್ರತ್ಯಕ್ಷವಾದ**

ನೆಲಕ್ಕೆ ಇಕ್ಕಿದ ಶಿವನು ಪಾರ್ಥ(ಅರಿಕೇಸರಿ ಅರ್ಜುನ)ನನ್ನು, ಇಕ್ಕಿದ ಆ ಶಿವನನ್ನು ಅರ್ಜುನ ಎನ್ನುತ್ತಿರಲು–ಆದ ಗೆಲುವಿಗೆ (ಸವಾಲು ಹಾಕಿ) ಮುಡಿಗೆ(ಟೊಪ್ಪಿಗೆ)ಯನ್ನು ಇಕ್ಕುವಂತೆ ಇಕ್ಕಿದನು ನಿರಾಯಾಸವಾಗಿ ನೆಲಕ್ಕೆ ಹರಿಗನು ಆ ಶಿವನನ್ನು ! (೮.೨೨)

**(ಆಕರ: ಸರಳ ಪಂಪ ಭಾರತ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು)**

# ೨. ಜಾಲಹಳ್ಳಿಯ ಕುರ್ಕ

**ಕೆನೆತ್ ಅಂಡರ್ಸನ್**

**ಭಾವಾನುವಾದ: ಕೆ.ಪಿ. ಪೂರ್ಣಚಂದ್ರ ತೇಜಸ್ವಿ**

ಇದೇನೂ ನರಭಕ್ಷಕ ಹುಲಿಯ ಕಥೆಯಲ್ಲ, ಅಥವಾ ನರಭಕ್ಷಕ ಚಿರತೆಯ ಕಥೆಯೂ ಅಲ್ಲ. ಇದೊಂದು ಕುರ್ಕ ತನ್ನ ಆತ್ಮರಕ್ಷಣೆಗಾಗಿ ಹೋರಾಡಿ ಮೂರು ಜನರನ್ನು ಕೊಂದು, ಅನೇಕರಿಗೆ ಮರಣಾಂತಿಕ ಗಾಯ ಮಾಡಿ, ಕೊನೆಗೆ ಈ ಹೋರಾಟದಲ್ಲಿ ಸಾವನ್ನಪ್ಪಿದ ಕಥೆ. ಚಿರತೆಗಳಲ್ಲೇ ಚಿಕ್ಕ ಜಾತಿಯ ಚಿರತೆಗಳನ್ನು ಕುರ್ಕಗಳೆಂದು ಕರೆಯುತ್ತಾರೆ. ಇವು ಸಾಧಾರಣವಾಗಿ ಕಾಡಿನ ಪಕ್ಕದ ಹಳ್ಳಿಗಳಲ್ಲಿ ಕುರಿ, ಮೇಕೆ ಮತ್ತು ಅನೇಕ ವೇಳೆ ಸಾಕಿದ ನಾಯಿಗಳು ಮುಂತಾದವುಗಳನ್ನು ಕದಿಯುತ್ತವಷ್ಟೆ ಹೊರತು ಪೂರ್ಣ ಪ್ರಮಾಣದ ನರಭಕ್ಷಕಗಳಾಗುವುದು ಇಲ್ಲವೇ ಇಲ್ಲ.

ಸಾವಿರದೊಂಬೈನೂರ ಮುವ್ವತ್ತೈದನೆ ಇಸ್ವಿ, ಎರಡನೆ ಮಹಾಯುದ್ಧ ಶುರುವಾಗುವುದಕ್ಕೂ ಮೊದಲು. ಬೆಂಗಳೂರಿನಿಂದ ಏಳು ಮೈಲು ದೂರದಲ್ಲಿ ತುಮಕೂರಿಗೆ ಜಾಲಹಳ್ಳಿ ಎಂಬ ಹೆಸರಿನ ಸಾಧಾರಣ ಹಳ್ಳಿಯೊಂದಿದೆ. ನೂರೈವತ್ತಕ್ಕಿಂತ ಕಡಿಮೆ ಮನೆಗಳ ಹಳ್ಳಿ ಇದು. ಹಲವು ಇಟ್ಟಿಗೆ ಗೋಡೆಯ ಮನೆಗಳಾದರೆ ಮಿಕ್ಕವು ಹುಲ್ಲು ಜೋಪಡಿಗಳು. ಬೆಂಗಳೂರು ನಗರ ಮೈಸೂರು ಸಂಸ್ಥಾನದ ರಾಜಧಾನಿಯಾದ್ದರಿಂದ ಎಲ್ಲಾ ಇಲಾಖೆಗಳ ಮುಖ್ಯಾಧಿಕಾರಿಗಳೂ ಅಲ್ಲಿರುತ್ತಾರೆ. ಇದರಲ್ಲಿ ಒಂದಾದ ಅರಣ್ಯ ಇಲಾಖೆ ಒಂದು ಯೋಜನೆ ಪ್ರಾರಂಭಿಸಿತು. ಕಾಡುಗಳ ಬಗ್ಗೆ ಸಂಶೋಧನೆ, ಅಭಿವೃದ್ಧಿ ಮುಂತಾದುವಕ್ಕೆ ಬೆಂಗಳೂರಿಗೆ ಸಮೀಪದಲ್ಲೇ ಚಿಕ್ಕ ಕಾಡನ್ನು ಬೆಳೆಸಿದರೆ ವಿಜ್ಞಾನಿಗಳಿಗೂ ಅಧಿಕಾರಿಗಳಿಗೂ ಮೇಲ್ವಿಚಾರಣೆಗೆ ಅನುಕೂಲ ಎಂದು ತೀರ್ಮಾನಿಸಿ ಜಾಲಹಳ್ಳಿಯ ಬಳಿ ಒಂದು ಚಿಕ್ಕ ನೆಡುತೋಪನ್ನು ಬೆಳೆಸತೊಡಗಿದರು. ತೇಗ ಹೊನ್ನೆ ಮತ್ತಿ ಮುಂತಾದ ಕಾಡಿನ ಎಲ್ಲ ಮರಗಳ ಸಸಿಗಳೂ ಅಲ್ಲಿದ್ದುವು. ಈ ಗಿಡಗಳು ಸುಮಾರು ಹತ್ತು ಅಡಿ ಎತ್ತರವಾಗುವ ಹೊತ್ತಿಗೆ ಅದರ ಅಡಿಯಲ್ಲಿ ಲಂಟಾನ, ಉರುಚಟ್ಲೆ ಮುಂತಾದ ಕಾಡು ಗಿಡಗಳ ಅಭೇದ್ಯ ಜಿಗ್ಗು ಬೆಳೆಯಿತು. ಆ ಜಟಿಲ ಪೊದರಿನಲ್ಲಿ ಹಾವು, ಮೊಲ, ಕವುಜುಗನ ಹಕ್ಕಿ, ನರಿ, ಆಗೀಗ ನವಿಲುಗಳು, ಚಿಟ್ಟುಕೋಳಿಗಳು ಎಲ್ಲ ಬಂದು ಸೇರಿಕೊಂಡಿದ್ದುವು.

ಇಂಥ ಸಂದರ್ಭದಲ್ಲಿ ಈ ಅಭೇದ್ಯ ಲಂಟಾನದ ಜಿಗ್ಗಿಗೆ ಮಾಗಡಿ ಕಡೆಯಿಂದ ಒಂದು ಕುರ್ಕ ಬಂದು ಸೇರಿಕೊಂಡಿತು. ಇದು ಕೆಲ ದಿನಗಳವರೆಗೆ ಆ ಜಿಗ್ಗಿನ ಕಾಡಿನಲ್ಲಿ ದೊರೆಯುತ್ತಿದ್ದ ಮೊಲ, ಇಲಿ, ಹೆಗ್ಗಣ, ಕವುಜುಗಗಳನ್ನೇ ಹಿಡಿದು ತಿನ್ನುತ್ತಾ ಹೊಟ್ಟೆ ಹೊರೆದುಕೊಂಡಿತ್ತು. ಆದರೆ ಜಾಲಹಳ್ಳಿಯ ಸಾಕು ಪ್ರಾಣಿಗಳು ಶಿಕಾರಿಯ ತಾಪತ್ರಯವಿಲ್ಲದೆ ಸುಲಭದಲ್ಲಿ ಸಿಗುತ್ತವೆಂದು ತಿಳಿದ ಮೇಲೆ ಅದು ಮೆಲ್ಲಗೆ ಊರಿನ ಕುರಿ ಕೋಳಿ ನಾಯಿಗಳನ್ನು ಒಂದೊಂದಾಗಿ ಹೊರಲಾರಂಭಿಸಿತು.

ಆ ಹಳ್ಳಿಯಲ್ಲೊಬ್ಬ ರೊಣಪ ದಫೇದಾರ ಇದ್ದ. ಅವನು ಕಾನೂನು ಪಾಲನೆಯ ಜೊತೆಗೆ ಪಶುಪಾಲನೆಯನ್ನೂ ಮಾಡುತ್ತಿದ್ದ. ಅವನು ಸಾಕಿಕೊಂಡಿದ್ದ ಒಂದು ಕುರಿಯನ್ನು ಕುರ್ಕ ಒಂದು ದಿನ ಹಿಡಿದು ತಿಂದು ಹಾಕಿತು. ಇಲ್ಲಿಯವರೆಗೂ ಉದಾಸೀನದಿಂದಿದ್ದ ದಫೇದಾರನಿಗೆ ಈಗ ವಿಪರೀತ ಕೋಪ ಬಂತು. ಆ ಕಾಡಿನ ಕುರ್ಕ ಬೆಂಗಳೂರಿನಂಥ ರಾಜಧಾನಿಯ ಬಳಿಗೆ ಬಂದಿದ್ದೇ ಅದರ ಮೊದಲ ತಪ್ಪು. ಇಲ್ಲಿ ಬಂದು ಸಾಕುಪ್ರಾಣಿಗಳಿಗೆ ಬಾಯಿ ಹಾಕಿ ಕಾನೂನು ವ್ಯವಸ್ಥೆಗೆ ಭಂಗ ತಂದಿದ್ದಲ್ಲದೆ, ಈಗ ಕಾನೂನು ಪಾಲಕನಿಗೇ ಸವಾಲೆಸೆಯುತ್ತಿದೆ! ತನ್ನ ಸ್ಥಾನಮಾನಗಳಿಗೆ ಕೊಂಚವೂ ಗೌರವ ಕೊಡದ ಈ ತಲೆಹರಟೆ ಕುರ್ಕಕ್ಕೆ ಮರಣದಂಡನೆಯೇ ಸರಿಯಾದ ಶಿಕ್ಷೆ ಎಂದು ರೊಣಪ ದಫೇದಾರ ಕೂಡಲೆ ನಿರ್ಧರಿಸಿದ.

ಆಗ ಸ್ಥಳೀಯ ಪೋಲೀಸರ ಹತ್ತಿರ ೩೦೩ ರೈಫಲ್ ಇರುತ್ತಿತ್ತು. ಐದು ಗುಂಡುಗಳನ್ನು ಸರದಿ ಪ್ರಕಾರ ಹಾರಿಸಬಹುದಾಗಿದ್ದ ಈ ರೈಫಲ್ಲುಗಳ ಮ್ಯಾಗಝೀನ್ ತೆಗೆದುಹಾಕಿ ಪ್ರತಿಸಾರಿಯೂ ಒಂದೊಂದೇ ಗುಂಡು ಹಾರಿಸಲಾಗುವಂತೆ ಅವುಗಳನ್ನು ಪರಿವರ್ತಿಸಲಾಗಿತ್ತು. ಜನರ ಪ್ರತಿಭಟನೆ, ದೊಂಬಿ ಮುಂತಾದ ಸಮಯದಲ್ಲಿ ಗೋಲೀಬಾರಿಗೆ ಅನುಮತಿ ಕೊಟ್ಟಾಗ ಪೋಲೀಸರು ಯದ್ವಾತದ್ವಾ ಗುಂಡುಹಾರಿಸಿ ಜನಗಳನ್ನು ಕೊಲ್ಲುತ್ತಾರೆಂದೇ ಅವರ ರೈಫಲ್ಲಿಗೆ ಈ ಮಾರ್ಪಾಡು ಮಾಡಿದ್ದರು.

ಆ ಠೊಣಪ ದಫೇದಾರ ಠಾಣೆಯಲ್ಲಿದ್ದ ಒಂದು ರೈಫಲ್ ತೆಗೆದುಕೊಂಡು ಲೋಡು ಮಾಡಿ, ಕುರ್ಕ ತನ್ನ ಕುರಿ ಕೊಂದಲ್ಲಿದ್ದ ಮರದ ಮೇಲೆ ಕುಳಿತುಕೊಂಡ. ಸರ್ಕಾರದ ಮತ್ತು ಕಾನೂನಿನ ಪರಿವೆಯಿಲ್ಲದ ತಲೆಹರಟೆ ಕುರ್ಕ ಸಂಜೆ ಹೊತ್ತಿಗೆ ಸರಿಯಾಗಿ ಆಗಮಿಸಿತು. ಆದರೆ ದಫೇದಾರನಿಗೆ ತನ್ನ ಸ್ಥಾನಮಾನದ ಗತ್ತು ಗೈರತ್ತುಗಳನ್ನೂ ಮೀರಿ ಯಾಕೋ ಕೈ ನಡುಕ ಶುರುವಾಯ್ತು. ಗುರಿಹಿಡಿಯಲು ಅಸಾಧ್ಯವಾದಷ್ಟು ನಡುಗುತ್ತಿದ್ದ ಕೈಗಳಿಂದಲೇ ಹೇಗೋ ಬಂದೂಕನ್ನೆತ್ತಿ ಕುರ್ಕದ ದಿಕ್ಕಿನಲ್ಲಿ ಗುಂಡು ಹಾರಿಸಿಯೇಬಿಟ್ಟ ದಫೇದಾರ್ ಮಹಾಶಯ! ಆತನ ಗುರಿ ತಪ್ಪಿದ ಗುಂಡು ಕುರ್ಕನ ಎಡ ಹಿಂಗಾಲಿಗೆ ಗಾಯ ಮಾಡಿತು.

ಕುರ್ಕ ಒಂದು ಸಾರಿ ಬಲವಾಗಿ ಘರ್ಜಿಸಿ ನೆಗೆದು ಓಡಿಹೋಯ್ತು. ಮರ ಇಳಿಯಲು ಹೆದರಿ ನಡುಗುತ್ತಾ ರಾತ್ರಿಯೆಲ್ಲಾ ಅಲ್ಲೇ ಕುಳಿತಿದ್ದ ದಫೇದಾರ ಬೆಳಗಾಗುತ್ತಲೂ ಮರ ಇಳಿದು ಚಿರತೆಗೆ ಗುಂಡು ಹೊಡೆದ ಜಾಗದಲ್ಲಿ ರಕ್ತ ಏನಾದರೂ ಬಿದ್ದಿದೆಯೆ ಎಂದು ಪರೀಕ್ಷಿಸಿದ. ಅವನಿಗೆ ಏನೂ ಕಾಣಲಿಲ್ಲ. ಅಂತೂ ಆ ಅವಿಧೇಯ ಕುರ್ಕಕ್ಕೆ ಸರಿಯಾಗಿ ಹೆದರಿಸಿ ಬುದ್ಧಿ ಕಲಿಸಿದ್ದೇನೆಂದುಕೊಂಡು ನೇರ ಮನೆ ದಾರಿ ಹಿಡಿದ.

ಇದು ನಡೆದದ್ದು ಶುಕ್ರವಾರ ರಾತ್ರಿ. ಶನಿವಾರ ಏನೂ ಸಂಭವಿಸಲಿಲ್ಲ. ಆದರೆ ಭಾನುವಾರ ಊರವರೆಲ್ಲಾ ಮೊಲದ ಶಿಕಾರಿ ಇಟ್ಟುಕೊಂಡಿದ್ದರು. ಗಜಗಟ್ಟಲೆ ಉದ್ದದ ಮೊಲದ ಬಲೆಗಳನ್ನು ಅವರು ಆ ಕಾಡಿನ ಸುತ್ತ ಹಾಕಿ ಅಲ್ಲಿಂದ ಮೊಲಗಳನ್ನು ಓಡಿಸುತ್ತಿದ್ದರು. ಅವು ಇವರ ಬಲೆಗಳಿಗೆ ತೊಡಕಿಕೊಂಡಾಗ ಸಮೀಪದಲ್ಲೇ ನಿಂತಿರುತ್ತಿದ್ದ ಶಿಕಾರಿಯವರು ದೊಣ್ಣೆಯಿಂದ ಹೊಡೆದು ಅವುಗಳನ್ನು ಕೊಲ್ಲುತ್ತಿದ್ದರು. ಇದು ಅವರ ಮೊಲದ ಶಿಕಾರಿಯ ಕ್ರಮ. ನೂರು ಜನ ಹಳ್ಳಿಯವರೂ ಅನೇಕ ನಾಯಿಗಳೂ ಸೇರಿ ಶಿಕಾರಿ ಆರಂಭಿಸಿದರು. ಎಲ್ಲ ಅವರ ಪ್ಲಾನಿನ ಪ್ರಕಾರವೇ ನಡೆದು ಹಲವಾರು ಮೊಲಗಳೂ ಸಿಕ್ಕಿದುವು. ಆದರೆ ಸರ್ವೆ ಮರಗಳಿದ್ದ ಕಾಡನ್ನು ಸೋವಲು ಶುರುಮಾಡಿದೊಡನೆಯೇ ತೊಂದರೆ ಪ್ರಾರಂಭವಾಯ್ತು. ಆ ಪೊದೆಗಳೊಳಗಿಂದ ನಿರುಪದ್ರವಿ ಮೊಲ ಎದ್ದು ಓಡುವುದರ ಬದಲು ಒಂದು ಕುರ್ಕ ಕಡು ಕೋಪದಿಂದ ಎದ್ದು ಹಲ್ಲು ಮಸೆಯುತ್ತಾ ಅವರ ಮೇಲೇ ಜಿಗಿಯಿತು. ಬರೀ ದೊಣ್ಣೆಗಳಿಂದ ಸನ್ನದ್ಧರಾಗಿದ್ದ ಹಳ್ಳಿಯವರು ಇಂಥ ಮುಂಗೋಪಿ ಚಿರತೆ ಶಿಕಾರಿಗೆ ತಯ್ಯಾರಾಗಿರಲಿಲ್ಲ. ಅವರೆಲ್ಲಾ ಅಯ್ಯಯ್ಯೋ ಎಂದು ಬೊಬ್ಬೆ ಹೊಡೆಯುತ್ತಾ ದಿಕ್ಕಾಪಾಲಾಗಿ ಓಡಿದರು. ಆದರೆ ಅಷ್ಟರೊಳಗೇ ಆ ಕುರ್ಕ ಆರು ಜನಕ್ಕೆ ಬಲವಾಗಿ ಕಚ್ಚಿ ಪರಚಿ ಪ್ರಾಣಾಂತಿಕ ಗಾಯ ಮಾಡಿತು.

ಅಲ್ಲಿಗೆ ಸಮೀಪದಲ್ಲೇ ಹುಗ್ಗಿ ಫ್ಲಿಂಕೆಟ್ ಎಂಬ ನನ್ನ ಮಿತ್ರರೊಬ್ಬರು ಇದ್ದರು. ಅವರ ಕಾಲದಲ್ಲಿ ಅವರು ಸುಮಾರು ಹುಲಿಗಳನ್ನೂ ಚಿರತೆಗಳನ್ನೂ ಹೊಡೆದು ಒಳ್ಳೆಯ ಶಿಕಾರಿದಾರರೆಂದು ಹೆಸರಾಗಿದ್ದವರು. ಇಲ್ಲಿಂದ ಓಡಿದ ಹಳ್ಳಿಯ ಶಿಕಾರಿದಾರರೆಲ್ಲಾ ನೇರವಾಗಿ ಫ್ಲಿಂಕೆಟ್ ಬಳಿಗೆ ಹೋಗಿ 'ಹಳ್ಳಿಗೆ ಒಂದು ನರಭಕ್ಷಕನೇ ಬಂದಿದೆ, ಕಾಪಾಡಿ' ಎಂದು ಮೊರೆಯಿಟ್ಟರು. ಆಗಿನ್ನೂ ಫ್ಲಿಂಕೆಟ್ ಪೈಜಾಮ ಹಾಕಿಕೊಂಡು ಹಾಸಿಗೆಯಲ್ಲೇ ಇದ್ದರು. ಅವರಿಗೆ ದಫೇದಾರನ ಶಿಕಾರಿಯ ಸಾಹಸದ ವಿಷಯ ಏನೂ ಗೊತ್ತಿರಲಿಲ್ಲ. ಬೆಂಗಳೂರಿಗೆ ಏಳು ಮೈಲು ಹತ್ತಿರಕ್ಕೇ ಕುರ್ಕ ಬರುತ್ತದೆಂದು ಅವರು ನಂಬಿರಲಿಲ್ಲ. ಅವರು ಅವರ ಬಳಿಯಿದ್ದ ಜೋಡುನಳಿಗೆ ತೋಟಾ ಕೋವಿಗೆ ಎರಡು ಎಲ್ಜಿ ಗುಂಡುಗಳನ್ನು ತುಂಬಿಕೊಂಡು ಹೆಗಲಿಗೇರಿಸಿ ಆ ಹಳ್ಳಿಯವರ ಜೊತೆ, 'ನಡೆದ್ದಾದರೂ ಏನೆಂದು ನೋಡುವಾ' ಎಂದು ಹೊರಟರು.

ಸರ್ವೆ ತೋಪಿನ ಸಮೀಪದಲ್ಲೇ ಗಾಯಗೊಂಡಿದ್ದ ಆರು ಜನರೂ ಬಿದ್ದುಕೊಂಡು ನರಳುತ್ತಿದ್ದುದನ್ನು ನೋಡಿದ ಮೇಲೆ ಅವರಿಗೆ ಹಳ್ಳಿಯವರು ಹೇಳುತ್ತಿದ್ದುದು ನಿಜ ಎಂದು ಗೊತ್ತಾಯ್ತು. ಫ್ಲಿಂಕೆಟ್ ಸರ್ವೆಮರದ ತೋಪಿನಲ್ಲಿ ಹಳ್ಳಿಗರೊಡನೆ ಹೋಗುತ್ತಿರಬೇಕಾದರೆ ಆ ಕುರ್ಕ ಒಂದು ಪೊದೆಯಿಂದ ಇನ್ನೊಂದು ಪೊದೆಗೆ ನುಸುಳಿದ್ದು ಕಾಣಿಸಿತು. ಅವರು ಕೂಡಲೇ ತಮ್ಮ ಬಂದೂಕಿನ ಎರಡು ತೋಟಾಗಳನ್ನೂ ಅದರತ್ತ ಹಾರಿಸಿದರು. ಕುರ್ಕ ನೆಲಕ್ಕೊರಗಿತು. ಇಲ್ಲಿ ನುರಿತ ಶಿಕಾರಿದಾರರಾದ ಫ್ಲಿಂಕೆಟ್ ಬಹುದೊಡ್ಡ ತಪ್ಪು ಮಾಡಿದರು. ಅದಕ್ಕೆ ಅವರು ಅನಂತರ ತಮ್ಮ ಪ್ರಾಣವನ್ನೇ ತೆರಬೇಕಾಯ್ತು. ಅವರು ಬಿದ್ದ ಕುರ್ಕವನ್ನು ನೋಡಿ ಅದು ಸತ್ತಿದೆಯೆಂದು ಭಾವಿಸಿ ಸಮೀಪಕ್ಕೆ ಹೋಗಿ ಕಾಲಿನಿಂದ ಅದರ ತಲೆಯನ್ನು ತಳ್ಳಿದರು. ಯಾವಾಗ ಅದನ್ನು ಅಲ್ಲಾಡಿಸಿದರೋ ಸತ್ತಂತೆ ಬಿದ್ದಿದ್ದ ಕುರ್ಕ ಕೂಡಲೇ ಜೀವ ತಳೆದೆದ್ದು ಅವರ ಬಲಭುಜವನ್ನು ಕಚ್ಚಿ ಕೊಡಕಿತು. ಫ್ಲಿಂಕೆಟ್ಟರ ಕೋವಿ ಕೈತಪ್ಪಿ ದೂರ ಬಿತ್ತು. ಅನಂತರ ಕುರ್ಕ ಅವರ ಮೈಯ್ಯೆಲ್ಲಾ ಸಿಗಿದುಹೋಗುವಂತೆ ಪರಚಿದ್ದಲ್ಲದೆ ಅವರೊಡನಿದ್ದ ನಾಲ್ಕು ಜನ ಹಳ್ಳಿಯವರಿಗೂ ಸರಿಯಾಗಿ ಕಚ್ಚಿ ಬೆನ್ನಿನ ಚರ್ಮ ಹಿಸಿದುಹಾಕಿತು. ಅಲ್ಲಿನ ಗೊಂದಲಮಯ ದೃಶ್ಯ ಎಷ್ಟು ಭಯಂಕರವಾಗಿದ್ದಿರಬಹುದೆಂದು ಊಹಿಸಿಕೊಳ್ಳಿ. ಫ್ಲಿಂಕೆಟ್ಟರನ್ನೂ ಇತರ ಗಾಯಾಳುಗಳನ್ನೂ ಹೊರಗೆ ತರಲು ಹಳ್ಳಿಯವರಿಗೆ ಒಂದು ಗಂಟೆಗೂ ಹೆಚ್ಚುಕಾಲ ಹಿಡಿಯಿತು. ನಾನು ಎರಡು

ದಿನಗಳ ನಂತರ ಅಲ್ಲಿ ಇವರ ಗಾಯಗಳಿಂದ ಸುರಿದಿದ್ದ ರಕ್ತ ಗಡ್ಡೆಗಡ್ಡೆಯಾಗಿ ಬಿದ್ದಿದ್ದ ಪ್ರಮಾಣ ನೋಡಿ ಗಾಬರಿಯಾದೆ. ಅಷ್ಟೊಂದು ಅವರಿಗೆಲ್ಲಾ ರಕ್ತಸ್ರಾವವಾಗಿತ್ತು. ಫ್ಲಿಂಕೆಟ್ಟರ ಹೆಂಡತಿ ಹೇಗೋ ಎದೆಗುಂದದೆ ಅವರನ್ನು ಬೆಂಗಳೂರಿನ ಬೌರಿಂಗ್ ಆಸ್ಪತ್ರೆಗೆ ತಂದು ಸೇರಿಸಿದ್ದರು. ಮಿಕ್ಕವರನ್ನೆಲ್ಲಾ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಿದ್ದರು. ಫ್ಲಿಂಕೆಟ್ಟರ ಬಲಗೈ ಹರಿದು ಜೋತಾಡುತ್ತಿದ್ದುದರಿಂದ ಅದನ್ನು ಕತ್ತರಿಸಿ ತೆಗೆದಿದ್ದರು. ರಕ್ತವನ್ನೂ ಕೊಡಲಾಗುತ್ತಿತ್ತು. ಆದರೂ ಆ ಭಯಂಕರ ಗಾಯಗಳಿಂದ ಚೇತರಿಸಿಕೊಳ್ಳಲಾರದೆ ಫ್ಲಿಂಕೆಟ್ ಮಾರನೆ ದಿನ ಸತ್ತುಹೋದರು. ಇದೆಲ್ಲಾ ಭಾನುವಾರ ಬೆಳಗ್ಗೆಯ ಅವಾಂತರ.

ಅದೇ ಸಾಯಂಕಾಲ ಕುರ್ಕ ರಕ್ತ ಸುರಿಸುತ್ತಾ ಅರಣ್ಯ ಇಲಾಖೆಯ ತೋಪಿನೊಳಗೆ ಹೋಗುವುದನ್ನು ಕುರಿ ಕಾಯುವವನೊಬ್ಬ ನೋಡಿ ಜಾಲಹಳ್ಳಿಯಲ್ಲಿದ್ದ ಇಬ್ಬರು ಅಣ್ಣತಮ್ಮಂದಿರಿಗೆ ಹೇಳಿದ. ಅಣ್ಣನ ಹೆಸರು ಕಲ್ಲಯ್ಯ. ತಮ್ಮನ ಹೆಸರು ಪಾಪಯ್ಯ. ಈ ಇಬ್ಬರ ಹತ್ತಿರವೂ ಒಂದು ತೋಟಾ ಕೋವಿ ಮತ್ತು ಒಂದು ಕೇಪಿನ ಕೋವಿ ಇತ್ತು.

ಈ ಇಬ್ಬರು ಧೈರ್ಯಸ್ತರೂ ಕುರಿ ಕಾಯುವವನಿಂದ ಸಮಾಚಾರ ಕೇಳಿದ ಮೇಲೆ ಕುರ್ಕ ಹೊಡೆಯುವ ನಿರ್ಧಾರ ಮಾಡಿದರು. ಇಬ್ಬರೂ ತಮ್ಮ ತಮ್ಮ ಕೋವಿ ಲೋಡು ಮಾಡಿಕೊಂಡು ಅರಣ್ಯ ಇಲಾಖೆಯವರ ಪ್ಲಾಂಟೇಶನ್ ಕಡೆಗೆ ಹೊರಟರು. ಅಕ್ಕಪಕ್ಕದಲ್ಲೇ ಹೋಗುತ್ತಿದ್ದ ಅವರಿಗೆ ಆ ಲಂಟಾನದ ಜಿಗ್ಗಿನಲ್ಲಿ ಒಟ್ಟಾಗಿ ಹೋಗಲಸಾಧ್ಯವಾಯ್ತು. ಕೊಂಚ ದೂರದೂರದಲ್ಲಿ ಅವರಿಬ್ಬರೂ ಮುಂದುವರಿಯುತ್ತಿದ್ದಾಗ ಅಲ್ಲೇ ಅಡಗಿ ಕುಳಿತಿದ್ದ ಕುರ್ಕ ಅಣ್ಣನ ಮೇಲೆ ಎಷ್ಟು ಭಯಂಕರವಾಗಿ ದಾಳಿ ಮಾಡಿತೆಂದರೆ, ಅರಚುತ್ತಾ ಕೆಳಗೆ ಬಿದ್ದ ಅಣ್ಣನ ಕೈಯ್ಯಿಂದ ತೋಟಾಕೋವಿ ಹಾರಿ ಹಲವಾರು ಗಜ ದೂರ ಬಿತ್ತು. ಅವನ ತಮ್ಮ ಕೇಪಿನಕೋವಿ ತಗೊಂಡು ಅವನ ಸಹಾಯಕ್ಕೆ ಬರುವುದರೊಳಗೇ ಕುರ್ಕ ಅವನ ಜನನೇಂದ್ರಿಯಗಳನ್ನೆಲ್ಲಾ ಹಿಸಿದು ಬೀಜ ಹೊರಬಂದು ಜೋತಾಡುತ್ತಿತ್ತು. ಕುರ್ಕ ಅವನ ಮೇಲೆ ಕುಳಿತು ಅವನ ಎದೆಯನ್ನು ಸಿಗಿಯುತ್ತಿತ್ತು. ತಮ್ಮ ಕುರ್ಕಕ್ಕೆ ಗುಂಡು ಹೊಡೆದ. ಅದು ಹೇಗೆ ಅಣ್ಣನಿಗೆ ಆ ಹೊಡೆತ ಬೀಳಲಿಲ್ಲವೋ ದೇವರಿಗೇ ಗೊತ್ತು.

ಪಾಪಯ್ಯನ ಹೊಡೆತದಿಂದ ಚಿರತೆಗೆ ಮತ್ತಷ್ಟು ಗಾಯಗಳಾದವು. ಆದರೆ ಕೇಪಿನ ಕೋವಿಯ ಈಡಾದ್ದರಿಂದ ಅದು ಪ್ರಾಣಾಂತಿಕ ಪೆಟ್ಟಾಗಿರಲಿಲ್ಲ. ಅದು ಪಾಪಯ್ಯನನ್ನು ನೋಡಿದ್ದೇ ಸರ್ಪದಂತೆ ಭುಸುಗುಡುತ್ತಾ ಅವನ ಮೇಲೆ ಎರಗಿತು. ಪಾಪಯ್ಯ ಮುಖ ಅಡಿಯಾಗಿ ಉರುಳಿ ಬಿದ್ದ. ಕುರ್ಕ ಅವನ ಅಂಡನ್ನು ಎಲೆ ಅಡಿಕೆಯಂತೆ ಜಗಿದು ಮೂಳೆ ಹೊರಕಾಣುವಂತೆ ಹಿಸಿಯಿತು. ಭುಜದ ಹತ್ತಿರ ಕೈ ಕತ್ತರಿಸಿಹೋಗುವಂತೆ ಕಚ್ಚಿ ಅಲುಬಿತು. ರಕ್ತಸ್ರಾವಕ್ಕೆ ಇಬ್ಬರೂ ಪ್ರಜ್ಞೆ ಕಳೆದುಕೊಂಡರು. ಅಲ್ಲಿಂದ ಕುರ್ಕ ಓಡಿ ಕಣ್ಮರೆಯಾಯ್ತು.

ನಾನು ಬೆಂಗಳೂರಿನ ಮನೆಯಲ್ಲಿ ಊಟ ಮಾಡುತ್ತಾ ಕುಳಿತಿದ್ದೆ. ಆಗೊಬ್ಬ ಬೆವರು ಸುರಿಸಿಕೊಂಡು ಓಡೋಡಿ ಬಂದು ನನಗೆ ಈ ವರ್ತಮಾನ ಕೊಟ್ಟ. ನಾನು ಊಟ ಎರಡೇ ತುತ್ತಿನಲ್ಲಿ ಮುಗಿಸಿ ನನ್ನ ರೈಫಲನ್ನೂ ತೋಟಾ ಕೋವಿ ಮತ್ತು ಟಾರ್ಚನ್ನೂ ತೆಗೆದುಕೊಂಡು ಕಾರಿಗೆ ನೆಗೆದೆ. ಅಷ್ಟರಲ್ಲಿ ಆಗಿನ ಬೆಂಗಳೂರು ಪೋಲೀಸ್ ಮುಖ್ಯಸ್ಥರಾಗಿದ್ದ ಎರಿಕ್ ನ್ಯೂಕೊಂಬ್ ನನ್ನನ್ನು ನೋಡಲು ಬರುತ್ತಾ ಇದ್ದವರು ನನಗೆ ಗೇಟಿನ ಬಳಿ ಸಿಕ್ಕರು. ನಾನು ಅವರಿಗೆ ಹೀಗೆ ತುರ್ತಾಗಿ ಹೊರಟಿರುವುದನ್ನು ತಿಳಿಸಿ ಇನ್ನೊಮ್ಮೆ ಸಿಕ್ಕುತ್ತೇನೆಂದು ಹೇಳಿದೆ. ಈ ಸಮಾಚಾರ ಕೇಳಿದ ಅವರು ತಾನೂ ನನ್ನೊಡನೆ ಬರುತ್ತೇನೆಂದು ಹೇಳಿ ಕಾರಿನೊಳಗೆ ಕುಳಿತರು. ಜಾಲಹಳ್ಳಿಗೆ ಹೋಗುವುದೇನೂ ನಮಗೆ ಹೆಚ್ಚು ಸಮಯ ಹಿಡಿಯಲಿಲ್ಲ. ಆದರೆ ಅಲ್ಲಿಗೆ ಹೋಗುವುದರೊಳಗೆ ಅಲ್ಲಿ ಆ ಹಳ್ಳಿಯ ಮತ್ತು ದಾರಿಯಲ್ಲಿ ಅಡ್ಡಾಡುವ ನೂರಾರು ಜನ ಸೇರಿದ್ದರು. ಚಿರತೆಯೆಲ್ಲಾದರೂ ಹೊರಬಂದು ತಮ್ಮ ಮೇಲೆ ನುಗ್ಗೀತೆಂಬ ಭಯದಿಂದ ಅಷ್ಟು ಜನರೂ ಅಲ್ಲಿದ್ದ ಎಲ್ಲ ಮರಗಳನ್ನೂ ಹತ್ತಿದ್ದರು. ಅವರ ಭಾರದಿಂದ ಅನೇಕ ಮರಗಳು ಆಗಲೇ ನೆಲಮಟ್ಟದವರೆಗೆ ಬಾಗಿ ತೂಗುತ್ತಿದ್ದುವು. ಕೆಲವಂತೂ ಇನ್ನೇನು ಮುರಿದು ಬೀಳುವ ಹಂತದಲ್ಲಿದ್ದುವು. ಕುರ್ಕ ಏನಾದರೂ ಹೊರಬಂದು ದಾಳಿ ಮಾಡಿದರೆ ಕೋವಿಯನ್ನು ಎತ್ತಕಡೆಗೂ ಹಾರಿಸಲು ಸಾಧ್ಯವಿರದಷ್ಟು ಜನಜಂಗುಳಿ ಅಲ್ಲಿ ಜಮಾಯಿಸಿತ್ತು. ಇಷ್ಟೆಲ್ಲ ಜನ ಇದ್ದರೂ ಅಲ್ಲಿ ಪ್ಲಾಂಟೇಷನ್ ಒಳಗಡೆ ಗಾಯಗೊಂಡು ಬಿದ್ದು ಆರ್ತ ಸ್ವರದಲ್ಲಿ ಸಹಾಯಕ್ಕೆ ಕೂಗುತ್ತಿದ್ದ ಕಲ್ಲಯ್ಯನನ್ನೂ ಪಾಪಯ್ಯನನ್ನೂ ಹೊರತರಲು ಯಾರೂ ಧೈರ್ಯ ಮಾಡಿರಲಿಲ್ಲ.

ನಾವು ಮಾಡಿದ ಮೊದಲ ಕೆಲಸವೆಂದರೆ ಅಲ್ಲಿದ್ದ ನಾಲ್ಕಾರು ಜನ ಧೈರ್ಯಸ್ಥರನ್ನು ಕರೆದುಕೊಂಡು ಆ ಪ್ಲಾಂಟೇಶನ್ ಒಳಗೆ ಹೋದೆವು. ಅವರಿದ್ದ ಸ್ಥಿತಿ ನೋಡಿ ನಾನು ಹೆದರಿ ಹೋದೆ. ಪಾಪಯ್ಯನ ಎದೆ ಗಾಯಗಳಿಂದ

ಅವನ ಉಸಿರು ಗುಳ್ಳೆ ಗುಳ್ಳೆಯಾಗಿ ಹೊರಡುತ್ತಿತ್ತು. ಅವರಿಬ್ಬರನ್ನೂ ನಾನು ಕಾರಿಗೆ ಹಾಕಿಕೊಂಡು ಇನ್ನೇನು ಆಸ್ಪತ್ರೆಗೆ ಹೊರಡಲಿದ್ದೆ. ಅಷ್ಟರಲ್ಲಿ ಸುಮಾರು ಹನ್ನೆರಡು ಅಡಿ ಉದ್ದದ ಭರ್ಜಿ ಹಿಡಿದುಕೊಂಡಿದ್ದವನೊಬ್ಬ ಕಾರಿನತ್ತ ಓಡೋಡಿ ಬಂದ. ಈಗತಾನೇ ಕುರ್ಕ ಅಲ್ಲೇ ಪೊದೆಯೊಂದರಲ್ಲಿದ್ದಿದ್ದು ಇನ್ನೊಂದು ಪೊದೆಯೊಳಕ್ಕೆ ನುಗ್ಗಿದ್ದನ್ನು ನೋಡಿದೆನೆಂದೂ, ನಾನು ಈಗಿಂದೀಗಲೇ ಅವನನ್ನು ಹಿಂಬಾಲಿಸಿದರೆ ಅದನ್ನು ಸುಲಭದಲ್ಲಿ ಹೊಡೆಯಬಹುದೆಂದೂ ಹೇಳಿದ.

ಅವನ ಮಾತು ಕೇಳಿದ ನಾನು ನಿಜವಾಗಿಯೂ ತಪ್ಪು ಮಾಡಿ ಕರ್ತವ್ಯಚ್ಯುತನಾದೆ ಎಂದು ಈಗ ಅನ್ನಿಸುತ್ತದೆ. ಆ ಗಾಯಾಳುಗಳನ್ನು ಮೊದಲು ಆಸ್ಪತ್ರೆಗೆ ತಲುಪಿಸುವುದು ನೋಡದೆ ಅವನ ಮಾತಿಗೆ ಓಗೊಟ್ಟು ಸುಲಭದಲ್ಲಿ ಸಿಕ್ಕಲಿರುವ ಶಿಕಾರಿಯನ್ನು ಬಿಡಬಾರದೆಂದು ನಿರ್ಧರಿಸಿ ರೈಫಲ್ ಕೈಗೆ ತೆಗೆದುಕೊಂಡೆ. ಈ ಬೇಜವಾಬ್ದಾರಿತನವೇ ಮುಂದಾದ ಅನಾಹುತಕ್ಕೆಲ್ಲಾ ಕಾರಣವೆಂದು ನನಗೆನ್ನಿಸುತ್ತದೆ. ನಾನು ಕಾರು ಇಳಿದಿದ್ದನ್ನು ಕಂಡು ನ್ಯೂಕೂಂಬ್ ಸಹ ನನ್ನೊಡನೆ ಬರುತ್ತೇನೆಂದು ತೋಟಾ ಕೋವಿಯನ್ನು ಕೈಗೆ ತಗೊಂಡರು. ಆ ಉದ್ದ ಈಟಿಯ ಧೀರ ನಮ್ಮನ್ನು ತಾನು ಚಿರತೆ ಕಂಡ ಜಾಗದ ಕಡೆಗೆ ಕರೆದೊಯ್ದ.

ನಾವು ಅವನು ಚಿರತೆಯನ್ನು ಕಂಡೆನೆಂದು ಹೇಳಿದ ಪೊದೆಯ ಕಡೆಗೆ ತುಂಬ ಜಾಗರೂಕತೆಯಿಂದ ಮುಂದುವರಿದೆವು. ಒಬ್ಬರು ಹಾರಿಸಿದ ಗುಂಡು ಇನ್ನೊಬ್ಬರಿಗೆ ತಾಗದಿರುವಂತೆ ಸಾಕಷ್ಟು ಜಾಗರೂಕತೆ ವಹಿಸಿದ್ದೆವು. ಸುಮಾರು ನೂರು ಗಜ ದೂರಕ್ಕೆ ಪೊದೆಯ ಅತ್ತಿತ್ತ ನಿಂತು, ಕುರ್ಕ ಯಾವ ಕಡೆಯಿಂದಲೂ ಕಣ್ತಪ್ಪಿಸಿ ಓಡದಂತೆ ನೋಡಿಕೊಳ್ಳುತ್ತಾ ಆ ಭರ್ಜಿ ಸರದಾರನಿಗೆ ಆ ಪೊದೆಗೆ ಕಲ್ಲೆಸೆದು ಗಲಾಟೆ ಮಾಡು ಎಂದು ಹೇಳಿದೆವು. ಅವನು ಅಲ್ಲಿದ್ದ ಕಲ್ಲುಗಳನ್ನೆಲ್ಲಾ ಆ ಪೊದೆಗೆ ಎಸೆಯುತ್ತಾ ಸುಮಾರು ಅರ್ಧಗಂಟೆ ಸಾಕಷ್ಟು ಗಲಾಟೆ ಮಾಡಿದ. ಅಷ್ಟು ಗಲಾಟೆ ಮಾಡಿದರೂ ಅಲ್ಲಿ ನಮಗೇನೂ ಸದ್ದು ಕೇಳಲಿಲ್ಲ ಮತ್ತು ಎಂಥದೂ ಕಣ್ಣಿಗೆ ಕಾಣಲಿಲ್ಲ. ಅಷ್ಟರಲ್ಲಿ ಪೊದೆಯ ಆಕಡೆ ನಿಂತಿದ್ದ ನ್ಯೂಕೂಂಬ್ ತಮಗೆ ಈ ಕಡೆಯಿಂದ ಪೊದೆಯ ಕೆಳಭಾಗವೆಲ್ಲಾ ಸಂಪೂರ್ಣ ಕಾಣುತ್ತಿದೆಯೆಂದೂ, ಅಲ್ಲಿ ಯಾವ ಪ್ರಾಣಿಯೂ ಕಾಣುತ್ತಿಲ್ಲವೆಂದು ಕೂಗಿ ಹೇಳಿದರು.

ಅಷ್ಟು ಹೊತ್ತಿಗೆ ಅಲ್ಲಿದ್ದ ಕೆಲವರಲ್ಲಿ ಒಂದಿಬ್ಬರು ಧೈರ್ಯಶಾಲಿಗಳು ನಮ್ಮನ್ನು ಕೂಡಿಕೊಂಡಿದ್ದರು. ಅವರಲ್ಲೊಬ್ಬ ಒಂದು ಕಂತ್ರಿ ನಾಯನ್ನು ಕರೆದುಕೊಂಡು ಬಂದಿದ್ದ. ಅದನ್ನು ಕರೆದುಕೊಂಡು ಬಂದು ಅದು ಚಿರತೆ ವಾಸನೆ ಹಿಡಿದು ಅದರ ಜಾಡನ್ನು ಪತ್ತೆ ಮಾಡುತ್ತದೆಯೇ ನೋಡೋಣ ಎಂದು ಛೂ ಬಿಟ್ಟೆವು. ಆದರೆ ಅದು ಏನು ಮಾಡಿದರೂ ಮುಂದುವರಿಯಲು ಪ್ರತಿಭಟಿಸಿ ನಮ್ಮ ಹಿಂದೆಯೇ ನಿಂತುಕೊಂಡು ಕಂಡಕಂಡ ಪೊದೆಗಳಿಗೆಲ್ಲಾ ಬಗುಳತೊಡಗಿತು.

ನನಗೆ ಅಲ್ಲಿ ಕುರ್ಕ ಇರುವುದರ ಬಗ್ಗೆಯೇ ಸಂದೇಹ ಅನುಮಾನಗಳುಂಟಾದುವು. ಇಷ್ಟರಲ್ಲಿ ನ್ಯೂಕೂಂಬ್ ತಾಳ್ಮೆ ಕಳೆದುಕೊಂಡು ಅಜಾಗರೂಕರಾಗಿ ಅಲ್ಲಿದ್ದ ಎಲ್ಲಾ ಪೊದೆಗಳಿಗೂ ಕಲ್ಲೆಸೆಯುತ್ತಾ ಮುಂದುವರಿದರು. ಅಲ್ಲಿದ್ದ ಒಂದು ದಟ್ಟವಾದ ಲಂಟಾನದ ಪೊದೆಗೂ ಒಂದೆರಡು ಕಲ್ಲೆಸೆದರು. ಏನೂ ಹೊರಹೊರಡಲಿಲ್ಲ. ಮತ್ತೆ ಅವರು ಕಲ್ಲೆಸೆಯಲು ಬಗ್ಗಿದಾಗ ಅವರ ಕೈಗೆ ಒಂದು ಬಹು ದೊಡ್ಡ ಕಲ್ಲೇ ಸಿಕ್ಕಿತು. ಮೇಲೆತ್ತಲೂ ಕಷ್ಟವಾಗಿದ್ದ ಅದನ್ನು ಹೇಗೋ ಮಾಡಿ ಎತ್ತಿ ಆ ಪೊದರಿಗೆ ಎಸೆದರು. ಅದು ಧಿಡೀರನೆ ಪೊದೆಯೊಳಗೆ ಬಿದ್ದಿದ್ದೇ ತಡ ಅದರೊಳಗಿಂದ ಕುರ್ಕನ ಆರ್ಭಟ ಕೇಳಿಸಿತು. ನಾವು ಕಣ್ಣೆವೆ ಮುಚ್ಚುವುದರೊಳಗೆ ಅದರೊಳಗಿದ್ದ ಕುರ್ಕ ಒಂದು ಹಳದಿಯ ಮಿಂಚಿನಂತೆ ನ್ಯೂಕೂಂಬ್ ಮೇಲೆರಗಿತು. ಅದರ ವೇಗ ಹೇಗಿತ್ತೆಂದರೆ ನ್ಯೂಕೂಂಬ್ ಕೋವಿಯೆತ್ತಲೂ ಸಾಧ್ಯವಾಗದೆ ಹೆದರಿ ಕೋವಿ ಹೇಗಿತ್ತೋ ಹಾಗೆ ಬಿಲ್ಲೆಳೆದರು. ಗುಂಡು ನೇರ ನೆಲಕ್ಕೆ ಬಡಿಯಿತು. ಅಷ್ಟರೊಳಗೆ ಕುರ್ಕ ಅವರ ಮೈಮೇಲಿದ್ದು ಇಬ್ಬರೂ ಉರುಳಿ ನೆಲಕ್ಕೆ ಬಿದ್ದರು. ಅಲ್ಲಿ ಎದೆ ಮಟ್ಟದವರೆಗೆ ಹುಲ್ಲು ಬೆಳೆದಿತ್ತು. ಇಬ್ಬರೂ ತಬ್ಬಿಕೊಂಡು ಉರುಳಾಡುತ್ತಿರುವುದು ನಮಗೆ ಅಸ್ಪಷ್ಟವಾಗಿ ಮಾತ್ರ ಕಾಣುತ್ತಿತ್ತು.

ಅದರೊಡನೆ ಜಟಾಪಟಿಯಲ್ಲಿ ನ್ಯೂಕೂಂಬ್ ನನಗೆ ಕುರ್ಕ ಹೊಡೆಯುವಂತೆ ಕೂಗುತ್ತಿದ್ದುದು ಕೇಳಿಸುತ್ತಿತ್ತು. ಅದಕ್ಕಿಂತ ಗಟ್ಟಿಯಾಗಿ ಕುರ್ಕ ಗರ್ಜಿಸುತ್ತಿತ್ತು. ನಾನು ಮುನ್ನುಗ್ಗಿದೆ. ಆದರೆ ನನ್ನ ಬಳಿ ಇದ್ದುದು ರೈಫಲ್. ಅದರಲ್ಲಿ ಕುರ್ಕನಿಗೇ ನಾನು ಗುಂಡು ಹೊಡೆದರೂ ಅದು ಅದನ್ನು ತೂರಿ ನ್ಯೂಕೂಂಬ್‌ರನ್ನೂ ಮುಗಿಸುತ್ತದೆಂದು ಚೆನ್ನಾಗಿ ಗೊತ್ತಿತ್ತು. ಆದ್ದರಿಂದ ನಾನು ಹೊಡೆಯದೆ ಹಿಂದೆಗೆದೆ. ಅನಂತರ ಆ ಕುರ್ಕ ನ್ಯೂಕೂಂಬರನ್ನು ಬಿಟ್ಟು ಮತ್ತೊಂದು ಲಂಟಾನದ ಉಡುಕಲಿನೊಳಗೆ ನುಗ್ಗಿತು. ಅದು ಜಿಗಿದು ಹೋಗುತ್ತಿರಬೇಕಾದರೆ ನಾನು ಅದರತ್ತ ಗುಂಡು ಹಾರಿಸಿದೆ. ಆದರೆ ಅದು ಆ ಕುರ್ಕನ ಕುತ್ತಿಗೆಯ ಹತ್ತಿರ ಸವರಿಕೊಂಡು ಹೋಯ್ತೆಂದು ಅನಂತರ ನನಗೆ ಗೊತ್ತಾಯ್ತು. ಈ ಜಟಾಪಟಿಯಲ್ಲಿ

ನ್ಯೂಕೊಂಬ್ ಕತೆ ಮುಗಿಯಿತೆಂದೇ ನಾನು ತಿಳಿದೆ. ಆದರೆ ಕುರ್ಕ ಅತ್ತ ಹೋದಕೂಡಲೇ ನ್ಯೂಕೊಂಬ್ ಪುಟನೆಗೆದಂತೆ ಜಿಗಿದೆದ್ದು ಕುರ್ಕ ಹೋದ ವಿರುದ್ಧ ದಿಕ್ಕಿನಲ್ಲಿ ಪ್ರಚಂಡ ವೇಗದಲ್ಲಿ ಓಡತೊಡಗಿದ್ದನ್ನು ನೋಡಿ ನನಗೆ ಸಮಾಧಾನವಾಯ್ತು. ಅವರಿಗೆ ಪ್ರಾಣಾಂತಿಕ ಗಾಯಗಳೇನೂ ಆಗದಿದ್ದರೂ ಕುರ್ಕ ಅವರ ಪಕ್ಕೆಯನ್ನು ಸರಿಯಾಗಿ ಕಚ್ಚಿ ಒಂದು ಪಕ್ಕೆಲುಬನ್ನು ಮುರಿದಿತ್ತು. ಈ ಗೊಂದಲಗಳಿಂದೆಲ್ಲ ಬೇಸತ್ತ ನಾನು ಶಿಕಾರಿಯನ್ನು ಕೈದು ಮಾಡಿ ನ್ಯೂಕೊಂಬರನ್ನೂ, ಮಿಕ್ಕಿಬ್ಬರು ಗಾಯಾಳುಗಳನ್ನೂ ಕರೆದುಕೊಂಡು ಬೌರಿಂಗ್ ಆಸ್ಪತ್ರೆ ಕಡೆಗೆ ಹೊರಟೆ. ನನ್ನ ಕಾರಿನ ಸೀಟುಗಳೆಲ್ಲಾ ಮನುಷ್ಯರ ರಕ್ತದಿಂದ ನೆನೆದು ಹೋಗಿತ್ತು. ಆ ದಿನ ಸಾಯಂಕಾಲವೆಲ್ಲಾ ಪೋಲೀಸರಿಗೆ ಸ್ಟೇಟ್‌ಮೆಂಟ್ ಕೊಡುವುದು, ಅವರ ಅನಗತ್ಯ ಮತ್ತು ಅಸಂಖ್ಯ ಪ್ರಶ್ನೆಗಳಿಗೆಲ್ಲಾ ಉತ್ತರ ಕೊಡುವುದು ಇದರಲ್ಲೇ ಕಳೆದುಹೋಯ್ತು.

ಬಡಪಾಯಿ ಕಲ್ಲಯ್ಯ ಆ ದಿನ ರಾತ್ರಿಯೇ ಭೀಕರ ಗಾಯಗಳಿಂದ ಅಸು ನೀಗಿದ. ಪಾಪಯ್ಯನೇನೋ ಉಳಿದುಕೊಂಡ. ಆದರೆ ಅವನಿಗೆ ಗುಣಮುಖನಾಗಲು ಒಂದು ತಿಂಗಳು ಬೇಕಾಯ್ತು. ನ್ಯೂಕೊಂಬ್ ಬಲವಾದ ಕಟ್ಟುಮಸ್ತಾದ ಆಸಾಮಿಯಾದ್ದರಿಂದ ಹದಿನೈದು ದಿನದೊಳಗೇ ಚೇತರಿಸಿಕೊಂಡರು.

ಮಾರನೆ ದಿನ, ಎಂದರೆ ಮಂಗಳವಾರ ಅಲ್ಲಿಗೆ ಅನೇಕ ಮಹಮಹಾ ಶಿಕಾರಿದಾರರು ಆಗಮಿಸಿದರು. ಆ ಗಾಯದ ಕುರ್ಕ ಹೊಡೆಯಲು ಅಲ್ಲೆಲ್ಲಾ ವಿವರವಾಗಿ ಹುಡುಕಾಡಿದರು. ಆದರೆ ಅವರ್‍ಯಾರಿಗೂ ಆ ಕುರ್ಕನ ಒಂದು ಸುಳಿವನ್ನೂ ಪತ್ತೆ ಮಾಡಲಾಗಲಿಲ್ಲ. ಆ ಕುರ್ಕ ಅಕ್ಷರಶಃ ಅಲ್ಲಿಂದ ಅಂತರ್ಧಾನವಾಗಿತ್ತು. ಅವರೆಲ್ಲಾ ನಿರಾಶರಾಗಿ ಹಿಂದಿರುಗಿದರು.

ಆದರೆ ಅದೇ ದಿನ ಸಾಯಂಕಾಲ ಆ ಕುರ್ಕ ಒಬ್ಬ ಕುರಿ ಕಾಯುವವನನ್ನು ಕಚ್ಚಿ ಕೊಂದುಹಾಕಿತು. ಅವನು ಕುರಿ ಕಾಯುತ್ತ ಅರಿಯದೆ ಅದು ಅವಿತಿದ್ದ ಪೊದೆಗೆ ತೀರಾ ಸಮೀಪಕ್ಕೆ ಹೋಗಿದ್ದ. ಕುರ್ಕ ಒಂದೇ ಏಟಿಗೆ ಅವನ ಕುತ್ತಿಗೆಯನ್ನೇ ಕಚ್ಚಿ ಮುರಿದಿದ್ದರಿಂದ ಅಲ್ಲಿ ಯಾರನ್ನೂ ಆಸ್ಪತ್ರೆಗೆ ಒಯ್ಯಬೇಕಾದ ಪ್ರಮೇಯವೇ ಬರಲಿಲ್ಲ. ಈ ಜಾಗ ಅದು ಹಿಂದಿನ ದಿನ ಹಲವಾರು ಜನರನ್ನು ಕಚ್ಚಿ ಗಲಾಟೆ ಮಾಡಿದ ಜಾಗದಿಂದ ಸುಮಾರು ಒಂದು ಮೈಲಿಗಿಂತಲೂ ಹೆಚ್ಚು ದೂರ ಇತ್ತು.

ಬುಧವಾರ ಬೆಳಗ್ಗೆ ನಾನು ಆ ಕುರಿ ಕಾಯುವವನನ್ನು ಕುರ್ಕ ಕೊಂದ ಜಾಗಕ್ಕೆ ಹೋದೆ. ಆ ಚಿರತೆ ಎತ್ತ ಹೋಗಿದೆ ಎಂದು ಜಾಡನ್ನು ಪತ್ತೆ ಮಾಡಲು ತುಂಬಾ ಪ್ರಯತ್ನಿಸಿದೆ. ದಟ್ಟವಾಗಿ ಆಳೆತ್ತರ ಹುಲ್ಲು ಇದ್ದುದರಿಂದ ಹೆಜ್ಜೆ ಗುರುತುಗಳಿಂದಂತೂ ಅದನ್ನು ಕಂಡುಹಿಡಿಯುವುದು ಸಾಧ್ಯವಿರಲಿಲ್ಲ. ಇನ್ನು ಅದರ ಗಾಯಗಳಲ್ಲಿ ರಕ್ತ ಹೆಪ್ಪುಗಟ್ಟಿದ್ದರಿಂದಲೋ ಏನೋ ರಕ್ತದ ಜಾಡು ಸಿಕ್ಕಲಿಲ್ಲ. ನಾನು ಅಲ್ಲಿಂದ ಮುಂದೆ ಯಾವ ನಿಶ್ಚಿತ ಉದ್ದೇಶವೂ ಇಲ್ಲದೆ ಮುಂದುವರಿದೆ. ನೆಲ ಅಲ್ಲಿನ ಕೊರಕಲೊಂದರ ಕಡೆಗೆ ಇಳಿಜಾರಾಗಿತ್ತು. ಅತ್ತ ಮುಂದುವರಿದಂತೆಲ್ಲ ಪೊದೆಗಳು ದಟ್ಟವಾಗುತ್ತಾ ಹೋದುವು. ಆ ಕೊರಕಲಿನಲ್ಲಿ ಬಹು ದಟ್ಟವಾಗಿ ಲಂಟಾನದ ಜಿಗ್ಗು ಬೆಳೆದುಕೊಂಡಿತ್ತು. ನಾನು ಅದರತ್ತ ಕೆಲವು ಹೆಜ್ಜೆಗಳನ್ನಿಟ್ಟಿದ್ದೆನಷ್ಟೆ. ಅಷ್ಟರಲ್ಲಿ ಅದರೊಳಗೆ ಅವಿತಿದ್ದ ಕುರ್ಕನಿಗೆ ನನ್ನ ಸದ್ದು ಕೇಳಿಸಿರಬೇಕು. ಅಥವಾ ಕಣ್ಣಿಗೇ ಕಂಡಿತೋ ಏನೋ. ಪೊದೆಗಳೊಳಗಿಂದಲೇ ಅದು ನನ್ನತ್ತ ಭೀಕರವಾಗಿ ಗುರುಗುಟ್ಟಲಾರಂಭಿಸಿತು. ಅದು ಗುರುಗಟ್ಟಿದ್ದು ನನ್ನ ಅದೃಷ್ಟವೆಂದೇ ಹೇಳಬೇಕು. ಏಕೆಂದರೆ ಅನ್ಯಮನಸ್ಕನಾಗಿ ಯೋಚಿಸುತ್ತಾ ಹೋಗುತ್ತಿದ್ದ ನನ್ನ ಮೇಲೆ ಅದು ಮಿಂಚಿನ ವೇಗದಲ್ಲಿ ಎರಗಿದ್ದರೆ ನಾನು ಈ ಕಥೆ ನಿಮಗೆ ಹೇಳಲು ಖಂಡಿತ ಬದುಕಿರುತ್ತಿರಲಿಲ್ಲ. ಇನ್ನು ಮುಂದುವರಿಯುವುದು ಆ ದಟ್ಟ ಲಂಟಾನದ ಜಿಗ್ಗಿನಲ್ಲಿ ಆತ್ಮಹತ್ಯೆಗೆ ಸಮ ಎಂದು ನಿರ್ಧರಿಸಿ ಅಲ್ಲೇ ನಿಂತೆ. ನನಗಂತೂ ಆ ಕುರ್ಕನಿಗೆ ಈಗಾಗಲೇ ಆಗಿರುವ ಗಾಯಗಳಿಂದ ಅದು ಒಂದೆರಡು ದಿನಗಳಿಗಿಂತ ಹೆಚ್ಚಿಗೆ ಬದುಕಿ ಉಳಿಯುವುದು ಅಸಂಭವವೆಂದು ಸ್ಪಷ್ಟವಾಗಿ ಗೊತ್ತಿತ್ತು. ಮುಂದೇನು ನಡೆದೀತೆಂದು ಸುಮ್ಮನೆ ಕಾದು ನೋಡೋಣ ಎಂದು ನಿಂತೇ ಇದ್ದೆ.

ಅಷ್ಟರಲ್ಲಿ ಇನ್ನೊಂದು ಅಧ್ವಾನ ನಡೆಯಿತು. ಬೆಂಗಳೂರಿನ ಪೋಲೀಸ್ ಇಲಾಖೆ ಆ ಪುಂಡು ಕುರ್ಕನನ್ನು ಮಟ್ಟಹಾಕಿ ಬರಲು ರಿಜರ್ವ್ ಪೋಲೀಸರಿಗೆ ವಹಿಸಿದ್ದರು. ಮುವ್ವತ್ತು ಜನ ಆಯುಧಧಾರಿ ಪೋಲೀಸರನ್ನು ಒಂದು ಪೋಲೀಸ್ ವ್ಯಾನಿನೊಳಗೆ ತುಂಬಿ ಕಳಿಸಿದ್ದರು. ವ್ಯಾನಿಗೆ ಹಿಂದೆ ಮುಂದೆಲ್ಲಾ ತಂತಿ ಜಾಲರಿ ಹೊಡೆದಿದ್ದರಿಂದ ಚಿರತೆ ಅವರ ಮೇಲೆ ಹಠಾತ್ ದಾಳಿ ಮಾಡುವ ಸಂಭವ ಇರಲಿಲ್ಲ. ವಾಸ್ತವವಾಗಿ ಜನಗಳ ದೊಂಬಿ ಸಂದರ್ಭದಲ್ಲಿ ಅವರು ಎಸೆಯುವ ಕಲ್ಲು ಇಟ್ಟಿಗೆ ಇತ್ಯಾದಿಗಳು ಒಳಗಿರುವವರಿಗೆ ಬೀಳದಿರಲೆಂದು ಈ ಜಾಲರಿ ಹೊಡೆದಿರುತ್ತಾರೆ. ಆ ಕಿಟಕಿಗಳ ನಡುವಿರುವ ವೃತ್ತಾಕಾರದ ರಂಧ್ರದಿಂದ ಪೋಲೀಸರು ಕೋವಿ ನಳಿಗೆ ತೂರಿಸಿ ಜನಗಳ ಮೇಲೆ ಗೋಲಿಬಾರ್ ಮಾಡುತ್ತಾರೆ. ಆ ವ್ಯಾನಿನ ಡ್ರೈವರಿಗೆ ಅಲ್ಲೆಲ್ಲಾ ಚೆನ್ನಾಗಿ ಗಸ್ತು ತಿರುಗಿಸಿ ಕುರ್ಕ ಅಲ್ಲೆಲ್ಲಾದರೂ ಕಂಡರೆ ವ್ಯಾನಿನೊಳಗಿಂದಲೇ ಹೊಡೆಯಿರೆಂದು ಸೂಚನೆ ಕೊಟ್ಟಿದ್ದರು. ಯಾವ ನಿಶ್ಚಿತ ಮಾರ್ಗಗಳೂ ಇಲ್ಲದ ಆ ಜಾಗದಲ್ಲಿ ಡ್ರೈವರ್ ಎಲ್ಲೆಲ್ಲಿ ವ್ಯಾನನ್ನು

ಒಯ್ಯಬಹುದೋ ಅಲ್ಲಲ್ಲಿಗೆಲ್ಲಾ ಬಿಟ್ಟ. ಒಳಗಿದ್ದ ಆಯುಧಧಾರಿಗಳು ಕಿಟಕಿಯ ತೂತಿನಿಂದಲೇ ಅತ್ತಿತ್ತು ಹುಡುಕು ನೋಟ ಬೀರುತ್ತಾ ಒಳಗೆ ಕ್ಷೇಮವಾಗಿ ಕುಳಿತಿದ್ದರು. ಆದರೆ ಆ ದಟ್ಟ ಹುಲ್ಲಿನ ಬಯಲಿನಲ್ಲಿ ಹೋಗುತ್ತಿರಬೇಕಾದರೆ ಅಲ್ಲಿದ್ದ ದೊಡ್ಡ ಗುಂಡಿಯೊಳಕ್ಕೆ ವ್ಯಾನಿನ ಹಿಂದುಗಡೆ ಚಕ್ರಗಳೆರಡೂ ಇಳಿದ ಸಿಕ್ಕಿಕೊಂಡುವು. ಮುವ್ವತ್ತು ಜನ ಪೋಲೀಸರೂ ಆ ವ್ಯಾನಿನೊಳಗೆ ಬಂಧಿಗಳಾಗಿ ಒಂದೇ ಸಮ ಸಹಾಯಕ್ಕೆ ಕೂಗತೊಡಗಿದರು. ಅಲ್ಲೊಂದು ಭೀಕರ ನರಭಕ್ಷಕ ಪ್ರಾಣಿ ತಿರುಗುತ್ತಿರುವುದರಿಂದ ಇಳಿದ ಕೂಡಲೇ ಅದು ತಮ್ಮನ್ನು ಕೊಲ್ಲುತ್ತದೆಂದು ತಿಳಿದು ಅವರ್‍ಯಾರೂ ಕೆಳಗಿಳಿದು ಚಕ್ರಕ್ಕೆ ಕೈ ಹಚ್ಚಲು ಧೈರ್ಯ ಮಾಡಲಿಲ್ಲ.

ಇವರ ಅರಚಾಟ ಕೇಳಿದ ನಾನು ಏನೋ ಅನಾಹುತ ಸಂಭವಿಸಿರಬೇಕೆಂದು ಜನ ಕರೆದುಕೊಂಡು ಅಲ್ಲಿಗೆ ಹೋದೆ. ನಾವು ಹೋಗಿ ಧೈರ್ಯ ಹೇಳಿ ಆ ಕಾನೂನು ಪಾಲಕರನ್ನು ಸೆರೆಯಿಂದ ಬಿಡಿಸಿದ ಮೇಲೆ, ಹೇಗೋ ಮಾಡಿ ಆ ವ್ಯಾನನ್ನು ಮೇಲೆತ್ತಿ ಅವರನ್ನೆಲ್ಲಾ ಕ್ಷೇಮವಾಗಿ ಅವರ ಬ್ಯಾರಕ್ಕುಗಳಿಗೆ ಕಳಿಸಿದೆವು. ಅವರೆಲ್ಲಾ ಮುಖ ಉಳಿಸಿಕೊಳ್ಳಲು ಅಲ್ಲೇ ಸಮೀಪದಲ್ಲಿದ್ದ ಪೊದೆಯೊಂದನ್ನು ತೋರಿಸಿ ಇದರಿಂದ ಭೀಕರ ಘರ್ಜನೆಗಳು ಕೇಳಿ ಬಂದುವೆಂದೂ, ಅದಕ್ಕೋಸ್ಕರ ನಾವು ವ್ಯಾನಿನಿಂದ ಕೆಳಗಿಳಿಯದೆ ಸಹಾಯಕ್ಕಾಗಿ ಕೂಗಬೇಕಾಯ್ತೆಂದೂ ಢೋಂಗಿ ಹೊಡೆದರು. ನಾನು ಅವರು ನಿರ್ಗಮಿಸಿದರೆ ಸಾಕೆಂದು ಅವರ ಹೇಳಿಕೆಯನ್ನು ನಂಬಿದವನಂತೆ ನಟಿಸಿದೆ.

ಆಮೇಲಿನ ದಿನಗಳಲ್ಲಿ ನಾನು ಆ ಜಾಗಕ್ಕೆ ದಿನಾ ಬೆಳಗ್ಗೆ ಏಳು ಗಂಟೆಗೇ ಹೋಗಿ ಸಂಜೆ ಕತ್ತಲಾಗುವವರೆಗೂ ಸುತ್ತಾಡುತ್ತಾ ಕಾಲ ಕಳೆಯುತ್ತಿದ್ದೆ. ನಾನು ಅಲ್ಲಿಗೆ ಹೋಗಲಾರಂಭಿಸಿದ ಆರನೆ ದಿನ ದೂರದಲ್ಲಿ ರಣಹದ್ದುಗಳು ಆಕಾಶದಲ್ಲಿ ಸುತ್ತುತ್ತಾ ಇರುವುದು ಕಂಡಿತು. ಬೈನಾಕ್ಯುಲರ್‌ನಲ್ಲಿ ಅದನ್ನು ಪರೀಕ್ಷಿಸಿದಾಗ ಕೆಲವು ದಿನಗಳ ಹಿಂದೆ ಪೊದೆಗಳೊಳಗಿಂದ ಕುರ್ಕ ಗುರುಗುಟ್ಟಿದ ಜಾಗಕ್ಕೆ ಸಮೀಪದಲ್ಲೇ ಅವು ಹಾರಾಡುತ್ತಿರುವಂತೆ ಕಂಡಿತು. ನನಗೆ ಅಲ್ಲಿ ಇಲ್ಲಾ ಸತ್ತ ಕುರ್ಕ ಇರಬೇಕು, ಅಥವಾ ಕುರ್ಕನೇ ಏನನ್ನೋ ಸಾಯಿಸಿರಬೇಕು ಎಂದೆನ್ನಿಸಿತು. ನಿಧಾನವಾಗಿ ಅತ್ಯಂತ ಜಾಗರೂಕತೆಯಿಂದ ಅತ್ತ ನಡೆದೆ. ಯಾವ ಕ್ಷಣದಲ್ಲಾದರೂ ಕುರ್ಕ ಗುರುಗುಟ್ಟುತ್ತಾ ನನ್ನತ್ತ ನುಗ್ಗಬಹುದೆಂದು ನಿರೀಕ್ಷಿಸಿ ಮುನ್ನಡೆಯುತ್ತಿದ್ದೆ. ಆದರೆ ಅಂಥ ಯಾವ ಸದ್ದೂ ಕೇಳಲಿಲ್ಲ. ನಾನು ಲಂಟಾನದೊಳಗೆ ಮೈಕೈಯೆಲ್ಲಾ ತರಚಿಕೊಂಡು ಮುನ್ನುಗ್ಗುತ್ತಿರಬೇಕಾದರೆ ಐವತ್ತು ಗಜ ದೂರದಿಂದ ನನ್ನ ಸಾಮೀಪ್ಯವನ್ನು ಅರಿತ ನಾಲ್ಕು ರಣಹದ್ದುಗಳು ನೆಲದಿಂದ ಮೇಲೆ ಹಾರಿದುವು. ಅಲ್ಲಿಗೆ ಹೋದಾಗ ಅಲ್ಲೊಂದು ಚಿಕ್ಕ ನೀರಿನ ಗುಂಡಿಯ ಪಕ್ಕ ಆ ಕುರ್ಕ ಕೊನೆಯುಸುರೆಳೆದಿತ್ತು.

ಆ ಧೈರ್ಯಶಾಲಿ ದುರದೃಷ್ಟದ ಕುರ್ಕ ಅದಕ್ಕಾದ ಗಾಯಗಳಿಂದ ತುಂಬಾ ನೊಂದು ನರಳಿರಬೇಕು. ಗಾಯದ ನೋವು ಹಸಿವು ಬಾಯಾರಿಕೆಗಳಿಂದ ಅದು ನಿಜಕ್ಕೂ ಸುಸ್ತಾಗಿ ನೀರಿನ ಗುಂಡಿಯತ್ತ ತೆವಳಿತ್ತು. ನೀರು ಕುಡಿಯುವ ಕ್ರಿಯೆಯಲ್ಲಿಯೇ ಅದಕ್ಕೆ ಇನ್ನಷ್ಟು ರಕ್ತಸ್ರಾವವಾಗಿ ಆ ಗುಂಡಿಯ ದಡದಲ್ಲೇ ರಕ್ತ ಕಕ್ಕಿಕೊಂಡಿತ್ತು. ಆ ಗುಂಡಿಯ ನೀರು ಸಹ ಅರ್ಧಂಬರ್ಧ ರಕ್ತಮಿಶ್ರಿತವಾಗಿತ್ತು. ಹದ್ದುಗಳು ಆಗತಾನೆ ಅದನ್ನು ಕಂಡುಕೊಂಡಿದ್ದುವೆಂದು ಕಾಣುತ್ತದೆ. ಅದರ ಶರೀರಕ್ಕಾಗಲೀ ಚರ್ಮಕ್ಕಾಗಲೀ ಗುಂಡೇಟುಗಳನ್ನು ಬಿಟ್ಟರೆ ಬೇರಾವ ರೀತಿಯ ಜಖಂ ಆಗಿರಲಿಲ್ಲ.

ನಾನು ಕೂಡಲೇ ಜಾಲಹಳ್ಳಿಗೆ ಹೋಗಿ ಜನ ಕರೆದುಕೊಂಡು ಬಂದು ಅದನ್ನು ಹೊರಿಸಿ ಕಾರಿಗೆ ಹಾಕಿಸಿದೆ. ಅಲ್ಲಿಂದ ನೇರ ಯಶವಂತಪುರ ಪೋಲೀಸ್ ಠಾಣೆಗೆ ಹೋದೆ. ಅದು ಸತ್ತಿದ್ದರ ಅಧಿಕೃತ ವರದಿ ಮಾಡಬೇಕಾಗಿತ್ತು. ಅಲ್ಲಿ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಬರಬೇಕೆಂದು ನನ್ನನ್ನು ಮೂರು ಗಂಟೆಗಳ ಕಾಲ ಕೊಳೆಹಾಕಿದರು. ಹೆಚ್ಚುಕಾಲ ತಡೆದರೆ ಕುರ್ಕದ ಶರೀರ ಕೊಳೆಯಲಾರಂಭಿಸಿ ಚರ್ಮ ಹಾಳಾಗುತ್ತದೆಂಬ ನನ್ನ ಮನವಿಗೆ ಅವರು ಕಿವಿಗೊಡಲೇ ಇಲ್ಲ. ಕೊಟ್ಟಕೊನೆಗೆ ಅವರೆಲ್ಲಾ ಮಹಜರ್‌ಗಳೂ ಮುಗಿದ ನಂತರ ಅದನ್ನೊಯ್ಯಬಹುದೆಂದು ನನಗೆ ಹೇಳಿದರು.

ಅದರ ಚರ್ಮ ಸುಲಿಯುತ್ತಾ ನನಗೆ ನಡೆದುದೆಲ್ಲದರ ವಿವರಗಳನ್ನು ಒರೆ ಹಚ್ಚಲು ಅವಕಾಶವಾಯ್ತು. ಠೊಣಪ ದಫೇದಾರ ಹೊಡೆದ ಗುಂಡು ಅದರ ಕಾಲಿನಲ್ಲಿ ಗಾಯ ಮಾಡಿ ಆಗಲೇ ಅದರಲ್ಲಿ ಹುಳುಗಳಾಗಿದ್ದುವು. ಪ್ಲಿಂಕೆಟ್ ಹೊಡೆದ ಗುಂಡು ಅದರ ಹೊಟ್ಟೆ ತೂತು ಮಾಡಿ ಆಚೆ ಹೋಗಿತ್ತು. ಅವರ ಎಲ್ಜಿ ತೋಟಾದ ಕಡುಕೊಂದು ಅದರ ತಲೆಯೊಳಗೆ ನಾಟಿತ್ತು. ಅದು ಆಳವಾದ ಗಾಯ ಮಾಡದಿದ್ದರೂ ಮೂರ್ಛೆ ತಪ್ಪಿದಂತೆ ಅದು ಬೀಳಲು ಇದೇ ಕಾರಣ. ಸತ್ತಿತೆಂದು ತಿಳಿದು ಪ್ಲಿಂಕೆಟ್ ಅದರ ಬಳಿಗೆ ಹೋಗಿ ತಮ್ಮ ಪ್ರಾಣವನ್ನೇ ದಂಡ ತೆರಬೇಕಾಯ್ತು. ಪಾಪಯ್ಯ ಹೊಡೆದ ಗುಂಡುಗಳು ಅದರ ತೊಡೆಯ ಬಳಿ ನಾಟಿದ್ದುವು. ಅವೂ ಸಹ ತಕ್ಷಣ ಪ್ರಾಣ ಹೋಗುವಂಥ ಗಾಯಗಳಾಗಿರಲಿಲ್ಲ. ನಾನು ಅದು ಓಡಿ ಹೋಗುತ್ತಿರಬೇಕಾದರೆ ಹೊಡೆದ ಗುಂಡಂತೂ ನಿಷ್ಪ್ರಯೋಜಕವಾಗಿತ್ತು. ಅದು ಕುತ್ತಿಗೆಯ ಬಳಿ ಚರ್ಮವನ್ನು ಸುಮ್ಮನೆ

ಸವರಿಕೊಂಡು ಹೋಗಿತ್ತು. ನಾನು ಅದರ ಚರ್ಮವನ್ನು ಕೋರ್ಟಿಗೆ ಸಹ ಹಾಜರುಪಡಿಸಬೇಕಾಯ್ತು. ಸತ್ತ ಕಲ್ಲಯ್ಯನ ಕುಟುಂಬಕ್ಕೆ ಕೋರ್ಟ್ ಮುಖಾಂತರ ಪರಿಹಾರ ಕೊಡಿಸಬೇಕಾಗಿ ಬಂದಿದ್ದರಿಂದ ಇದೆಲ್ಲದರ ಅಗತ್ಯ ಬಂತು.

ಎರಡನೇ ಮಹಾಯುದ್ಧದ ಕಾಲದಲ್ಲಿ ಜಾಲಹಳ್ಳಿ ಸಂಪೂರ್ಣ ಬದಲಾವಣೆಯಾಯ್ತು. ಅಲ್ಲಿದ್ದ ಅರಣ್ಯ ಇಲಾಖೆಯ ತೋಪುಗಳನ್ನೆಲ್ಲಾ ನೆಲಸಮ ಮಾಡಿ ನೂರಾರು ಕಟ್ಟಡಗಳೆದ್ದುವು. ಅಲ್ಲಿ ಇಟಲಿ ಬರ್ಮಾಗಳಿಂದೆಲ್ಲ ಸೆರೆ ಹಿಡಿದು ತಂದ ಯುದ್ಧ ಖೈದಿಗಳನ್ನಿಡಲು ದೊಡ್ಡ ದೊಡ್ಡ ಜೇಲುಗಳನ್ನು ನಿರ್ಮಾಣ ಮಾಡಿದರು. ಅಲ್ಲೆಲ್ಲಾ ಒಂದು ಕಾಲದಲ್ಲಿ ಕುರ್ಕ ಚಿರತೆಗಳು ಓಡಾಡಿಕೊಂಡಿದ್ದುವೆ ಎಂದು ಜನ ಅಚ್ಚರಿಪಡುವಷ್ಟು ಜಾಲಹಳ್ಳಿ ಬದಲಾಯಿಸಿಹೋಯ್ತು.

ಆದರೆ ಅದಕ್ಕೆ ಸಾಕ್ಷಿಯಾಗಿ ಇನ್ನೂ ಆ ಕುರ್ಕನ ಚರ್ಮ ನನ್ನ ಮನೆಯಲ್ಲಿದೆ. ಅಷ್ಟೊಂದು ಗಾಯಗಳಿದ್ದೂ ಅಂಥ ಪ್ರತಿಕೂಲ ಪರಿಸ್ಥಿತಿಯಲ್ಲೂ ಜಗ್ಗದೆ ಹೋರಾಡಿ ಸರಿಯಾಗಿಯೇ ಮುಯ್ಯಿ ತೀರಿಸಿದ ಈ ಚಿಕ್ಕ ಪ್ರಾಣಿಯನ್ನು ನೆನೆಸಿಕೊಂಡರೆ ನನಗೆ ಹೆಮ್ಮೆಯಾಗುತ್ತದೆ.

**(ಆಕರ: ಕಾಡಿನ ಕತೆಗಳು ಭಾಗ ೩, ಜಾಲಹಳ್ಳಿಯ ಕುರ್ಕ, ಪುಸ್ತಕ ಪ್ರಕಾಶನ, ಮೈಸೂರು)**

## ೩. ಮುಖಾಮುಖಿ

– ಕೆ.ವಿ. ತಿರುಮಲೇಶ್

೧

ಪುಷ್ಟವಾದ ಒಂದು ಬೆಕ್ಕು ನನ್ನ ಮನೆಯ
ಡ್ರಾಯಿಂಗ್ ರೂಮಿನಲ್ಲಿ ಬಂದು ನನ್ನನ್ನು ಕಂಡು
ಹಠಾತ್ತನೆ ನಿಂತಿತ್ತು. ಅಲ್ಲಿ ಅದು ನನ್ನನ್ನು ನಿರೀಕ್ಷಿಸಿರಲಾರದು.
ಇಲ್ಲ, ಸೋಮವಾರ ಎಲ್ಲರೂ ಅವರವರ ಆಫೀಸಿಗೆ
ಹೋಗಿರುವ ಅಪರಾಹ್ನವಂತೂ ಖಂಡಿತ ಇಲ್ಲ.
ತುಸು ಅಸಮಾಧಾನದಿಂದ ನನ್ನ ಕಡೆ ನೋಡಿತು.
ನಮ್ಮ ಕಣ್ಣುಗಳು ಪರಸ್ಪರ ನೆಟ್ಟು ಯಾರು ಮೊದಲು
ಮುಖ ತಿರುಗಿಸುವುದು ಎಂಬ ಒಂದು ವಿಧದ
ಅಘೋಷಿತ ಯುದ್ಧದಲ್ಲಿ ಇಬ್ಬರೂ ತೊಡಗಿದೆವು.
ಒಂದು ಬೆಕ್ಕಿನ ಕಣ್ಣುಗಳು ಇಷ್ಟು ನಿಶ್ಚಲವಾಗಿರುತ್ತವೆ
ಎಂದು ನನಗೆ ಗೊತ್ತಿರಲಿಲ್ಲ.

೨

ಸೆಟೆದ ಬಾಲ, ನಿಮಿರಿದ ಕೂದಲು, ಊರಿದ ಕಾಲುಗುರು–
ಒಟ್ಟಾರೆ ಹೂಡಿದ ಬಿಲ್ಲಿನಂತಿರುವ ಬೆಕ್ಕು
ಆಕ್ರಮಿಸಿತ್ತೀಗ ನನ್ನ ಇಡೀ ದೃಷ್ಟಿ ಪರಿಧಿಯನ್ನು–
ದಾರಿ ತಪ್ಪಿದಂತೆ ನಾನು ಚರಿತ್ರಪೂರ್ವ ಭೂಖಂಡಗಳಲ್ಲಿ
ಬಿದ್ದಂತೆ ಅಪರಿಚಿತ ಸಮುದ್ರಗಳಲ್ಲಿ. ಆದರೂ
ಎವೆಯಿಕ್ಕಲಿಲ್ಲ ನಾನು. ಎವೆಯಿಕ್ಕಲಿಲ್ಲ ಬೆಕ್ಕು.
ಮನುಷ್ಯ ಮತ್ತು ಮೃಗಕ್ಕೆ ಮೂಲಭೂತವಾದ
ಯಾವದೋ ಸ್ಥಿತಿ ವಿಶೇಷದಲ್ಲಿ ನಿಂತಿತ್ತು ನನ್ನೆದುರು
ಬೆಕ್ಕಿಗೇ ಬೆಕ್ಕೇ ಛಲವಾಗಿ.
ಒಂದು ಬೆಕ್ಕಿನ ಕಣ್ಣುಗಳು ಇಷ್ಟು ಅನಾಥವಾಗಿರುತ್ತವೆ
ಎಂದು ನನಗೆ ಗೊತ್ತಿರಲಿಲ್ಲ.

೩

ಕೊನೆಗೂ ಸೋತಿದ್ದು ಮೃಗವೆ. ಅಥವಾ ಹಾಗೆಂದುಕೊಂಡುದು
ನಾನು. ಆ ಸೆಟೆದ ಮೈ ಕ್ರಮೇಣ ನುಸುಲಾಗಿ
ಹೊರಟ ಹೋಯಿತು ಬೆಕ್ಕು ಬೆಕ್ಕಿನ ಗತಿಯಲ್ಲಿ.
ಹೀಗೆ ನನ್ನ ದೃಷ್ಟಿ ಒಮ್ಮೆಲೆ ಖಾಲಿಯಾದಾಗ
ಅನ್ನಿಸಿತು ನನಗೆ – ಒಪ್ಪಿಕೊಳ್ಳಬಹುದಿತ್ತು ನಾನು
ಬೆಕ್ಕಿಗೆ ಬೆಕ್ಕಿನ ಸ್ವಾಭಿಮಾನ. ಅಷ್ಟಕ್ಕೂ ನಾನು ಗಳಿಸಿದ್ದೇನು?
ಗೆದ್ದರೆ ಗೆಲ್ಲಬೇಕು ಬಾಹುಬಾಲಿಯಂತೆ–
ಬಿಟ್ಟು ಕೊಡುವುದರಿಂದ.
ಒಂದು ಬೆಕ್ಕಿನ ಕಣ್ಣುಗಳಲ್ಲಿ ಇಷ್ಟೊಂದು ವಿಷಾದವಿರುತ್ತದೆ
ಎಂದು ನನಗೆ ಗೊತ್ತಿರಲಿಲ್ಲ.

**(ಆಕರ: ಶತಮಾನದ ಕಾವ್ಯ, ಸಂ: ಎಚ್.ಎಸ್. ವೆಂಕಟೇಶಮೂರ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೨೦೦೧)**

# ೪. ಸಿದ್ದನ ಬ್ಯಾಟೆ ಪುರಾಣ (ಓದು ಪತ್ಯ)

– ಕಲ್ಕುಳಿ ವಿಠಲ್ ಹೆಗಡೆ

ಮದ್ವೆಗೆ ಬಂದ ನೆಂಟ್ರೆಲ್ಲಾ ಒಬ್ಬೊಬ್ಬರಾಗಿ ದಿನ ಬಿಟ್ಟು ದಿನಾ ಖಾಲಿಯಾದ್ರು. ಎಲ್ಲರೂ ಹೋಗ್ತಿದ್ದಂಗೆ ಸೀತು ವಡೇರ ಮನೆ ಕೆಲ್ಸಕ್ಕೆ ಮಾಮೂಲಿಯಂತೆ ಹೊರಟ್ಲು. ಅಲ್ಲಿ ಎಲ್ಲರಿಗೂ ಕುತೂಹಲ, ಸೀತು ಮದ್ವೆಯಾದ ಮೇಲೆ ಹ್ಯಾಂಗೆ ಇರ್ತಾಳೆ ನೋಡ್ಬೇಕು ಅಂತ. ಆದ್ರೆ ಮದ್ವೆಯಾದ ಸೀತು ತಲೇಲಿ ಹೂವೊಂದನ್ನು ಮುಡ್ದಿದ್ದು ಬಿಟ್ರೆ ಮತ್ತೆ ಮಾಮೂಲಿಯಾಗಿಯೇ ಇದ್ಲು. ಸಿದ್ದ ವಡೇರ ಮನೆಗೆ ಹೊಸಬನಾಗಿದ್ದರಿಂದ ಎರಡು ದಿನ ಕೆಲ್ಸಕ್ಕೆ ಹೋಗಿರ್ಲಿಲ್ಲ. ಆಮೇಲೆ ಗೋವಿಂದನೇ ಖುದ್ದು ಹೇಳಿ ಕಳ್ಸಿದ ಅಂತಾದಮೇಲೆ ಕೆಲ್ಸಕ್ಕೆ ಹೋದ. ಸಿದ್ದ ಮರ ಹತ್ತುವುದ್ರಲ್ಲಿ ಘನಗಟಿಗನಾಗಿದ್ದರಿಂದ ಗೋವಿಂದ ಅವನಿಗೆ ಮರಗಸಿ ಮಾಡುವುದು, ಬೇಲಿ ಸಾಲ್ ಸವರುವುದು, ಕಟ್ಟಿಗೆಗೆ ಹರೆ ಜರ್ಸುವುದು ಇಂತಾ ಕೆಲಸಾನೆಲ್ಲಾ ಹುಡುಕಿ ಹುಡುಕಿ ಮಾಡಕ್ಕೆ ಹೇಳ್ತಿದ್ದ. ಸಿದ್ದಂಗೆ ಯಾವ ಕೆಲ್ಸ ಹೇಳಿದ್ರೂ ಅಚ್ಚುಕಟ್ಟಾಗಿ ಮಾಡ್ತಿದ್ದ. ಅವನೆಲ್ಲಾ ಕೆಲ್ಸ ಗೋವಿಂದಂಗೆ ಒಪ್ಪಿಗೆ ಆಯ್ತು. ಯಾರ್ ಕೈಯಲ್ಲೂ ಆಗ್ದಿದ್ದ ಕೆಲ್ಸನೆಲ್ಲಾ ನಾಲ್ಕೇ ದಿನದಲ್ಲಿ ಮಾಡಿ ಮುಗಿಸಿದ ಸಿದ್ದ ಗೋವಿಂದನ ಅಚ್ಚುಮೆಚ್ಚಿನವನಾದ. ಇದ್ರ ಜತೆಗೆ ಗೋವಿಂದನಿಗೆ ರಾತ್ರಿ ಶಿಕಾರಿ ಚಟ ಇದ್ದುದರಿಂದ ರಾತ್ರಿ ಶಿಕಾರಿಗೆ ಜೊತೆಗೊಂದು ಜನ ಬೇಕಾಗಿತ್ತು. ಸಿದ್ದನಿಗೆ ಶಿಕಾರಿ ಅಂದ್ರೆ ತವರು. ಹಂಗಾಗಿ ಬಹಳಬೇಗ ಕೆಲ್ಸ ಮಾಡ್ಸವ, ಮಾಡಂವ ಅನ್ನೋದಕ್ಕಿಂತ ಅವರಲ್ಲಿ ಸಲಿಗೆ ಬೆಳೆದು ಸಖ್ಯ ಉಂಟಾಗಿತ್ತು. ಅಲ್ಲಿಂದ ಕದ್ದಿಂಗ್ಳು ಬಂತೆಂದ್ರೆ ರಾತ್ರಿ ಶಿಕಾರಿ ಮಾಮೂಲಿ. ಮತ್ತೆ ಎಲ್ಲೇ ಶಿಕಾರಿ ವರ್ತಮಾನ ಬಂದ್ರೂ ಇವರಿಬ್ಬರ ಜೋಡಿ ಹಾಜರ್.

ಸಿದ್ದನಿಗೆ ಬಾಯಿ ಚಪಲ ಏರಿದಾಗಲೆಲ್ಲಾ ಗೋವಿಂದನಿಗೆ ಶಿಕಾರಿಗೆ ಪುಸಲಾಯಿಸುತ್ತಿದ್ದ. ಹೆರ್‌ಕಣೆ ಭತ್ತದ ಹಂದಿ, ಕೂಳಿ ಬೀಳಿನ ಕಬ್ಬೆಕ್ಕು, ಯಾವ ಯಾವ ಕಾಲದಲ್ಲಿ ಯಾವ ಯಾವ ಪ್ರಾಣಿಯ ಮಾಂಸ ಚೆನ್ನಾಗಿರುತ್ತದೆ, ಯಾವ ಯಾವ ಕಾಲದಲ್ಲಿ ಯಾವ ಮರ ಹಣ್ಣು ಬಿಡ್ತವೆ, ಹಣ್ಣಿಗೆ ಯಾವ ಯಾವ ಪ್ರಾಣಿ ಬರ್ತವೆ ಅಂತ ಲೆಕ್ಕಾಚಾರ ಇಟ್ಕೊಂಡು ಗೋವಿಂದಂಗೆ ಕಾಲಕಾಲಕ್ಕೆ ಗ್ಯಾಪ್ಕ ಮಾಡ್ತಿದ್ದ.

ವಡೇರ ತೋಟದ ಬರೆ(ದರೆ)ಯಲ್ಲಿ ಒಟ್ಟೊಟ್ಟಿಗೆ ಎರಡು ಬೈನೆ ಮರಗಳಿದ್ದವು. ಅವುನ್ನ ದರೆ ತುದಿ ಮರ ಅಂತ ಯಾರೂ ಬೈನೆ ಕಟ್ತಿರಲಿಲ್ಲ. ಬೈನೆ ಕಟ್ಟದೇ ಇದ್ರೆ ಅದರ ಹಿಂಗಾರ ಒಡೆದು, ಗೋಲಿಗಳನ್ನು ಹೆಣಿದಂತೆ ಬೈನೆ ಕಾಯಿಗಳು ಕಾಯಿಬಿಟ್ಟುಕೊಂಡು ಜೋಲಾಡುತ್ತಿರುತ್ತವೆ. ಬೈನೆ ಕಾಯಿಗಳು ಬೆಳೆದು ಕಪ್ಪು ದ್ರಾಕ್ಷಿಹಣ್ಣಿನಂತಾದಾಗ ಅದನ್ನು ತಿನ್ನಲು ಕಬ್ಬೆಕ್ಕು, ಹಾರುಬೆಕ್ಕು ಎಲ್ಲಾ ಬರ್ತವೆ. ಕಬ್ಬೆಕ್ಕುಗಳಿಗೆ ಕೂಳಿ ಹಣ್ಣು, ಬೈನೆ ಹಣ್ಣು ಅಂದ್ರೆ ಬಹಳ ಪ್ರಿಯ. ಒಂದಿನ 'ಮುಂದಿನ ಅಮಾವಾಸ್ಯೆ ದಿನ ಕಬ್ಬೆಕ್ಕು ಹೊಡೀಬೇಕಲ್ಲ ಗೋವಿಂದಯ್ಯ' ಎಂದ ಸಿದ್ದ. 'ಎಲ್ಲಿಗೆ ಬರ್ತವೆ ಕಬ್ಬೆಕ್ಕು ರಾತ್ರಿ ಹೋಗ್ಬೇಕು ಅಂದ್ರೆ ಬ್ಯಾಟರಿ ಶೆಲ್ ಬೇಕಲ್ಲ' ಅಂದ ಗೋವಿಂದ. ಅದಕ್ಕೆ ಸಿದ್ದ 'ದೂರ ಏನಿಲ್ಲ, ದರೆಖಂಡಿನ ತುದೀಲಿರೋ ಬೈನೆ ಹಣ್ಣಿಗೆ ಕಬ್ಬೆಕ್ಕು ಬರ್ತಾವೆ... ಒಂದ್ ಕೈ ನೋಡಾನ' ಅಂದ.

ಕಬ್ಬೆಕ್ಕು ಹಂದಿ ತರಾನೆ ಮೈಯೆಲ್ಲಾ ಕೊಬ್ಬು ತುಂಬಿಕೊಂಡಿರುವ ಪ್ರಾಣಿ. ಮೊಂಡು ಮುಖ, ಚೂಪು ಮೂತಿಯ ಬೆಕ್ಕಿನಂತ ಈ ಪ್ರಾಣಿಗೆ ಉದ್ದ ಬಾಲ. ಬಾಲದ ತುಂಬೆಲ್ಲಾ ದಪ್ಪ ರೋಮ. ಕಬ್ಬೆಕ್ಕು ಕೂಳಿ ಹಣ್ಣು ಆಗೋಕಾಲದಲ್ಲಿ ಎರಡು ಕೇಜಿ ಇರುವವು ಕೊಬ್ಬಿ ನಾಲ್ಕೈದು ಕೇಜಿ ತೂಗ್ತವೆ.

ಕಬ್ಬೆಕ್ಕಿನಂತಹ ನಿಶಾಚರಿ ಪ್ರಾಣಿಗಳಲ್ಲಿ ಹಾರುವ ಬೆಕ್ಕು ಅಂತ ಒಂದುಂಟು. ಅದು ಮರದಿಂದ ಮರಕ್ಕೆ ಐವತ್ತು – ನೂರು ಅಡಿ ಬಾವಲಿಯಂತೆ, ರೆಕ್ಕೆ ಬಡಿದುಕೊಂಡು ಕೆಳಮುಖವಾಗಿ ಹಾರುತ್ತವೆ. ಅದರ ಹಿಂದಿನ ಕಾಲು ಮತ್ತು ಮುಂದಿನ ಕಾಲಿನ ನಡುವೆ ರೆಕ್ಕೆ ಇರುತ್ತದೆ. ಅದನ್ನು ರೆಕ್ಕೆಯೆಂದು ಕರೆಯುವುದು ಸರಿಯಾಗುತ್ತೋ ಗೊತ್ತಿಲ್ಲ. ಯಾಕಂದ್ರೆ ಅದಕ್ಕೆ ಪುಕ್ಕ ಇಲ್ಲ. ಅದರ ರೆಕ್ಕೆ ಮನುಷ್ಯರು ಜರ್ಕಿನ್ ಹಾಕಿಕೊಂಡಂತೆ ಇರ್ತದೆ. ಹಾರುವಾಗ ಅದನ್ನು ಬಿಡಿಸಿಕೊಂಡು ಹಾರುಬೆಕ್ಕುಗಳು ಹಾರ್ತವೆ. ಇದೊಂದು ಹಾರುವ ಸಸ್ತನಿ. ಅದನ್ನು ತಿನ್ನಲು ಯಾರೂ ಅಷ್ಟಾಗಿ ಇಷ್ಟಪಡುವುದಿಲ್ಲ. ಯಾಕೆಂದರೆ ಅವುಗಳ ಮೈಯಲ್ಲಿ ನೆಟ್ಟಗೆ ಒಂದು ಕೇಜಿ ಮಾಂಸ ಇರುವುದಿಲ್ಲ. ಚರ್ಮ ಮಾತ್ರ ಮಕ್ಕಳಿಗೆ ಒಂದು ಜರ್ಕಿನ್ ಮಾಡಬಹುದಾದಷ್ಟು ಅಗಲ ಇರ್ತದೆ. ಹಾರೋಬೆಕ್ಕು ಹಾರೋ ಇಲಿ, ಹಾರೋಹಲ್ಲಿ, ಹಾರೋಹಾವು ನೆಲದ ಮೇಲೆ ಇರೋಹಂಗೆ ಅಂತರಾಟದಲ್ಲಿ ಮರದ ಮೇಲೆ ಇರ್ತವೆ. ಇವು ನವಿಲಿನಷ್ಟು ದೂರಹಾರಿದರೂ ಇವಕ್ಕೆ ಬಾವಲಿತರ ಮೇಲಕ್ಕೆ ಹಾರೋಕೆ ಆಗೋಲ್ಲ. ಅವು ಅಂತರಾಟದಿಂದ ಹಾರ್ತವೆ, ಆದ್ರೆ ಮೇಲಿಂದ ಕೆಳಕ್ಕೆ ಮಾತ್ರ. ಮರದಿಂದ ಮರಕ್ಕೆ ಸ್ವಲ್ಪ ದೂರ ಹಾರಿ ಏರಿ ಕೂರ್ತವೆ. ನೆಲನಂತೂ ಮುಟ್ಟಲ್ಲ.

ಸಿದ್ದ ಹೇಳ್ದಂಗೆ ಗೋವಿಂದ ಬ್ಯಾಟರಿ, ಕೋವಿ ಎಲ್ಲಾ ಸರಿಮಾಡಿಕೊಂಡು ವಡೇರ ತೋಟದ ದರೇಲಿರೋ ಬೈನೆ ಮರದ ಬುಡಕ್ಕೆ ಸಿದ್ದನೊಂದಿಗೆ ಬಂದ. ಬಂದು ಬೈನೆ ಮರಕ್ಕೆ ಬ್ಯಾಟರಿ ಬಿಡ್ತಾನೆ, ಒಂದಲ್ಲ, ಮೂರು ಕಬ್ಬೆಕ್ಕುಗಳು ಹಣ್ಣನ್ನು ತಿನ್ನಲು ಪೈಪೋಟಿ ಮಾಡ್ತ ಕಿತ್ತಾಡ್ತಿದಾವೆ. ಆದ್ರೆ ಅದು ಅರವತ್ತು, ಎಪ್ಪತ್ತು ಅಡಿ ಎತ್ತರದ ಮರ. ಹೊಡೆದ ಗುಂಡು ಮೇಲ್ಮುಖವಾಗಿ ನೆಟ್ಟಗೆ ಅಷ್ಟು ಎತ್ತರಕ್ಕೆ ಹೋಗ್ಬೇಕಾದ್ರೆ ಅಂಥಾ ಕೋವಿನೇ ಆಗ್ಬೇಕು. ಗುರಿಗಾರನೂ ಅಂಥೋನೇ ಆಗಿರ್ಬೇಕು. ರಾಘವಾಚಾರಿ ಹತ್ರ ಒಂದು ಸ್ವಲ್ಪ ದಿನದ ಹಿಂದೆ ಗೋವಿಂದ ಕೋವಿಗೆ ಬೇವುಕಟ್ಟಿಸಿದ್ದ. ನಳಿಗೆ ಕೊರೆದು ಕೊಟ್ಟಿದ್ದ ರಾಘವಾಚಾರಿ, 'ಗುಂಡು ಹೊಡ್ದು ನೋಡು, ಗುಂಡು ಬಿಚ್ಚಿದರೆ ಆಮೇಲೆ ಹೇಳು' ಅಂತ ಗೋವಿಂದನಿಗೆ ಶಿಫಾರಸು ಮಾಡಿದ್ದ. ರಾಘವಾಚಾರಿ ಮಾತು ಹುಸಿನೋ ಬದ್ಧನೋ ಅಂತ ನೋಡ್ಬೇಕು ಅಂತ ಇತ್ತು ಗೋವಿಂದನಿಗೆ. ಆ ಸವಾಲಿಗೆ ಸರಿಯಾಗಿ ಈ ಬೈನೆ ಮರ ಇತ್ತು. ಹೀಗಾಗಿ ಇವತ್ತಿನ ಶಿಕಾರಿ ಅಂದ್ರೆ ನನ್ನ ಈ ಕೋವಿಯ ಪರೀಕ್ಷೆಯೂ ಹೌದು ಎಂದು ಗೋವಿಂದ ಲೆಕ್ಕ ಹಾಕಿದ.

ಗೋವಿಂದ ಸಿದ್ದನನ್ನು ಮರದ ಬುಡದಲ್ಲಿ ನಿಲ್ಲಕ್ಕೆ ಹೇಳಿ ಸ್ವಲ್ಪದೂರ ಹೋಗಿ ಟಾರ್ಚ್ ಬಿಟ್ಟ. ಹೊಳೆವ ಗೋಲಿಯಂತೆ ಕಬ್ಬೆಕ್ಕಿನ ಕಣ್ಣು ಮಿನುಗುತ್ತಿದ್ದವು. ಎರಡು ಮೂರು ಬೆಕ್ಕುಗಳು ಬೈನೇ ಕೈಗೆ ನೇತು ಹಾಕಿಕೊಂಡಿದ್ದವು. ಗೋವಿಂದ ಗುರಿಇಟ್ಟು 'ಢಂ' ಅಂತ ಹೊಡೆದ. ದೊಪ್... ದೊಪ್ ಅಂತ ಒಂದಲ್ಲ ಎರಡು ಕಬ್ಬೆಕ್ಕು ಬಿದ್ದವು. ಗೋವಿಂದ ಕೆಳಗೆ ಟಾರ್ಚ್ ಹಾಕೋ ಮುಂಚೇನೇ ಶಿಕಾರಿ ನಾಯಿತರ ತಯಾರಾಗಿ ನಿಂತಿದ್ದ ಸಿದ್ದ ಕಬ್ಬೆಕ್ಕು ಬೀಳುತ್ತಿದ್ದಂತೆ ಅವು ಸತ್ತೇ ಬಿದ್ದಿರ್‍ತಾವೆ ಅಂತ ಆಸೇಲಿ ಹೋಗಿ ಒಂದನ್ನ ಕೈಚೀಲ ಸೇರಿ ಒತ್ತಿಹಿಡ್ದ. ಕೂಡ್ಲೆ ಬಂದ ಗೋವಿಂದ ಇನ್ನೊಂದು ಬೆಕ್ಕನ್ನು ಕೋವಿ ಹತ್ತೆಯಿಂದ ಒತ್ತಿಹಿಡ್ದ. ಅಷ್ಟೊತ್ತಿಗೆ ಸಿದ್ದ 'ಅಯ್ಯಯ್ಯೋ' ಅಂತ ಕೂಗಿಕೊಂಡ. ಸಿದ್ದನ ಕೈಬೆರಳನ್ನ ಚೀಲ ಬೆರಕೇನೆ ಕಬ್ಬೆಕ್ಕು ಅಗೆದಿತ್ತು. ಗೋವಿಂದ ತಕ್ಷಣ ಬಂದು ಕೋವಿ ಹತ್ತೆಯಿಂದ ಗುದ್ದದಿದ್ದರೆ ಸಿದ್ದನಿಗೆ ಕಿಂದರಿ ಬಾರಿಸಲು ಕೈ ಬೆರಳೇ ಇರುತ್ತಿರಲಿಲ್ಲ.

ಕಬ್ಬೆಕ್ಕುಗಳ ಜೀವ ಗಟ್ಟಿ. ಅರವತ್ತು ಎಪ್ಪತ್ತಡಿಯಿಂದ ಬಿದ್ದ ಹೊಡೆತಕ್ಕೆ ಅವು ಸತ್ತೇ ಹೋಗಬೇಕಿತ್ತು. ಆದ್ರೆ ಸತ್ತಿರಲಿಲ್ಲ. ಹೀಗೆ ಬಿದ್ದಾಗ ಅವು ಸತ್ತುಹೋಗಿವೆ ಅಂತ ಎತ್ತಿಕೊಳ್ಳಲು ಹೋದ್ರೆ ಘಾಸಿ ಮಾಡೇ ತೀರ್‍ತವೆ. ಅವಕ್ಕೆ ಮೈಯಲ್ಲೆಲ್ಲಾ ಹಂದಿ ತರ ಚರ್ಬಿ. ಸಾಮಾನ್ಯದ ಗುಂಡು ನಾಟುವುದಿಲ್ಲ. ತಲೆಗೆ ಈಡು ಬಿದ್ದರೆ ಮಾತ್ರ ಕಬ್ಬೆಕ್ಕಿನ ಶಿಕಾರಿ. ಇನ್ನೆಲ್ಲಿಗೆ ಬಡಿದರೂ ತಕ್ಷಣ ಸಾಯುವುದಿಲ್ಲ. ಅವುಗಳ ಚರ್ಮದಲ್ಲಿ ಕೊಬ್ಬು ಇರುವುದರಿಂದ ಗುಂಡು ತಾಗುವುದಿಲ್ಲ. ಹಂದಿ, ಕಬ್ಬೆಕ್ಕು ಇಂಥಾ ಪ್ರಾಣಿಗಳನ್ನು ಮಾಂಸ ಮಾಡುವ ಮುಂಚೆ ರೋಮ ತೆಗೆಯಲು ಬೆಂಕಿಯಲ್ಲಿ ಗಾರಿಸಬೇಕು. ಅದು ಒಂಚೂರು ಹೆಚ್ಚುಕಡಿಮೆ ಆಗೋಂಗಿಲ್ಲ. ಹೆಚ್ಚು-ಕಡಿಮೆ ಸುಟ್ರೆ ಅಲ್ಲೇ ಕೊಬ್ಬು ಹೊರಗೆ ಬಂದು ಬೆಂಕಿ ಹತ್ತಿಕೊಂಡು ಮಾಂಸವೇ ಸುಟ್ಟು ಕರಿಯಾಗುತ್ತದೆ. ಅದಕ್ಕೆ ಹದವಾಗಿ ಸುಟ್ಟು ಗರಟದ ಚಿಪ್ಪಿಂದ ಹೆರಸಿ, ಹೆರಸಿ ರೋಮವೆಲ್ಲಾ ಹೋದಮೇಲೆ ನೀರು ಹಾಕಿ ಕತ್ತಿಯಿಂದ ಹೆರೆಯುತ್ತಾರೆ. ಸುಟ್ಟು ಕಪ್ಪಗಾಗಿದ್ದ ದೇಹ ನೀರು ಹಾಕಿ ಹೆರಸಿದ ಮೇಲೆ ಬೆಳ್ಳಗಾಗುತ್ತದೆ.

ಸುಟ್ಟ ಪ್ರಾಣಿಯ ಮುಂದಿನ ಕಾಲಿನ ಮಧ್ಯದಲ್ಲಿ ಹರಿತವಾದ ಕತ್ತಿಯ ಮೂತಿಯಿಂದ ತೂತು ಕೊರೆಯುತ್ತಾರೆ. ಅದಕ್ಕೆ ಬೆರಳು ಹಾಕಿ ಕರುಳಿಗೆ ತಾಗದಂತೆ ಎಚ್ಚರಿಕೆ ವಹಿಸಿ ಹೊಟ್ಟೆ ಬಗೆಯುತ್ತಾರೆ. ಎದೆಯ ಕೆಳಗಿನ ಹೊಟ್ಟೆಯೊಳಗಿದ್ದ ಎಲ್ಲಾ ಅಂಗಾಂಗಗಳನ್ನು ಹೊರಗೆ ಎಳೆಯುತ್ತಾರೆ. ಆಶ್ಚರ್ಯವೆಂದರೆ ಕರುಳನ್ನು ನೋಡಿದರೆ ಇಷ್ಟು ಸಣ್ಣ ಪ್ರಾಣಿ ಹೊಟ್ಟೆಯಲ್ಲಿ ಇಷ್ಟು ಕರುಳು ತುಂಬಿಕೊಂಡಿರುತ್ತಾ ಅಂತನ್ನಿಸುತ್ತದೆ. ಯಾಕಂದ್ರೆ ಯಾವುದೇ ಪ್ರಾಣಿ ಇರಲಿ ಅದರ ಹೊಟ್ಟೆಯೊಳಗಿನದ್ದನ್ನು ತೆಗೆದು ಪಕ್ಕಕ್ಕೆ ಇಟ್ಟರೆ ಅದು ಆ ಪ್ರಾಣಿಯಷ್ಟೇ ಪ್ರಮಾಣದಲ್ಲಿರುತ್ತದೆ! ಇನ್ನು ದೊಡ್ಡ ದೊಡ್ಡ ಹೊಟ್ಟೆ ಹೊತ್ತುಕೊಂಡ ಮನುಷ್ಯರ ಹೊಟ್ಟೇಲಿ...?!

ಹೊಟ್ಟೆ ಬಗೆಯಲು ಯಾಕಿಷ್ಟು ಜಾಗ್ರತೆ ವಹಿಸುತ್ತಾರೆಂದರೆ ಯಕೃತ್ತಿನ ಜೊತೆ ಸೇರಿಕೊಂಡಿರುವ ಪಿತ್ತಕೋಶದಿಂದಾಗಿ. ಈ ಪಿತ್ತಕೋಶವನ್ನು ಕೈಂಕ ಅಂತಾರೆ. ಅಪ್ಪಿ-ತಪ್ಪಿ ಏನಾದ್ರು ಈ ಕೈಂಕ ಒಡೆದುಹೋದ್ರೆ ಆ ಮಾಂಸವನ್ನೆಲ್ಲಾ ಬಿಸಾಡಬೇಕು. ಕೈಂಕ ತಾಗಿದ ಮಾಂಸವನ್ನು ಎಷ್ಟೇ ನೀರಿನಿಂದ ತೊಳೆದರೂ ಕಹಿ ಹೋಗುವುದಿಲ್ಲ. ಹೀಗಾಗಿಯೇ ಸುಟ್ಟ ಪ್ರಾಣಿಯ ಹೊಟ್ಟೆ ಬಗೆಯುವ ಕೆಲಸ, ನಂತರದ ಹಸಿಗೆ ಸಿದ್ದನಂತಹ ನಿಪುಣರದ್ದು. ಸಿದ್ದ ಹೊಟ್ಟೆ ಬಗೆಯುವವರೆಗೂ ಆ ಬೇಟೆಯಾದ ಪ್ರಾಣಿಯನ್ನ ಮುಟ್ಟಬಹುದು. ಆದ್ರೆ ಅವ ಮಾಂಸ ಹೆಚ್ಚುವಂತಿರಲಿಲ್ಲ. ಅವನು ಹೆಚ್ಚಿದ ಮಾಂಸವನ್ನು ಮಾಂಸ ತಿನ್ನುವ ಮೇಲ್ಜಾತಿಯವರು ತಿನ್ನುವಂತಿಲ್ಲ. ಗೋವಿಂದ ಮಾಂಸ ತಿನ್ನುತ್ತಿರಲಿಲ್ಲವಾದ್ದರಿಂದ ಅವನು ಹಸಿಗೆಗೆ ಬರುತ್ತಿರಲಿಲ್ಲ. ಅವನದ್ದೇನಿದ್ದರೂ ಹೊಡೆದು ಶಿಕಾರಿ ಮಾಡುವುದಷ್ಟೇ ಕೆಲಸ. ಆದರೆ ಅವ ಮಾಂಸವೆಲ್ಲಾ

ಹೆಚ್ಚಿ ಪಾಲು ಮಾಡಿಕೊಳ್ಳುವವರೆಗೂ ಇರುತ್ತಿದ್ದ. ತನ್ನ ಶಿಕಾರಿ ಆತನ ಹೆಮ್ಮೆಯ ಕೆಲಸ. ಹೊಡೆದೋರಿಗೆ ಕೊಡುವ ಪಾಲನ್ನ ಯಾವಾಗ್ಲೂ ಅವ ಸಿದ್ದನಿಗೆ ಕೊಡಿಸುತ್ತಿದ್ದ ಇಲ್ಲವೇ ಯಾರಾದ್ರೂ ಗೋವಿಂದನನ್ನು ಬಾಯಿತುಂಬಾ ಹೊಗಳಿ, ಮಾಂಸ ಬೇಡಿದ್ರೆ ಅವರಿಗೂ ಸ್ವಲ್ಪ ಕೊಡಿಸುತ್ತಿದ್ದ.

ಹಂದಿ, ಕಡು, ಇಂಥಾ ದೊಡ್ಡ ದೊಡ್ಡ ಪ್ರಾಣಿಯನ್ನ ಯಾರೇ ಶಿಕಾರಿ ಮಾಡಲಿ, ಒಂದೇ ಮನೆಯವರಿಗೆ ತಿನ್ನಲು ಸಾಧ್ಯವಿಲ್ಲ. ಹೀಗಾಗಿ ಊರವರೆಲ್ಲರಿಗೂ ಹಂಚಿಯೇ ತಿನ್ನುವುದು, ದೊಡ್ಡ ಪ್ರಾಣಿಗಳ ಶಿಕಾರಿ ಆದಮೇಲೆ, ಎಲ್ಲೋ ಕಾಡಲ್ಲಿ ಬಿದ್ದಿದ್ದ ಅದನ್ನು ಹೊತ್ತುಕೊಂಡು ಬರಬೇಕು. ಅದರ ತೂಕದ ಮೇಲೆ ಅದು ಎಷ್ಟು ಆಳಿಂದು ಅಂತ ತೀರ್ಮಾನವಾಗ್ತದೆ. ಸಾಮಾನ್ಯವಾಗಿ ೨೫ ಕೆಜಿ ಮೇಲೆ ೫೦ ಕೆಜಿ ಒಳಗಿದ್ದರೆ ಅದಕ್ಕೆ ಎರಡಾಳು. ಅದಕ್ಕಿಂತ ಹೆಚ್ಚಿದ್ದರೆ ನಾಲ್ಕಾಳು. ಎಪ್ಪತ್ತೈದು ಕೇಜಿಗಿಂತ ದೊಡ್ಡದಾದರೆ ಅದು ಆರಾಳು. ಕಡವಿನಂಥ ದೊಡ್ಡ ಪ್ರಾಣಿಯಾದರೆ ಎಂಟಾಳು. ಹೀಗೆ ಇದು ಎಷ್ಟು ಆಳಿಂದು ಎಂದು ಲೆಕ್ಕಾಚಾರ ಹಾಕ್ತಾರೆ. ಪ್ರಾಣಿಯ ಕಾಲಿನ ಮಧ್ಯೆ ಬಡಿಗೆ ಸುರಿದು ತೂಕ ಅಳೆಯಲಾಗುತ್ತದೆ. ತೂಕ ಮತ್ತು ಗಾತ್ರಕ್ಕೆ ಅನುಗುಣವಾಗಿ ಅದರ ಯೋಗ್ಯತೆ ನಿರ್ಧಾರವಾಗುತ್ತದೆ. ಕೆಲವು ಕೈಲಾಗದ ಆಸೆಬುರುಕರಿರುತ್ತಾರೆ. ಅಂಥವರು ಗೋವಿಂದನಂಥಾ ಶಿಕಾರಿಗಾರರನ್ನು ಮೆಚ್ಚಿಸಲು ಎರಡಾಳಿದ್ರೆ ನಾಲ್ಕಾಳು ಅಂತ ಪಟಾಕಿ ಬಿಡ್ತಾರೆ.

ದೂರದೂರದ ಗುಡ್ಡಕಾಡುಗಳಲ್ಲಿ ಶಿಕಾರಿ ಮಾಡಿದ್ರೆ ಅದನ್ನು ಹಾಗೆಯೇ ಹೊತ್ತು ತರುವುದು ಸಾಧ್ಯವಿಲ್ಲ. ಅಲ್ಲಿಯೇ ಮಾಂಸ ಮಾಡ್ಬೇಕು. ಅದಕ್ಕಿಂತ ಹೆಚ್ಚಾಗಿ ಒಂದೊಂದು ಕಾಡಿಗೆ ಒಂದೊಂದು ಘಟಾನುಘಟಿ ದೈವಗಳಿರುತ್ತವೆ. ಅವುಗಳ ಆಶೀರ್ವಾದ ಇಲ್ಲದೆ ಶಿಕಾರಿ ನಡೆಯೋಲ್ಲ. ಶಿಕಾರಿಗೆ ಹೋಗೋಕೆ ಮುಂಚೆನೇ ಶಿಕಾರಿ ಆದ್ರೆ ಆ ದೈವಕ್ಕೆ ತಲೆಮಂಜ ಮಾಡ್ತೀವಿ ಅಂತ ಹರ್ಕೆ ಹೊರ್ತಾರೆ. ತಲೆಮಂಜ ಅಂದ್ರೆ ಶಿಕಾರಿ ಆದ ಪ್ರಾಣಿಯ ತಲೆಮಾಂಸವನ್ನ ಎಡೆಯಿಟ್ಟು ಕಾನ್ ದೇವರಿಗೆ ಪೂಜೆ ಮಾಡುವುದು. ಇದರೊಟ್ಟಿಗೆ ಒಂದಷ್ಟು ಮಾಂಸವನ್ನು ಶಿಕಾರಿಗೆ ಬಂದವರಿಗೆ ಹುರಿತುಂಡು ಮಾಡಲಾಗುತ್ತದೆ. ಕಾಡಿನಲ್ಲಿ ಎಲ್ಲಾ ಸಿಕ್ಕಿದ್ರೂ ಉಪ್ಪಿಗೆ ಬರ. ಬೇರೆ ಏನೂ ಅಲ್ದಿದ್ರೂ ಉಪ್ಪು ಹಾಕ್ದೆ ಮಾಂಸಾನ ತಿನ್ನಕ್ಕಾಗಲ್ಲ. ಹಾಗಾಗಿ ಗುಡ್ಡದಲ್ಲಿ ಶಿಕಾರಿ ಆದಾಗಲೆಲ್ಲಾ ಆ ಕಾಡಿಗೆ ಸಮೀಪವಿದ್ದ ಯಾರ್ದಾದ್ರು ಮನೆಗೆ ಹೋಗಿ ಉಪ್ಪು-ಪಾತ್ರೆ ತಗೊಂಡು ಬಂದು ಕೊನೆಗೆ ಅವರಿಗೊಂದು ಪಾಲು ಕೊಡ್ತಾರೆ.

ಗೋವಿಂದ ಹೊಡೆದು ಶಿಕಾರಿ ಆಯಿತು ಅಂದಾಗಲೆಲ್ಲಾ ಉಪ್ಪು ಪಾತ್ರೆ ಕೇಳ್ಕೊಂಡು ಸಿದ್ದ ತನಿಕೋಡು ತಮ್ಮನಾಯ್ಕರ ಮನೆಗೇ ಹೋಗ್ತಿದ್ದ. ಅದು ಬಿಟ್ಟರೆ ಅಷ್ಟು ಉಪ್ಪು-ಪಾತ್ರೆ ಇರುವ ಇನ್ನೊಂದು ಮನೆ ಆ ಊರಲ್ಲಿ ಇರ್ಲಿಲ್ಲ. ಅದು ರಾತ್ರಿಯಾಗಲಿ ಹಗಲಾಗಲಿ ಆಪತ್ತಿಗೆ ಅವರೇ. ಅವರ ಮನೆಯಲ್ಲಿ ಅದಕ್ಕಂತಾನೇ ಪಾತ್ರೆ ಇರುತ್ತಿದ್ದವು. ಶಿಕಾರಿಗೆ ಎಷ್ಟು ಜನ ಸೇರಿದ್ದಾರೆ ಎಂಬ ಲೆಕ್ಕಾಚಾರದ ಮೇಲೆ ಉಪ್ಪು ಕೇಳ್ತಿದ್ರು. ಸಿದ್ದ ಮಾಂಸ ಹೆಚ್ಚುವವನಲ್ಲವಾದ್ದರಿಂದ ಅವನನ್ನು ಪಾತ್ರೆ ಉಪ್ಪು ತರಲು ಓಡಿಸುತ್ತಿದ್ದರು.

ಸಿದ್ದನ ಕೆಲಸವೇ ಅಂಥದ್ದು. ಮಾಂಸ ಕೊಚ್ಚಲು ನೆಲದ ಮೇಲೆ ಹಾಸಲು ಬೇಕಾದ ಬಾಳೆ ಹೆಡೆ, ಕೊಚ್ಚುವ ಗೊಲ್ಪೆ (ಕೊಚ್ಚುವ ಕುಂಟೆ), ಸುಡಕ್ಕೆ ಬೇಕಾದ ಕಟ್ಟಿಗೆ ಎಲ್ಲ ತರೋದು. ಅವನು ಎಷ್ಟೇ ಪರಿಣಿತನಾದರು ಜಾತಿಯಲ್ಲಿ ಹೀನನಾದ್ದರಿಂದ ಅವನಿಗೆ ಸಹಾಯಕನ ಕೆಲಸ. ಸಿದ್ದ ತಮ್ಮನಾಯ್ಕರ ಮನೆಗೆ ಬಂದ ಅಂದ್ರೆ ಶಿಕಾರಿ ಆಗಿದೆ ಅಂತ ಅವರಿಗೊತ್ತು. ಆದ್ರೆ ಮನೆಗೆ ಬಂದ ಸಿದ್ದ ಅದನ್ನು ನೇರವಾಗಿ ಹೇಳ್ತಿರಲಿಲ್ಲ. ಅವನ ಮಾತಿನ ಶೈಲಿನೇ ಹಂಗೆ. ಸುಖಕಷ್ಟ ಎಲ್ಲಾ ಮಾತಾಡಿ, 'ಈಗ ಎಂತ ಮಾಡಾದು ಒಂದ್ ಕೆಲ್ಸ ಆಗ್ಬೇಕಿತ್ತಲ್ಲ ಮರಾಯ್ರೇ... ನಮ್ ಗೋವಿಂದಯ್ಯ ಒಂದು ಶಿಕಾರಿ ಮಾಡ್ಯಾರೆ ಊರೋರೆಲ್ಲಾ ಸೇರ್‍ಯಾರೆ..., 'ಸಿದ್ದಾ ಉಪ್ಪು ಪಾತ್ರೆ ತರಬೇಕಲ್ಲ' ಅಂದ್ರು... ನಂಗೆ ಹೇಂಗಾರು ಮಾಮೂಲಿಯಲ್ಲ ಅದ್ಕೆ ನಿಮ್ಮನೆಗೇ ಬಂದೆ...' ಅಂತಿದ್ದ. ಅವ್ರು ಅದೂ-ಇದೂ ಮಾತಾಡ್ತಾ ಪಾತ್ರೆ ಕೊಡ್ತಿದ್ರು. ಕೊನೆಗೆ ಪಾತ್ರೆ ಉಪ್ಪು ಕೊಟ್ಟಿದ್ದಕ್ಕೆ ಪಾತ್ರೆ ಜೊತೆಗೆ ಅವರಿಗೂ ಒಂದು ಪಾಲು ಸಿಗ್ತಿತ್ತು.

ಯಾವುದೇ ಶಿಕಾರಿ ಮಾಡಿದ ಪ್ರಾಣಿಯ ಮಾಂಸವನ್ನ ಮೂರು ರಾಶಿ ಮಾಡ್ತಾರೆ. ಆ ರಾಶಿ ಸಮವಾಗಿದೆಯೇ ಇಲ್ವೇ ಅಂತ ಬಾಳೆಎಲೆಯ ನಾರಿನಿಂದ ಅಳೆದು ಸಮವಾಗಿದೆ ಅಂತ ಆದ ಮೇಲೆ ಅದರಲ್ಲಿ ಒಂದು ಪಾಲು ಹೊಡೆದವನಿಗೆ ಉಳಿದೆರಡು ರಾಶಿ ಒಟ್ಟು ಮಾಡಿ ಶಿಕಾರಿಗೆ ಬಂದ ಎಲ್ಲರಿಗೂ ಹಂಚ್ತಾರೆ. ಅದರಲ್ಲಿ ಕೋವಿ ಪಾಲು, ನಾಯಿ ಪಾಲು, ಹಳುವಿನವರ ಪಾಲು, ಸೊಂಟ್ ಮುರ್ಕ್ ಪಾಲು, ತೋರ್ಡಡಿ ಪಾಲು, ನೆಲದ ಪಾಲು ಅಂತ ತೆಗೆದಿಡ್ತಾರೆ. ಸೊಂಟ್ ಮುರ್ಕ ಪಾಲು ಅಂದ್ರೆ ಅಷ್ಟೂ ಮಾಂಸವನ್ನ ಎಲ್ಲರಿಗೂ ಪಾಲು ಹಂಚಿ ಸೊಂಟ ನೋಯಿಸ್ಕೊಂಡವನಿಗೆ ಕೊಡುವುದು.

ತೋರ್ಡಡಿ ಪಾಲು ಅಂದ್ರೆ ಅವಮಾನದ ಪಾಲು. ಶಿಕಾರಿಗೆ ಬಾರದ ಮನೆಯವರಿಗೂ ಪಾಲು ಹಂಚಲಾಗುತ್ತದೆ. ಅದು ಶಿಕಾರಿಗೆ ಬಂದವರಿಗೆ ಕೊಡುವ ಪಾಲಿನ ಅರ್ಧದಷ್ಟಾಗಿರುತ್ತದೆ. ಎಷ್ಟು ಕರೆದ್ರೂ ಶಿಕಾರಿಗೆ ಬಾರದವರಿಗೆ, ಈಡಿನ ಶಬ್ದ ಕೇಳಿ ಆಮೇಲೆ ಬಂದವರಿಗೆ ಈ ಪಾಲು ಸೇರುತ್ತದೆ. ಇನ್ನು ಯಾರದ್ದಾದರೂ ಸ್ವಂತ ಜಾಗದಲ್ಲಿ ಬಿದ್ದಿದ್ದರೆ ಅವರಿಗೊಂದು ಪಾಲು ಕೊಡುತ್ತಾರೆ. ಇದನ್ನು ನೆಲದ ಪಾಲು ಅಂತಾರೆ.

ರಾತ್ರಿ ಗೋವಿಂದ ಹೊಡೆದ ಕಬ್ಬೆಕ್ಕು ಸಿದ್ದನ ಕೈ ಕಚ್ಚಿದ್ದರಿಂದ ಅವನಿಗೆ ಅದರ ಹಸಗೆ ಮಾಡಕ್ಕಾಗ್ಲಿಲ್ಲ. ಹಂಗೇಯ ಮನೆಗೆ ತಂದು ಸೀತುನ್ನೂ ಸೇರ್ಸಿಕೊಂಡು, ಅವಳ ಕೈಯಲ್ಲೇ ಹಸಿಗೆ ಮಾಡ್ಸಿದ. ಸಿದ್ದ ಕೈಂಕದ ಬಗ್ಗೆ ಹೇಳ್ತನೇ ಇದ್ದ. ಸೀತುಗೆ ಮೈಯತ್ತಿಲ್ದೆದ್ದರಿಂದ (ಅನುಭವ) ಕೈಂಕ ಒಡೆದುಹೋಗಿತ್ತು. 'ಓ ನಿನ್ ಮನೆ ಹಾಳಾಗೋಯ್ತಲ್ಲ, ಇನ್ನು ಅದ್ನ ತಿನ್ನೊಂಗಿಲ್ಲ' ಅಂತ ಹೇಳಿ ಅದನ್ನ ಅಲ್ಲಿಗೆ ತಡೆದು, ಅರ್ಧ ಕಬ್ಬೆಕ್ಕಿನ ಮಾಂಸನೇ ಕುಯ್ದು ಬಿಸಾಡಿದ ಸಿದ್ದ. ಇನ್ನೊಂದು ಹಸಗೆ ಮಾಡುವಾಗ ಸೀತುಗೆ ಕೈಂಕದ ಅಂದಾಜಾಗಿತ್ತು. ಮಾಂಸ ಸುಮಾರಾಗಿದ್ರಿಂದ ಅಕ್ಕಪಕ್ಕದೋರಿಗೂ ಸ್ವಲ್ಪ ಸ್ವಲ್ಪ ಕೊಟ್ಟಿದ್ರು. ಅದ್ರಿಂದ ಸಿದ್ದನ ಋಣ ಕೇರಿಗೆ ಮತ್ತಷ್ಟು ಹೆಚ್ಚಿತ್ತು.

**(ಆಕರ: 'ಮಂಗನ ಬ್ಯಾಟೆ: ಮಲೆನಾಡ ಪರಿಸರ ಕಥನ' ಕೃತಿಯಿಂದ, ಲಂಕೇಶ್ ಪ್ರಕಾಶನ, ಬೆಂಗಳೂರು)**

# III. ಧರ್ಮ

**ಭಾ**ರತವು ಅನೇಕ ಧರ್ಮಗಳಿಗೆ ನೆಲೆಯಾಗಿರುವ ಬಹತ್ವದ ದೇಶ. ಇಲ್ಲಿ ಯಾವ ಕಾಲಘಟ್ಟವು ಕೂಡ ಏಕಮುಖಿ ವಿಚಾರಧಾರೆಗಳಿಂದ ಕೂಡಿರಲಿಲ್ಲ. ವೈವಿಧ್ಯಮಯ ಧರ್ಮಗಳು ಬಹುಮುಖಿ ಚಿಂತನೆಗಳಿಗೆ ದಾರಿಯನ್ನು ನಿರ್ಮಾಣ ಮಾಡುತ್ತಲೇ ಬಂದಿವೆ. ಹಾಗಂತ ನಮ್ಮಲ್ಲಿ ಬರಿ ಧಾರ್ಮಿಕ ಸಾಮರಸ್ಯವೇ ಇತ್ತು; ಧರ್ಮಗಳ ನಡುವೆ ಸಂಘರ್ಷವೇ ಇರಲಿಲ್ಲ ಎಂದರ್ಥವಲ್ಲ. ಒಂದು ಜನಾಂಗ, ಬುಡಕಟ್ಟು, ರಾಜ್ಯ, ದೇಶ–ಇವುಗಳನ್ನು ಗೆದ್ದವರು ತಮ್ಮ ಅಹಂಕಾರ ಮತ್ತು ಯಜಮಾನಿಕೆಯ ಧರ್ಪದಿಂದ ಬೀಗಿದ್ದಾರೆ. ಹೀಗೆ ಸೋತ ಜನಸಮುದಾಯಗಳನ್ನು ಅಧೀನಕ್ಕೆ ಒಳಪಡಿಸಿಕೊಂಡು ತಮ್ಮ ಧರ್ಮದ ಆಚರಣೆಗಳನ್ನು ಹೇರಲು ಪ್ರಯತ್ನಿಸಿದ್ದುಂಟು. ಸೋತವರನ್ನು ಗುಲಾಮರನ್ನಾಗಿಸಿ ಕೀಳರಿಮೆಯ ಕೂಪಕ್ಕೆ ತಳ್ಳಿರುವುದು ಸುಳ್ಳಲ್ಲ. ಬ್ರಿಟಿಷ್ ವಸಾಹತುಶಾಹಿಯು ಕೂಡ ಆಧುನಿಕತೆಯ ಹೆಸರಲ್ಲಿ ಈ ಕೆಲಸ ಮಾಡಿದೆ. ಆದರೂ ಭಾರತದ ವೈವಿಧ್ಯತೆಯನ್ನು ಹಾಗೂ ಅದರ ಬಹುತ್ವದ ಚಹರೆಗಳನ್ನು ನಾಶ ಮಾಡಲು ಸಾಧ್ಯವಾಗಿಲ್ಲ.

ಕ್ರಿ.ಪೂ. ಆರನೇ ಶತಮಾನದ ಬುದ್ಧನ ಕಾಲದಲ್ಲಿ ಅರವತ್ತಕ್ಕೂ ಹೆಚ್ಚು ಮತ ಪಂಥಗಳು ಜೀವಂತವಾಗಿದ್ದವು. ಇವುಗಳ ನಡುವೆ ಸಾಮಾಜಿಕ ಹಾಗೂ ಆಧ್ಯಾತ್ಮಿಕ ತಿಕ್ಕಾಟಗಳಿದ್ದವು. ಅವುಗಳ ನಡುವೆ ತಾತ್ವಿಕ ವಾದ–ವಾಗ್ವಾದಗಳು ನಿರಂತರವಾಗಿದ್ದವು. ಆದರೆ ಭಾರತದಲ್ಲಿ ೧೯ನೇ ಶತಮಾನದಲ್ಲಿ ವಸಾಹತುಶಾಹಿಯ ಕಾರಣದಿಂದ ಹಿಂದೂ ಧರ್ಮಕ್ಕೆ ಹೆಚ್ಚು ಮಹತ್ವ ಸಿಕ್ಕಿತು. ಇದರಿಂದಾಗಿ ವೈದಿಕಶಾಹಿ ವರ್ಗವು ಜಾಗೃತಗೊಂಡು ಗತಕಾಲದ ಧರ್ಮದ ಪುನರುತ್ಥಾನಕ್ಕೆ ಒತ್ತು ನೀಡಿತು. ಹೀಗೆ ಏಕರೂಪಿ ಧರ್ಮವೇ ಈ ದೇಶದ ನಿಜವಾದ ಧರ್ಮವೆಂದು ಹೇಳತೊಡಗಿತು. ಈ ಹಿನ್ನೆಲೆಯಲ್ಲಿ ಭಾರತವು ಸ್ವಾತಂತ್ರ್ಯ ಪಡೆದ ನಂತರದಲ್ಲಿ ಸಂವಿಧಾನದ ಅನುಸಾರ 'ಧರ್ಮನಿರಪೇಕ್ಷ' ರಾಷ್ಟ್ರವಾಗಿ ಹೊರ ಹೊಮ್ಮಿತು. ಹೀಗಾಗಿ ದೇಶದಲ್ಲಿ ಎಲ್ಲ ಧರ್ಮಗಳಿಗೆ ಸಂವಿಧಾನವು ಸಮಾನ ಅವಕಾಶವನ್ನು ಕಲ್ಪಿಸಿದೆ.

ಮನುಷ್ಯ ಮನುಷ್ಯರನ್ನು ಶ್ರೇಣಿಕರಿಸುವ, ತಾರತಮ್ಯ ಮಾಡುವ, ಮೇಲು ಕೀಳಿನ ಭಾವನೆಯನ್ನು ಉಂಟು ಮಾಡುವುದು ಯಾವುದೇ ಧರ್ಮಕ್ಕೆ ಶೋಭೆ ತರುವುದಿಲ್ಲ. ಧರ್ಮವು ಮನುಷ್ಯ ಸಂಬಂಧಗಳನ್ನು ಅಸ್ಪೃಶ್ಯತೆ, ಜಾತಿ, ಮತ, ಪಂಥಗಳ ನಿಟ್ಟಿನಿಂದ ಛಿದ್ರಗೊಳಿಸುವ ಗುರಾಣಿ ಆಗಬಾರದು. ಒಡೆಯುವುದು ಧರ್ಮದ ಉದ್ದೇಶವಲ್ಲ. ಸರ್ವರನ್ನು ಸಮಾನತೆಯಿಂದ ಕಾಣುವ ಧರ್ಮವೇ ನಿಜವಾದ ಮಾನವು ಧರ್ಮವಾಗಿದೆ. ಅದು ಮನುಷ್ಯ ಸಂವೇದನೆಯನ್ನು ಜಾಗೃತಗೊಳಿಸಬೇಕು. ಸಕಲ ಜೀವರಾಶಿಗಳನ್ನು ಭೂಮಿ ಮತ್ತು ಸೂರ್ಯ ಪೊರೆಯುವಂತೆ ಧರ್ಮವು ಕೂಡ ಎಲ್ಲರನ್ನೂ ಕಾಪಾಡುವ ಶಕ್ತಿಯಾಗಬೇಕು. ಕಾಯಾ, ವಾಚಾ, ಮನಸಾ–ಇವುಗಳನ್ನು ಪರಿಶುದ್ಧಗೊಳಿಸುವ ಚೈತನ್ಯವಾಗಬೇಕು. ಈ ಹಿನ್ನೆಲೆಯಲ್ಲಿ ಇಲ್ಲಿಯ ಪಾಠಗಳನ್ನು ಸಂವೇದನಾಶೀಲತೆಯಿಂದ ಹಾಗೂ ಬಹು ಆಯಾಮಗಳ ಮೂಲಕ ವಿವೇಚಿಸುವ ಅಗತ್ಯವಿದೆ.

# ೧. ಧರ್ಮಕೊಂಡದ ಕತೆ

– ಅಶ್ವತ್ಥ

ಆ ರಾತ್ರಿ ಅಮಾವಾಸ್ಯೆಯ ಕತ್ತಲು ಹೊರಗೆ ಕವಿದಿತ್ತು. ಎಲ್ಲೆಲ್ಲೂ ನಿಶ್ಯಬ್ದವಾಗಿತ್ತು. ಎಲ್ಲೋ ಒಂದೊಂದು ನಾಯಿ ಬೊಗಳುತ್ತಿದ್ದುದು ಮಾತ್ರ ಆಗಾಗ ಕೇಳಿಸುತ್ತಿತ್ತು. ಹಳ್ಳಿಗೆ ಹಳ್ಳಿಯೇ ವಿಶ್ರಾಂತಿಯಲ್ಲಿತ್ತು. ಗಂಟೆ ಹನ್ನೊಂದರ ಮೇಲಾಗಿತ್ತು. ಧರ್ಮ ಕೊಂಡದ ಶಾನುಭೋಗ ಸೂರಪ್ಪನ ಮನೆಯಲ್ಲೂ, ಅವನ ಹೊರತು ಎಲ್ಲರೂ ಮಲಗಿದ್ದರು. ಆದರೆ ಅವನು ತನ್ನ ಕೋಣೆಯಲ್ಲಿ ಲಾಟೀನಿನ ದೀಪದ ಮುಂದೆ, ದಪ್ಪ ಪುಸ್ತಕದ ದೊಡ್ಡ ಹಾಳೆಗಳನ್ನು ಮೆಲ್ಲಗೆ ತಿರುವಿಹಾಕುತ್ತಾ ಲೆಕ್ಕವನ್ನು ಬರೆಯುತ್ತಿದ್ದನು. ಜಮಾ ಬಂದಿ ಹತ್ತಿರವಾಗಿತ್ತು. ಲೆಕ್ಕವೆಲ್ಲ ಬೇಗ ಮುಗಿಯಬೇಕಾಗಿತ್ತು. ಸೂರಪ್ಪನು ಬಹಳ ಮುತುವರ್ಜಿ ವಹಿಸಿ ಕೆಲಸ ಮಾಡುತ್ತಿದ್ದನು. ಲೆಕ್ಕವು ಅಲ್ಲಲ್ಲಿ ಗಂಟಾದಾಗ, ಕೈ ಬೆರಳನ್ನು ತಲೆಯ ಕೂದಲಿನೊಳಕ್ಕೆ ಹಾಕಿ ಕೆರೆಯುತ್ತಿದ್ದನು; ಮತ್ತೆ ಮುಂದುವರೆಯುತ್ತಿದ್ದನು. ಹಜಾರದ ದೊಡ್ಡ ಗಡಿಯಾರವು 'ಢಾಂ' ಎಂದು ಅರ್ಧ ಗಂಟೆಯನ್ನು ಹೊಡೆಯಿತು. ಸೂರಪ್ಪನು ಅದನ್ನು ಗಣನೆಗೆ ತಾರದೆ ಇನ್ನೂ ಬರೆಯುತ್ತ ತನ್ನ ಕೆಲಸವನ್ನು ಮುಗಿಸಲು ಮಹಾಪ್ರಯತ್ನ ಮಾಡುತ್ತಿದ್ದನು. ಆದರೂ ಅವನ ಕಣ್ಣುಗಳು ಹಾಗೇ ಮುಚ್ಚಿಕೊಳ್ಳಲು ಒದ್ದಾಡುತ್ತಿದ್ದವು. ಒಂದೆರಡು ಬಾರಿ ತೂಕಡಿಕೆಯೂ ಬಂದಿದ್ದಿತು.

"ಬಾಗಿಲು" ಸೂರಪ್ಪನಿಗೆ ಕನಸಿನಲ್ಲಿ ಯಾರೋ ಮೆಲ್ಲನೆಯ ಧ್ವನಿಯಲ್ಲಿ ಕೂಗಿದಂತಾಯಿತು. ಅರ್ಧ ಮುಚ್ಚಿದ ಕಣ್ಣುಗಳನ್ನು ತೆರೆದು, ಧ್ವನಿಯನ್ನು ಆಲಿಸಿ ಮತ್ತೆ ಕೇಳದೆ, ಅದೆಲ್ಲೊ ತನ್ನ ಭ್ರಾಂತಿಯೆಂದುಕೊಂಡು ಬರವಣಿಗೆಗೆ ಗಮನವನ್ನು ತಿರುಗಿಸಿದನು.

"ಬಾಗಿಲು!" ಮತ್ತೆ ಅದೇ ಒಳಧ್ವನಿಯು ಈಗ ಸ್ಪಷ್ಟವಾಗಿಯೇ ಕೇಳಿಸಿತು. ಹುಂ. ಅದರಲ್ಲೇನು ತಪ್ಪಿರಲಿಲ್ಲ; ಈ ಬಾರಿ ಅವನು ಅರೆನಿದ್ರಿಸುತ್ತಲೂ ಇರಲಿಲ್ಲ. ಸೂರಪ್ಪನು ದಿಗ್ಗನೆದ್ದು ಲಾಟೀನನ್ನು ಹಿಡಿದುಕೊಂಡು, ಸದ್ದಿಲ್ಲದಂತೆ ಮುಂಗಾಲಿನ ಮೇಲೆ ನಡೆಯುತ್ತ ಹಜಾರವನ್ನು ದಾಟಿ ಬೀದಿಯ ಬಾಗಿಲಿಗೆ ಬಂದು, ಅಗಳಿಗೆ ಕೈಹಾಕಿದನು. ಆ ಕ್ಷಣದಲ್ಲಿ ಅವನಿಗೆ ಕೈಬಳೆಗಳ ಸದ್ದು ಹೊರಗೆ ಕೇಳಿಸಿತು. ಸೂರಪ್ಪನು ಚಕಿತನಾಗಿ ಸರ್ರನೆ ಅಗಳಿಯನ್ನೆಳೆದು ಬಾಗಿಲನ್ನು ತೆರೆದನು. ಲಾಟೀನಿನ ಮಂಕು ಬೆಳಕಿನಲ್ಲಿ ಅವನಿಗೆ ಅಲ್ಲೇ ಹೊಸಲಿನ ಬಳಿ ಒಂದು ಸ್ತ್ರೀವ್ಯಕ್ತಿ ಕಾಣಿಸಿತು. ಕಾಂದಹಾರಿ ಹೆಂಗಸು, ಚೀಟಿನ ಪರಕಾರ, ನೀಲಿಯ ರೇಷ್ಮೆ ಅಂಗಿ ಹಾಕಿದ್ದಳು. ತಲೆಗೆ ಕೆಂಪು ಚೌಕವನ್ನು ಕಟ್ಟಿದ್ದಳು. 'ಕಾರಬಾ' ಮಣಿಯ ಕೊರಳಸರವು ಎದೆಯ ಮೇಲೂ ಬಿದ್ದಿದ್ದಿತು.

ಈ ದೃಶ್ಯವನ್ನು ಕಂಡ ಕ್ಷಣದಲ್ಲಿ ಸೂರಪ್ಪನು ಭ್ರಾಂತನಾಗಿ ಕಲ್ಲಿನ ಪ್ರತಿಮೆಯಂತಾದನು. ಆದರೆ ಅದೇ ಕ್ಷಣದಲ್ಲಿ ಅವಳು "ದೇವರೇ! ಎಂದು ಪಿಸುಮಾತಿನಲ್ಲಿ ಗಟ್ಟಿಯಾಗಿ ಹೇಳಿ, ಕೆಳಗೆ ಕುಸಿದುಬಿದ್ದು ಅವನ ಕಾಲುಗಳನ್ನು ತನ್ನೆರಡು ಕೈಗಳಿಂದಲೂ ಬಾಚಿ ತಬ್ಬಿಕೊಂಡಳು. ಆ ಮಾತು, ಸ್ವರಗಳನ್ನು ಕೇಳಿದ ಸೂರಪ್ಪನು ಆಶ್ಚರ್ಯ, ಆನಂದ – ಆದರೂ ಕೊಂಚ ಅನುಮಾನದಿಂದ ತಟ್ಟನೆ ಲಾಟೀನನ್ನು ಅವಳ ಮುಖದ ಬಳಿಗೆ ತಂದು ನೋಡಿದನು. ಅವಳ ಅರೆಯೆತ್ತಿದ ಕಣ್ಣೀರಿನ ದೈನ್ಯದ ಮುಖವು ಕಂಡಿತು.

"ದೇವು!" ಸೂರಪ್ಪನು ಲಾಟೀನನ್ನು ಕೆಳಗೆ ಕುಕ್ಕಿ, ತಾನು ಬಗ್ಗಿ ಆ ಹೆಂಗಸನ್ನು ಎರಡು ಕೈಗಳಿಂದಲೂ ಹಿಡಿದೆತ್ತಿ ತಬ್ಬಿಕೊಂಡ. "ದೇವು! ದೇವು! ನನ್ನ ಚಿನ್ನ! ಎನ್ನುತ್ತ ಅವಳ ತಲೆಯ ಚೌಕವನ್ನು ತೆಗೆದು ಕುರುಳನ್ನು ನೇವರಿಸಿದನು. ಅವಳಾದರೋ ಏನು ಮಾತನ್ನೂ ಆಡಲಾರದೆ ಅವನ ಭುಜವನ್ನು ತೊಯಿಸಿದಳು.

ಸೂರಪ್ಪನ ಆನಂದವು ಉಕ್ಕಿ ಸುರಿಯಿತು. ಅವನು ಆತುರದಿಂದ ಅಲ್ಲಿಂದಲೇ ಗಟ್ಟಿಯಾಗಿ "ಅಮ್ಮ! ದೇವು ಬಂದಿದಾಳೆ! ಸಿಕ್ಕಿದಳು! ಎಂದು ಹಜಾರದ ಕಡೆಗೆ ಕೂಗಿದನು. ಒಳಗೆ ಕೆಮ್ಮಿದ ಶಬ್ದ ಕೇಳಿಸಿತು. ಗಂಡ–ಹೆಂಡಿರು ಬೇರೆಯಾದರು. ಹುಡುಗಿಯು ಹೆಜ್ಜೆಯನ್ನು ಹಿಂದಿಡುವಾಗ ಕುಂಟುತ್ತ "ಹಾ!" ಎಂದು ಕುಳಿತುಬಿಟ್ಟಳು. ಅವನು "ಏನಾಯ್ತು? ಏನಾಗಿದೆ?" ಎಂದು ಅವಳ ಕಾಲಿನ ಕಡೆಗೆ ನೋಡಿದನು. ಎರಡು ಪಾದಗಳೂ ಧೂಳಿನಿಂದ ಮುಚ್ಚಿದ್ದುವು. ದಪ್ಪವಾಗಿ ಬಾತುಕೊಂಡಿದ್ದವು. ಎಡಗಾಲಿನಿಂದ ರಕ್ತವು ಸೋರುತ್ತಿತ್ತು. ಇದನ್ನು ಕಂಡೊಡನೆ ಅವನು ತನ್ನ ಟವಲನ್ನು ಹರಿದು, ವರಾಂಡದಲ್ಲಿ ಹಸುವಿಗೆ ಇಟ್ಟಿದ್ದ ನೀರಿನಲ್ಲಿ ಆ ಚೂರನ್ನು ಒದ್ದೆಮಾಡಿ ಅವಳ ಪಾದಕ್ಕೆ ಕಟ್ಟಿದನು.

ಇಷ್ಟರಲ್ಲಿ ಇಳಿವಯಸ್ಸಿನ ಒಬ್ಬಳು ಮಡಿ ಹೆಂಗಸು – ಸೂರಪ್ಪನ ತಾಯಿ ಗಂಗಮ್ಮನವರು – ತಡವರಿಸುತ್ತ ಹೊರಗೆ ಬಂದವರು, ಹುಡುಗಿಯ ಕಡೆಗೆ ನೋಡಿ ಅನುಮಾನದಿಂದ "ಇದೇನೋ ಮಗು! ದೇವಮ್ಮ...." ಎಂದು ಹೇಳುವುದರಲ್ಲೇ ಸೂರಪ್ಪನು ಮಧ್ಯೆ ಬಾಯಿಹಾಕಿ "ಹು ಕಣಮ್ಮ, ಅವಳೆ" ಎಂದು ಹೇಳಿದನು. ಅವರು ಬಗ್ಗಿ ನೋಡಿ ದೇವಮ್ಮನ ಮುಖವನ್ನು ಕಂಡು ಇದೇನೇ ತಾಯಿ? ಎಲ್ಲಿ ಹೋಗಿದ್ದೆ ಇಷ್ಟು ದಿನ? ಏನು ವೇಷ ಇದು?" ಎಂದು ಕೇಳಿದರು. ಸೂರಪ್ಪನಿಗೂ ಈಗ ಎಚ್ಚರವಾದಂತಾಗಿ, ಅವನೂ ಉತ್ತರವನ್ನು ನಿರೀಕ್ಷಿಸಿದನು. ಆದರೆ ಈ ಪ್ರಶ್ನೆಗಳನ್ನು ಕೇಳಿದ ದೇವಮ್ಮನಿಗೆ ನೆನಪು ಕವಿದು ಬಂದು ಮತ್ತೆ ಕೊರಳು ಉಬ್ಬಿತು; ಮಾತು ಹೊರಡಲಿಲ್ಲ. ಮತ್ತೆ ಅಳುವು ಒತ್ತಿ ಬಂದಿತು. ಉತ್ತರಕ್ಕೆ ಬದಲಾಗಿ ಅತ್ತಳು. ಈಗ ಒಳಗಿನಿಂದ ಒಬ್ಬ ಸಣ್ಣ ವಯಸ್ಸಿನ ಮಡಿ ಹೆಂಗಸು– ಸೂರಪ್ಪನ ಅಕ್ಕ, ಗುಂಡಮ್ಮ– ಒಳಗಿನಿಂದ ಬಂದು ನೋಡಿ "ದೇವಮ್ಮ!.... ಹೀಗಿದಾಳಲ್ಲಮ್ಮಾ! ಏನಾಯ್ತು ಇವಳಿಗೆ?" ಎಂದು ಕೇಳಿದಳು. ಸೂರಪ್ಪನೂ ಗಂಗಮ್ಮನವರೂ ಸ್ವಲ್ಪ ತಡೆದುಕೊ' ಎನ್ನುವಂತೆ ಕೈಸನ್ನೆ ಮಾಡಿದರು. ಇದೇ ಕ್ಷಣದಲ್ಲಿ ಒಳಗಿನಿಂದ "ಅಮ್ಮಾ!... ಅಜ್ಜಿ! ಎಂದು ಮಗುವಿನ ಧ್ವನಿಯು ಕೇಳಿಬಂದಿತು. ಇದನ್ನು ಕೇಳಿದೊಡನೆ ದೇವಮ್ಮನ ಅಳುವು ನಿಂತಿತು. ಅವಳು ತಟ್ಟನೆ ತಲೆಯನ್ನೆತ್ತಿ "ಅಪ್ಪಾ ಚಂದೂ ಬಾಮ್ಮಾ ಇಲ್ಲಿ ಇಲ್ಲಿದೀನಿ" ಎಂದು ಏಳುವಂತೆ ಚಲಿಸಿದಳು. ಅಷ್ಟರಲ್ಲೇ ಎರಡು ವರ್ಷದ ಮಗುವು "ಅಮ್ಮಾ! ಅಮ್ಮಾ!" ಎನ್ನುತ್ತ ಕಣ್ಣುಜ್ಜಿಕೊಳ್ಳುತ್ತ, ಹೊಸಿಲನ್ನು ಎಡವಿಕೊಂಡು ಬೀಳುವುದನ್ನೂ ತಿಳಿಯದೆ ತಪ್ಪು ಹೆಜ್ಜೆ ಹಾಕುತ್ತ ಓಡಿಬಂದಿತು. ಆದರೆ ದೇವಮ್ಮನನ್ನು ಸಮೀಪಿಸಿದಾಗ ಅವಳ ಕಡೆಗೆ ದಿಟ್ಟಿಸಿ ನೋಡಿ, ಅನುಮಾನದಿಂದ ಅಜ್ಜಿಯ ಬಳಿಯಲ್ಲೇ ನಿಂತಿತು. ಅವಳು "ಚಂದು! ಯಾಕಮ್ಮಾ ಬಾ ಕಂದ!" ಎಂದೊಡನೆ 'ಅಮ್ಮಾ!' ಎಂದು ಓಡಿ ಹೋಗಿ ಅವಳ ಕೊರಳನ್ನು ತನ್ನ ಪುಟ್ಟ ಕೈಗಳಿಂದ ಬಳಸಿ ಅಪ್ಪಿಕೊಂಡಿತು. ಅವಳೂ "ಚಿನ್ನ! ನನ್ನ ಚಿನ್ನ!" ಎನ್ನುತ್ತ ಮಗುವನ್ನು ಬಾಚಿ ತಬ್ಬಿಕೊಂಡು ತನ್ನ ಕೆನ್ನೆಯನ್ನು ಅದರ ಕೆನ್ನೆಗೆ ಮತ್ತೆ ಮತ್ತೆ ಒತ್ತುತ್ತ ಅದರ ತಲೆ, ಮೈ, ಕೈ–ಕಾಲುಗಳನ್ನೆಲ್ಲ ಅಂಗೈಯಿಂದ ತಡವರಿಸಿದಳು.

ತಾಯಿ ಮಕ್ಕಳ ಈ ಪುನರ್ಮಿಲನದ ಸೌಖ್ಯಕ್ಕೆ ಅಡ್ಡಿ ತರದಂತೆ ಯಾರೂ ಸ್ವಲ್ಪ ಹೊತ್ತು ಮಾತನಾಡಲಿಲ್ಲ. ಅನಂತರ ಗಂಗಮ್ಮನವರೇ ಮಾತನ್ನು ಮೊದಲು ಮಾಡಿದರು.

"ದೇವಮ್ಮ, ನಿನಗಾಗಿ ಎಷ್ಟು ಹುಡುಕಿಸಿದನಮ್ಮ – ನಿನ್ನ ಗಂಡ ಸುತ್ತುಮುತ್ತಿನ ಹಳ್ಳಿಗೆಲ್ಲ ಜನ ಕಳುಹಿಸಿ ಹುಡುಕಿಸಿದ. ಹಳ್ಳಿಯ ಕೆರೆ ಬಾವಿಗಳನ್ನೂ ಕೂಡ, ಶೋಧಿಸಿ ನೋಡಿಸಿದ; ಪೋಲೀಸಿನವರಿಗೂ ಸಮಾಚಾರ ಕೊಟ್ಟಿದ್ದಾಯಿತು. ಇಷ್ಟಾದರೂ ನಿನ್ನ ಸುಳಿವೇ ತಿಳೀಲಿಲ್ಲ. ಆ ಸಂಜೆ ಸೀ ನೀರು ತರೋದಕ್ಕೆ ಬಾವಿಗೆ ಹೋದಮೇಲೆ ಮಾಯವಾದ ಹಾಗೇ ಆಗಿತ್ತಲ್ಲ. ನೀರು ತುಂಬಿದ ಕೊಡ ಕೂಡ ಬಾವಿಯ ಕಟ್ಟೇ ಮೇಲೇ ಇತ್ತು. ನೀನು ಎಲ್ಲಿಗೆ ಹೊರಟುಹೋಗಿದ್ದೆಯೆ, ತಾಯಿ?"

"ನಾನಾಗಿ ಎಲ್ಲಿಗೆ ಹೋಗಲಿ? ಏನು ಕಾರಣ ಇತ್ತು?" ಅವಳು ನಿಧಾನವಾಗಿಯೇ ಹೇಳಿದಳು.

"ಮತ್ತೆ?" ಸೂರಪ್ಪನು ಆತುರದಿಂದ ಕೇಳಿದನು.

"ಅಪಹರಿಸಿಕೊಂಡು – ಎಳೆದುಕೊಂಡು ಹೋದರು– ದುಷ್ಟರು."

"ಹ! ಯಾರು?"

"ಕಂದಾರಿಗಳು."

"ತೋಟದ ಹತ್ತಿರ ಬೀಡಾರ ಮಾಡಿದ್ದೋರು?"

"ಹುಂ" ದೇವಮ್ಮನು ತಲೆಯಾಡಿಸಿದಳು.

"ಪಾಪಿ ಮುಂಡೇ ಮಕ್ಕಳೇ! ಇವರಿಗೇನು ಬಂದಿತ್ತು ಹೊತ್ತು ಕಾಲ" ಗಂಗಮ್ಮನವರು ಶಪಿಸಿದರು.

"ಅದು ಹೇಗೆ ಸಾಧ್ಯವಾಯ್ತು ಅಂತ. ಅವರ ಕೈಗೆ ಸಿಕ್ಕೋ ಅಷ್ಟು ಹತ್ತಿರ..." ಸೂರಪ್ಪನು ಅನುಮಾನಿಸಿದ.

“ನಾನು ಹೋಗಲಿಲ್ಲ. ಆವೊತ್ತು ಸೀನೀರಿಗೆ ಹೋದಾಗ ಮುಚ್ಚಂಜೆಯಾಗಿತ್ತು. ನಾನು ಬೇಗ ಬೇಗ ಒಂದು ಕೊಡ ನೀರು ಸೇದಿಕೊಂಡು ಇನ್ನೇನು– ತಲೆಯ ಮೇಲೆ ಇಟ್ಟುಕೋತಾ ಇದ್ದೆ. ಅಷ್ಟು ಹೊತ್ತಿಗೆ ಒಬ್ಬ ಕಂದಾರಿ ಗಂಡಸು ಅಲ್ಲಿಗೆ ಬಂದ. ಯಮನ ಹಾಗಿದ್ದ. ನಂಗೆ ಭಯವಾಯ್ತು. ಕೊಡ ಅಲ್ಲೇ ಬಿಟ್ಟು ಓಡಿಬರೋಣ ಎನ್ನಿಸಿತು. ಆದರೆ ಕಾಲೇ ಬರಲಿಲ್ಲ. ಅವನು ಅಷ್ಟು ನೀರು ಕೇಳಿ, ತನ್ನ ದಪ್ಪ ರುಮಾಲನ್ನು ಬಿಚ್ಚಿ ಕೊಂಕುಳಿಗಿಟ್ಟುಕೊಂಡು ಮಂಡಿಯೂರಿ ಕುಳಿತ. ನಂಗೇನೂ ತೋಚದೆ ಹಾಗೇ ಕಟ್ಟೆಯ ಮೇಲಿನಿಂದ ಕೊಡ ಬಗ್ಗಿಸಿದೆ. ಸಾಕಾದ ಮೇಲೆ ಅವನು ಎದ್ದು ತನ್ನ ರುಮಾಲಿನಿಂದ ಗಡ್ಡ ಬಾಯಿ ಎಲ್ಲ ಒರೆಸಿಕೊಳ್ಳುತ್ತ ಅತ್ತಿತ್ತ ತಿರುಗಿ ನೋಡಿ, ಯಾರನ್ನೂ ಕಾಣದೆ, ತಟ್ಟನೆ ಮುಂದೆ ನುಗ್ಗಿ, ತನ್ನ ರುಮಾಲನ್ನು ನನ್ನ ಬಾಯಿಗೆ ಬಿಗಿದ. ನನಗೆ ಕೂಗಿಕೊಳ್ಳಲಾಗಲಿಲ್ಲ. ಅಷ್ಟು ಒದ್ದಾಡಿದೆ. ಬಿಡಾರವನ್ನು ಸೇರಿದ ಕೆಲವು ನಿಮಿಷಗಳಲ್ಲೇ ಅವರ ಗುಂಪು ಪ್ರಯಾಣಕ್ಕೆ ಸಿದ್ಧವಾಗಿ ಹಳ್ಳಿಯನ್ನು ಬಿಟ್ಟಿತು.”

“ಎಲ, ಎಲಾ! ಎಷ್ಟು ಬೇಗ! ನಾವು ಹುಡುಕೋದಕ್ಕೆ ಹೋಗುವ ಹೊತ್ತಿಗಾಗಲೇ ಅವರು ಎಲ್ಲೆಲ್ಲೂ ಕಂಡುಬರಲಿಲ್ಲ. ಯಾವ ದಾರಿಯಲ್ಲೂ ಅವರು ಸಿಕ್ಕಲಿಲ್ಲ. ‘ಎಲ್ಲೋ ಮಧ್ಯಾಹ್ನದಲ್ಲೇ ಹೋಗಿಬಿಟ್ಟಿರಬೇಕು, ನಿಂಗೂ ಅವರಿಗೂ ಸಂಬಂಧವೇ ಇರಲಾರದು’ ಅನ್ನೋ ಅನುಮಾನ ಕೂಡ ಬಂತು” ಸೂರಪ್ಪ ನೆನಿಸಿಕೊಂಡು ಹೇಳಿದ.

“ಅವರು ಯಾವ ದಾರಿಯನ್ನೂ ಹಿಡಿಯಲಿಲ್ಲ. ಕಾಡು–ಮೇಡುಗಳಲ್ಲೇ ರಾತ್ರಿಯೆಲ್ಲಾ ನಡೆದರು.

“ನೀನೂ ಅವರ ಜೊತೆಯಲ್ಲೇ ಅಲ್ಲೆಲ್ಲ ನಡೆದೆಯ?”

“ಹುಂ, ಹಳ್ಳಿಯಿಂದ ಒಂದೆರಡು ಮೈಲಿಯಷ್ಟು ಅವನು ನನ್ನನ್ನು ಹಾಗೇ ಹೊತ್ತುಕೊಂಡು ನಡೆದ. ಕಾಡಿನ ಮಧ್ಯದಲ್ಲಿ ನನ್ನ ಕಟ್ಟುಗಳನ್ನು ಬಿಚ್ಚಿ, ನಾಲ್ಕಾರು ಜನ ಸುತ್ತು ಗಟ್ಟಿ ದೊಡ್ಡ ಚಾಕುಗಳನ್ನು ತೋರಿಸುತ್ತ ‘ಗಪ್‌ಚುಪ್! ಎಂದು ಬಹಳವಾಗಿ ಬೆದರಿಸಿ, ನಡೆಯುವಂತೆ ಸನ್ನೆ ಮಾಡಿದರು. ನಾನು ಪ್ರತಿಭಟಿಸಿದ್ದರೆ. ಮೊಂಡುತನ ಮಾಡಿದರೆ ಅವರು ಕೊಂದುಬಿಡೋದಕ್ಕೂ ಹೇಸುವುದಿಲ್ಲ– ಅಂತ ನಂಗೆ ಖಂಡಿತವಾಯ್ತು. ನಂಗೆ ಸಾಯೋದಕ್ಕೆ ಇಷ್ಟವಿರಲಿಲ್ಲ. ಇಲ್ಲಿಗೆ ಮತ್ತೆ ಹೇಗಾದರೂ ಬರುವ ಆಶೆಯಿತ್ತು. ಏನು ಮಾಡಲಿ? ನಡೆದೆ.”

“ಪಾಪ! ಏನು ಅನುಭವಿಸಿದೆಯಮ್ಮ” ಗಂಗಮ್ಮನವರು ಕರಗಿ ಹೇಳಿದರು.

“ಧೂರ್ತರಾ! ಅಲ್ಲಿ ಪೋಲೀಸಿನವರು ಗುಮಾನಿಯ ಮೇಲೆ ಅವರನ್ನು ಹಿಡಿದಾಗಲೂ ನೀನು ಅವರೊಡನೆ ಇರಲಿಲ್ಲವಲ್ಲ?” ಸೂರಪ್ಪನು ಕೋಪ, ಆಶ್ಚರ್ಯಗಳಿಂದ ಕೇಳಿದ.

“ಅವರು ಬಹಳ ಎಚ್ಚರಿಕೆಯಿಂದ ನನ್ನ ಕೈಕಾಲು–ಬಾಯಿಗಳನ್ನು ಕಟ್ಟಿ ನನ್ನನ್ನು ಯಾವುದೋ ಪೊದೆಯೊಳಗೋ, ಬಂಡೆಯ ಸಂದಿನಲ್ಲೋ ಬಚ್ಚಿಟ್ಟು ತಾವು ದೂರದಲ್ಲಿರುತ್ತಿದ್ದರು. ಭಯವು ತಪ್ಪಿಹೋಗಿ ರಾತ್ರಿ ಪ್ರಯಾಣ ಮತ್ತೆ ಮೊದಲಾದಾಗಲೇ ನಂಗೆ ಬಂಧವಿಮೋಚನೆಯಾಗುತ್ತಿತ್ತು.”

“ಅನ್ನ, ಆಹಾರ!”

“ನಾಲ್ಕು ದಿನ ಏನೂ ಇಲ್ಲದೆ ಕಳೆದೆ. ಅವರು ತಂದಿಟ್ಟದ್ದನ್ನು ಮುಟ್ಟಲಿಲ್ಲ. ಆದರೆ ಐದನೆಯ ದಿನ ಹಸಿವು, ನೀರಡಿಕೆ ನಿತ್ರಾಣ ಅಸಾಧ್ಯವಾಗಿ...

“ತಿಂದುಬಿಟ್ಟೆಯಾ, ಆ ಮುಸಲ್ಮಾನರ ಅನ್ನ?” ಗುಂಡಮ್ಮನು ಆತುರದಿಂದ ಕೇಳಿದಳು. ದೇವಮ್ಮನು ತಲೆತಗ್ಗಿಸಿ ನಿಂತಿದ್ದಳು.

“ಬಡಪಾಯಿ, ಇನ್ನೇನು ಮಾಡುತ್ತಾಳೆ?” ಸೂರಪ್ಪನು ವಹಿಸಿಕೊಂಡನು.

“ಆದರೆ ಜಾತಿ, ಮತ....” ಗುಂಡಮ್ಮನು ಮುಂದುವರಿಸಿದಳು.

“ಇರಲಿ ಬಿಡಕ್ಕ, ಅದೇನು ಮಾತು. ನೋಡೋಣ” ಎಂದು ಅಕ್ಕನಿಗೆ ಹೇಳಿ, ಸೂರಪ್ಪನು ಹೆಂಡತಿಯ ಕಡೆಗೆ ತಿರುಗಿ.

"ಆಮೇಲೆ ಹೇಗೆ ಬಂದೆ ಇಲ್ಲಿಗೆ?" ಎಂದು ಕೇಳಿದನು.

"ನಾನಂತೂ ನಿನ್ನ ಆಸೇನೇ ಬಿಟ್ಟುಬಿಟ್ಟೆವಮ್ಮ" ಗಂಗಮ್ಮನವರು ಹೇಳಿದರು.

"ಐದನೆಯ ಸಂಜೆಯ ಹೊತ್ತಿಗೆ ದೊಡ್ಡ ಊರಿನ ಹತ್ತಿರಕ್ಕೆ ಹೋದೆವು. ಚೆನ್ನಾಗಿ ರಾತ್ರಿ ಆದಮೇಲೆ ಊರನ್ನು ಹೊಕ್ಕೆವೆ. ಅನುಮಾನ ಹುಟ್ಟದಹಾಗೆ ಹೆಂಗುಸರೆಲ್ಲ ಬುರುಕಿ ಹಾಕಿಕೊಂಡು ನಂಗೂ ಒಂದನ್ನು ಹಾಕಿದರು."

"ಅಬ್ಬಬ್ಬಾ; ಎಂಥಾ ಜನ!.... ಆ ಮೇಲೆ?"

ಅದೇ ರಾತ್ರಿ ಬಹಳ ಹೊತ್ತಾದ ಮೇಲೆ, ನನ್ನನ್ನು ಒಂದು ಮಸೀದಿಗೆ ಕರೆದುಕೊಂಡು ಹೋದರು. ಅಲ್ಲಿ ಒಬ್ಬ ಮುಲ್ಲಾ, ನಂಗೆ ಏನೋ ಮಂತ್ರ ಹೇಳುವಂತೆ ಹೇಳಿಕೊಟ್ಟ. ಅದು 'ಕಲ್ಮ' 'ನಮಾಸ್' ಅಂತೆ. ನಾನು ಮೊದಮೊದಲು ವಿರೋಧಿಸಿ, ಅದನ್ನು ಹೇಳಲಿಲ್ಲ."

"ಕಡೆಗೆ ಹೇಳಿಬಿಟ್ಟೆಯಾ?" ಗುಂಡಮ್ಮನು ಪ್ರಶ್ನಿಸಿದಳು.

"ಹೇಳದಿದ್ದರೆ ಗೋಮಾಂಸವನ್ನು ಬಾಯಿಗೆ ತುರುಕಿ ಜಾತಿ ಕೆಡಿಸುವುದಾಗಿ ಬೆದರಿಸಿದರು. ಅದೇನು ಸುಳ್ಳು ಬೆದರಿಕೆಯಲ್ಲ. ಇನ್ನೇನು ಮಾಡಲಿ? ಹಾಗೆ ಜಾತಿ ಕೆಡುವುದಕ್ಕಿಂತ ಅದನ್ನು ಹೇಳೋದೇ ಕಡಿಮೆಯ ಪಾಪ– ಅಂತ ತಿಳಿದು ಹೇಳಿಬಿಟ್ಟೆ. ಅವರೆಲ್ಲರೂ ಸಂತೋಷಪಟ್ಟು 'ಇನ್ನು ನೀನು ನಮ್ಮವಳಾದೆ' ಅಂದರು."

"ಹಾಗಾದರೆ ಜಾತಿ ಹೋಯ್ತು?" ಗುಂಡಮ್ಮನು ಒತ್ತಿ ಕೇಳಿದಳು.

"ಅದೇನೋ ಕಾಣೆ; ಅವರು ಹಾಗಂದರು!"

"ಏನು ಅನ್ಯಾಯ!" ಗಂಗಮ್ಮನವರು ಗಂಭೀರವಾದರು.

"ಇದಕ್ಕೇನು ಮಾಡೋದು ದೇವರೆ" ಎಂದು ಸೂರಪ್ಪನೂ ಗಂಭೀರವಾಗಿ ಆಲೋಚಿಸತೊಡಗಿದ.

ಸ್ವಲ್ಪ ಹೊತ್ತು ಇವರ ಮಧ್ಯ ಮಾತಿರಲಿಲ್ಲ. ದೇವಮ್ಮನು ಒಬ್ಬರ ಮುಖದಿಂದ ಇನ್ನೊಬ್ಬರ ಮುಖದ ಕಡೆಗೆ ತನ್ನ ದೈನ್ಯ ದೃಷ್ಟಿಯನ್ನು ಬೀರುತ್ತ. ಮಗುವನ್ನು ಮತ್ತಷ್ಟು ಬಿಗಿಯಾಗಿ ಅಪ್ಪಿಕೊಳ್ಳುತ್ತಿದ್ದಳು.

"ಹಾಗಾದರೆ ಇಷ್ಟೆಲ್ಲ ಆಯ್ತು!" ಸೂರಪ್ಪನು ತನಗೆ ತಾನೇ ಗಟ್ಟಿಯಾಗಿ ಹೇಳಿಕೊಂಡ.

"ಅಷ್ಟಕ್ಕೇ ಮುಗಿಯಲಿಲ್ಲ. ನನ್ನ ಗತಿ!" ನಿಂತಿದ್ದ ಕಣ್ಣೀರು ಮತ್ತೆ ಹರಿಯತೊಡಗಿತು.

"ಇನ್ನೂ ಇದೆಯೆ? ಆ? ಹುಂ. ಹೇಗೆ ತಪ್ಪಿಸಿಕೊಂಡು ಬಂದೆ?" ಸೂರಪ್ಪನು ಭಯ ಆವೇಶಗಳಿಂದ ಕೇಳಿದ.

"ನಾವು ಮುಸಲ್ಮಾನನೊಬ್ಬನ ಮನೆಯಲ್ಲಿ ಉಳಿದುಕೊಂಡೆವು. ಆ ರಾತ್ರಿಯಲ್ಲಿ ನಡೆದ ಮಾತುಕತೆಯಿಂದ ಆ ಕಂದಾರಿಗಳು ನನ್ನನ್ನು ಆ ಮನೆಯವನಿಗೆ ಮದುವೆಗೋಸ್ಕರ ಮಾರಿದರೆಂದು ತಿಳಿಯಿತು?"

"ಹ!"

"ಹುಂ ಹಾಗೇ ಇತ್ತು. ಮಾರನೆಯ ದಿನ ಒಬ್ಬ ಕಾಜಿ ಬಂದ. ನಂಗೆ 'ನಿಕಾ' ಆಗುವುದಾಗಿ ಕಂದಾರಿಗಳು ತಿಳಿಸಿದರು. ನಾನು ಬೇಡವೆಂದು ಅಂಗಲಾಚಿ ಬೇಡಿಕೊಂಡೆ. ಅವರು ಕೇಳಲಿಲ್ಲ. ನನ್ನ ಎದೆ ಒಡೆಯುವಂತೆ ಅಳು ಬಂತು; ಅತ್ತೆ. ಅವರ ಮನಸ್ಸು ಬೇರೆ ಕರಗಲಿಲ್ಲ. ಕಡೆಗೆ ಕೋಪದಿಂದ ಮೊಂಡುತನ ಮಾಡಿ ವಿರೋಧಿಸಿದೆ. ಅವರೇ ಬಗ್ಗುವರು? ಮೊದಲು ಪುಸಲಾಯಿಸಿ ನೋಡಿದರು. ಪ್ರಯೋಜನವಾಗಲಿಲ್ಲ. ಏನೇನೋ ಆಶೆ ತೋರಿಸಿದರು. ನಾನು ಒಪ್ಪಿಕೊಳ್ಳಲಿಲ್ಲ. ಆಮೇಲೆ ಹೆದರಿಸಿದರು. ಅಬ್ಬಬ್ಬ, ಎಂಥೆಂಥ ಬೆದರಿಕೆ! ಇಲ್ಲಿ ಹೇಳಲಾರೆ ಆದರೆ ನಾನು ಸಾವಿಗೆ ಸಿದ್ಧಳಾಗಿದ್ದು ಅವನ್ನೆಲ್ಲ ನಿರ್ಲಕ್ಷಿಸಿದೆ. ಕಡೆಗೆ ಅವರು ಬಲಾತ್ಕಾರದಿಂದ ಕಾಜಿಯ ಕೆಲಸವನ್ನು ನೆರವೇರಿಸಿದರು."

"ಮದುವೆಯೂ ಆಗಿಹೋಯ್ತೆ?" ಗುಂಡಮ್ಮನು ಚುಚ್ಚಿ ಕೇಳಿದಳು.

"ಹುಂ. ಹೊರಾಚಾರ."

"ರಾಮ ರಾಮ" ಗಂಗಮ್ಮನವರು ನಿಟ್ಟುಸಿರನ್ನು ಬಿಟ್ಟರು.

ಸೂರಪ್ಪನ ಬಾಯಿ ಕಟ್ಟಿಹೋಗಿತ್ತು. ದೇವಮ್ಮನು ಮಾತನ್ನು ಮುಂದುವರಿಸಿದಳು :

"ನನ್ನ ಹಟವನ್ನು ನೋಡಿದ ಮನೆಯವನು, ನಾನು ಸರಿಯಾಗುವವರೆಗೂ ಅವರಿಗೆ ಹಣ ಕೊಡೋದಿಲ್ಲ. ಅವರು ಅಲ್ಲಿಯತನಕ ಅಲ್ಲೇ ಇರಬೇಕು– ಅಂತ ಹೇಳಿದ. ಅವರು ತಮ್ಮ ಕೆಲಸ ಆಯ್ತು, ಮುಂದೆ ಅವನೇ ನನ್ನನ್ನು ಹೇಗೆ ಬೇಕಾದರೂ ಸರಿ ಮಾಡಿಕೋಬೇಕು, ಹಣ ಕೊಟ್ಟುಬಿಡಬೇಕು– ಅಂತ ಕೇಳಿದರು. ವ್ಯಾಜ್ಯಕ್ಕೆ ಮೊದಲಾಯ್ತು. ಆಗ ನಾನು 'ಇವರೇನಾದರೂ ಇವನು ಹೇಳಿದ ಹಾಗೆ ಇದ್ದುಬಿಟ್ಟರೆ ನಂಗೆ ಉಳಿಗಾಲವಿಲ್ಲ' ಅಂತ ಯೋಚಿಸಿಕೊಂಡು, ಹಟಕ್ಕಿಂತ ಉಪಾಯ ಮಾಡಿ ತಪ್ಪಿಸಿಕೋಬೇಕು– ಅಂತ ನಿಶ್ಚಯ ಮಾಡಿದೆ. ನನ್ನ ಗತಿಗೆ ಹೊಂದಿಕೊಂಡವಳ ಹಾಗೆ ನಟಿಸಿ, ನಾನು ಸರಿಯಾಗಿರುವುದಾಗಿ ಒಪ್ಪಿಕೊಂಡೆ. ಇದನ್ನು ಕಂಡು ಅವನಿಗೂ ಅವರಿಗೂ ಸಂತೋಷವಾಯ್ತು. ಅವರು ಹಣವನ್ನು ತೆಗೆದುಕೊಂಡು ಹೋದರು."

"ಹುಂ."

"ಅವನಲ್ಲಿ ಪ್ರೇಮವನ್ನು ನಟಿಸಿದೆ. ಅವನನ್ನು ಆನಂದಪಡಿಸಿದೆ. ನನ್ನಲ್ಲಿ ನಂಬಿಕೆ ಹುಟ್ಟಿಸಿದೆ. ನನ್ನ ಬಗ್ಗೆ ಧೈರ್ಯ ಹುಟ್ಟಿಸಿದೆ."

"ಹೂಂ."

"ಸಂಜೆಯಲ್ಲಿ ಹೊರಗಾಗಿರುವುದಾಗಿ ತಿಳಿಸಿ ಆ ದಿನ, ಮಾರನೆಯ ದಿನ ಎರಡನ್ನೂ ಕಳೆದೆ. ಮೂರನೆಯ ರಾತ್ರಿ ಅವನು ಶಂಕೆಪಡದೆ ಮಲಗಿದ್ದಾಗ ತಪ್ಪಿಸಿಕೊಂಡೆ. ದಿನದಲ್ಲೆಲ್ಲ ಅವಿತಿದ್ದು, ರಾತ್ರಿಯಲ್ಲಿ ಬೆಂಗಳೂರು–ಹರಿಹರದ ರಸ್ತೆಗೆ ಹತ್ತಿರವಾಗಿ ಹೊಲಗಳಲ್ಲೇ ನಡೆದು ನಡೆದು ದಾರಿ ಪತ್ತೆಮಾಡಿಕೊಂಡು ಬಂದೆ."

"ಎಂಥ ಸಾಹಸ ನಿಂದು!" ಗಂಗಮ್ಮನವರು ಆಶ್ಚರ್ಯಪಟ್ಟರು.

"ಅಂತೂ ಬಂದೆಯಲ್ಲ ಮತ್ತೆ!" ಸೂರಪ್ಪನು ತೃಪ್ತಿಯಿಂದ ಹೇಳಿದನು.

"ಆದರೇನು ಜಾತಿ ಕೆಟ್ಟುಹೋಗಿದ್ದಾಳಲ್ಲ!" ಗುಂಡಮ್ಮನು ಆಕ್ಷೇಪಿಸಿದಳು.

"ಅಕ್ಕ!" ಸೂರಪ್ಪನು ಕಠಿಣವಾಗಿ ಹೇಳಿದನು.

"ಇರೋದು ಹೇಳಿದೆ ಕಣೋ; ಅದಕ್ಕೇನು? ಅದೇನು ಸುಳ್ಳೆ? ಮದುವೆ ಸಹಿತ ಆಗಿದೆ" ಗುಂಡಮ್ಮನು ಸಾಧಿಸಿದಳು.

"ಅತ್ತಿಗಮ್ಮಾ, ನಾನೇನು ಬೇಕೂಂತ ತಪ್ಪು ಮಾಡಲಿಲ್ಲವಲ್ಲ!" ದೇವಮ್ಮನು ದೈನ್ಯದಿಂದ ಹೇಳಿದಳು.

"ಇರಬಹುದು. ನಾನು ಹಾಗೆ ಹೇಳಲಿಲ್ಲ. ಆದರೆ ಆದದ್ದು ಆಗಿಹೋಯ್ತೋ? ಇಲ್ಲ ಅನ್ನೋದಕ್ಕಾಗುತ್ತೆಯೆ?" ಗುಂಡಮ್ಮನು ಕಠಿಣವಾಗಿ ಲೆಕ್ಕಹಾಕಿ ಹೇಳಿದಳು.

ದೇವಮ್ಮನು ಗಂಡನನ್ನೂ ಅತ್ತೆಯನ್ನೂ ನೋಡಿದಳು. ಅವರು ಪೆಚ್ಚಾಗಿ ಸುಮ್ಮನಿದ್ದರು. ತಾನೂ ತಲೆ ತಗ್ಗಿಸಿದಳು. ಭುಜದ ಮೇಲೇ ಮಲಗಿ ಮತ್ತೆ ನಿದ್ರಿಸುತ್ತಿದ್ದ ಮಗುವನ್ನು ತೊಡೆಯ ಮೇಲೆ ಮಲಗಿಸಿಕೊಂಡು ತಟ್ಟಿದಳು. ಸ್ವಲ್ಪ ಹೊತ್ತು ಯಾರೂ ಮಾತನಾಡಲಿಲ್ಲ.

"ಈಗೇನು ಮಾಡೋದಮ್ಮ?" ಸೂರಪ್ಪನು ಕೇಳಲಾರದಂತೆ ತಾಯಿಯನ್ನು ಪ್ರಶ್ನಿಸಿದನು. ಸಿಡಿದುಹೋಗುವ ತಲೆಯನ್ನು ಹಿಡಿಯುವಂತೆ ಎರಡು ಕೈಗಳಿಂದಲೂ ತಲೆಯನ್ನು ಹಿಡಿದುಕೊಂಡು ಕುಳಿತುಬಿಟ್ಟ.

"ನಂಗೇನೂ ತೋಚದ ಹಾಗಿದೆಯಪ್ಪಾ" ಗಂಗಮ್ಮನವರು ಆಲೋಚಿಸುತ್ತ ಹೇಳಿ, ಇನ್ನೊಂದು ಬಾರಿ ನಿಟ್ಟುಸಿರನ್ನು ಬಿಟ್ಟರು.

"ಯಾಕೆ? ತಪ್ಪು ಮಾಡಿಲ್ಲ. ಆಚಾರ ತಪ್ಪಿದೀನಿ ಅಷ್ಟೆ ಇನ್ನೇನೂ ಮಾಡಿಲ್ಲ. ಅದೂ ನಿರ್ವಾಹವಿಲ್ಲದೆ..."

"ಹುಂ. ಹುಂ. ಗೊತ್ತು. ಅಧೈರ್ಯಪಡಬೇಡ!" ಸೂರಪ್ಪನು ಸಮಾಧಾನದ ಮಾತನ್ನು ಹೇಳಿದನು.

"ಪ್ರಾಯಶ್ಚಿತ್ತ-ಶುದ್ಧಿ ಮಾಡಿ ನನ್ನ...." ಅವನು ಮಾತನ್ನು ಪೂರ್ತಿ ಮಾಡಲಿಲ್ಲ.

"ಆಗಲಿ. ಆಗಲಿ." ಅವನು ಉತ್ತೇಜನ ಕೊಟ್ಟನು.

"ಏನೋಪ್ಪ. ನಂಗೆ ಅನುಮಾನ" ಗುಂಡಮ್ಮನು ಉದ್ಗಾರ ತೆಗೆದಳು.

"ಅಕ್ಕಾ! ನೀನು ಸ್ವಲ್ಪ ಸುಮ್ಮನೆ ಇದ್ದರೆ...." ಸೂರಪ್ಪನು ಬೇಸರದಿಂದ ಗದರಿಸಿದಂತೆ ಹೇಳಿದನು.

"ಇದೇಕೆ ಹೀಗನ್ನುತ್ತೀಯೋ? ಅವಳ ಮೇಲೆ ನಂಗೇನು ದ್ವೇಷವೆ? ಹಾಗೇಂತ ಆಚಾರ ವಿಚಾರಿಸದೆ ಇರೋದಕ್ಕಾಗುತ್ತೆಯೆ? ಬಿಡೋದಕ್ಕಾಗುತ್ತೊ? ಸರಿ; ಬಿಡು!"

ಸೂರಪ್ಪನು ಸುಮ್ಮನೆ ಅಸಹಾಯಕತೆಯ ಹಿಂಸೆಯಿಂದ ಕೈ ಒದರಿದನು. ಮತ್ತೆ ಯೋಚಿಸಿಕೊಂಡು "ಅಮ್ಮಾ, ಶುದ್ಧಿಯೋ ಗಿದ್ಧಿಯೋ, ಎಲ್ಲ ಆಗುತ್ತೆ. ಈಗ ಇವಳಂತೂ ಒಳಕ್ಕೆ ಬರಬೇಕೋ! ನಡೀರಿ ಎಲ್ಲರೂ ಒಳಕ್ಕೆ" ಎಂದು ಒಳಕ್ಕೊಂದು ಹೆಜ್ಜೆಯಿಟ್ಟನು. ದೇವಮ್ಮನು ಮಗುವನ್ನೆತ್ತಿಕೊಳ್ಳಲು ಕೈಹಾಕಿದಳು. ಆದರೆ ಆ ಕ್ಷಣದಲ್ಲಿ ಗುಂಡಮ್ಮನು "ಇದೇನೋ ನಾಚಿಕೆಗೇಡು? ಹೇಳದೆ ಕೇಳದೆ ನೀನೇ ಏನೇನೋ ಮಾಡುತೀಯೆ? ಚೆನ್ನಾಯ್ತು ಬಿಡು!" ಎಂದಳು. ಅವನು "ನೀನು ಸುಮ್ಮನೆ ಇರು ಸಾಕು" ಎಂದು ಗುಂಡಮ್ಮನಿಗೆ ಹೇಳಿ, ಹೆಂಡತಿಯನ್ನು ನೋಡಿ, "ಹುಂ ಏಳು ಬಾ!" ಎಂದನು. ಈಗ ತಾಯಿಯು ಬಾಯಿಹಾಕಿ "ಅಪ್ಪಾ ದುಡುಕಬೇಡ, ಸ್ವಲ್ಪ ತಾಳು. ನಿಂಗೆ ನಿನ್ನ ಹೆಂಡತಿ ಮೇಲೆ ಹೇಗೋ ನಂಗೂ ನನ್ನ ಸೊಸೆಯ ಮೇಲೆ ಪ್ರೇಮ, ಅಭಿಮಾನ ಎಲ್ಲ ಇವೆ. ಆದರೆ ಇಂಥ ವಿಷಯದಲ್ಲಿ ತಿಳಿದೋರನ್ನು ವಿಚಾರಿಸದೆ ನಮ್ಮ ಇಷ್ಟದಂತೆ ಮಾಡಿಬಿಡಬಾರದು; ಅಲ್ಲವೆ?" ಎಂದು ತಡೆದರು. ಸೂರಪ್ಪನಿಗೆ ಬೇಸರ, ಸಿಟ್ಟು ಎರಡೂ ಮೇಲೆ ಹಾಯ್ದುವು. ಅವನು ಹುಬ್ಬು ಗಂಟಿಕ್ಕಿ "ಇನ್ನು ಯಾರು ಏನು ಹೇಳಬೇಕಮ್ಮಾ? ನೀನು ಒಪ್ಪಿದರೆ ಆಯ್ತು!" ಅಂದ.

"ಹಾಗಲ್ಲ, ಮಗು. ಈ ವಿಚಾರದಲ್ಲಿ ನಮಗಿಂತ ತಿಳಿದೋರಿಲ್ಲವೆ? ಪಕ್ಕದ ಮನೆ..."

"ಹುಂ. ಆಗಲಿ ಕಾಳಪ್ಪ ಶಾಸ್ತ್ರಿಗಳನ್ನೇ ಕರೀತೇನಿ.... ಏನು ಅನುಮಾನವೋ...." ಎಂದು ಸೂರಪ್ಪನು ಜಗುಲಿಯನ್ನು ಇಳಿದನು.

"ಮಗು, ಈಗ ಬೇಡ. ಬೆಳಗ್ಗೆ..." ತಾಯಿಯು ಹೇಳುತ್ತಿದ್ದರು. ಆದರೆ ಅದು ಅವನ ಕಿವಿಗೇ ಬೀಳಲಿಲ್ಲ. ಅವನು ಸರಸರನೆ ಹೋಗಿ ಶಾಸ್ತ್ರಿಗಳ ಮನೆಯ ಬಾಗಿಲನ್ನು ಜೋರಾಗಿ ತಟ್ಟಿ "ಶಾಸ್ತ್ರಿಗಳೇ! ಶಾಸ್ತ್ರಿಗಳೇ!" ಎಂದು ಕೂಗಿದನು.

ಕಾಳಪ್ಪ ಶಾಸ್ತ್ರಿಗಳು ಎದ್ದು ಬರುವುದು ಕೊಂಚ ಹೊತ್ತಾಯಿತು. ಅಷ್ಟು ಹೊತ್ತಿಗೆ ಸೂರಪ್ಪನು ಇನ್ನೂ ನಾಲ್ಕಾರು ಬಾರಿ ಬಾಗಿಲನ್ನು ತಟ್ಟಿ ಕೂಗಿದನು. ಶಾಸ್ತ್ರಿಗಳು ಬಾಗಿಲನ್ನು ತೆರೆಯುತ್ತ "ಯಾರು? ಇದೇನು ಗಲಾಟೆ?" ಎಂದು ಗದರಿಸಿದರು.

"ಜೋಯಿಸರೆ, ಅವಳು ಮತ್ತೆ ಬಂದಿದಾಳೆ."

"ಯಾರು ಸೂರಪ್ಪನೇ? ಏನೆಂದೆ ನಿನ್ನ ಹೆಂಡತಿ ಬಂದಳೆ?" ಶಾಸ್ತ್ರಿಗಳು ಕಣ್ಣುಗಳನ್ನು ಉಜ್ಜಿಕೊಳ್ಳುತ್ತ ಕೇಳಿದರು.

“ಹುಂ.”

“ಭಲ ಸದ್ಯ ಸಿಕ್ಕಿದಳಲ್ಲ” ಬಹಳ ಒಳ್ಳೇ ಹುಡುಗಿ. ಪಾಪ! ನೀನು ಅದೃಷ್ಟವಂತ. ಇಷ್ಟು ದಿನ...”

“ಅದೆಲ್ಲ ಹೇಳುತೀನಿ. ದೊಡ್ಡ ಕತೆ. ಮನೆಗೆ ಬನ್ನಿ!”

“ಈಗ?”

“ಹುಂ. ನಿಮ್ಮನ್ನು ಕೇಳೋ ವಿಚಾರ ಇದೆ.”

“ನಡಿ.” ಬಾಗಿಲನ್ನು ಮುಂದಕ್ಕೆ ಮಾಡಿಕೊಂಡು ಹೊರಟರು.

ಸೂರಪ್ಪನ ಮನೆಯ ಮೆಟ್ಟಿಲನ್ನು ಹತ್ತುವಾಗಲೇ ಶಾಸ್ತ್ರಿಗಳು ದೂರದಲ್ಲಿ ದೇವಮ್ಮನನ್ನು ನೋಡಿ “ದೇವಮ್ಮಾ, ಬಂದೆಯಾಮ್ಮಾ, ಕ್ಷೇಮವಾಗಿದೆಯ?” ಎಂದು ಹರ್ಷದಿಂದ ಕೇಳುತ್ತ ಹತ್ತಿರಕ್ಕೆ ಬಂದು ಅವಳ ಉಡುಪನ್ನು ನೋಡಿ, ಅವರೂ ಗಾಬರಿಯಾಗಿ “ಇದೇನು ಸಮಾಚಾರ?” ಎಂದು ಗಂಭೀರವಾಗಿ ಒಂದು ಹೆಜ್ಜೆ ಹಿಂದೆ ಸರಿದರು.

ಸೂರಪ್ಪನು ಕತೆಯ ಅಂಶವನ್ನು ಸಂಕ್ಷೇಪವಾಗಿ ತಿಳಿಸಿದನು. ಮಧ್ಯ ಮಧ್ಯೆ ಗಂಗಮ್ಮನವರು ಅವಳು ಪಟ್ಟ ಕಷ್ಟ, ಮಾಡಿದ ಸಾಹಸಗಳ ಬಗ್ಗೆ ಅನುತಾಪ, ಮೆಚ್ಚಿಕೆಗಳನ್ನು ಸೂಚಿಸಿ ಕೆಲವು ಮಾತುಗಳನ್ನು ಹೇಳುತ್ತಿದ್ದರು. ಸೂರಪ್ಪನು ದೇವಮ್ಮನ ಮತಭ್ರಷ್ಟತೆಯ ಭಾಗವನ್ನೆಲ್ಲ ಹಗುರವಾಗಿ ತೇಲಿಸಿ ಹೇಳಿದಾಗಲೆಲ್ಲ, ಶಾಸ್ತ್ರಿಗಳು ತಡೆದು ತಡೆದು ಪ್ರಶ್ನೆಗಳನ್ನು ಕೇಳುತ್ತಿದ್ದರು. ಆಗ ಗುಂಡಮ್ಮನು ಅವಕ್ಕೆಲ್ಲ ಉದ್ದವಾದ ಸ್ಪಷ್ಟವಾದ ಉತ್ತರಗಳನ್ನು ಹೇಳುತ್ತಿದ್ದಳು. ದೇವಮ್ಮನಾದರೋ ನ್ಯಾಯಾಸ್ಥಾನದಲ್ಲಿ ತನ್ನ ಮೇಲಿನ ಆಪಾದನೆಗಳನ್ನು ಕೇಳುವ ಅಪರಾಧಿಯಂತೆ ಮೌನವಾಗಿ ತಲೆ ತಗ್ಗಿಸಿದ್ದಳು. ಕತೆಯನ್ನು ಕೇಳುತ್ತ ಕೇಳುತ್ತ ಶಾಸ್ತ್ರಿಗಳ ಸೌಮ್ಯ ಮುಖವು ಬಿಗಿದುಕೊಂಡು ಕಠಿಣವಾಯಿತು. ಕೆಂಗಣ್ಣುಗಳು ನೆಟ್ಟ ದೃಷ್ಟಿಯಿಂದ ನೆಲವನ್ನು ನೋಡುತ್ತಿದ್ದವು. ಹುಬ್ಬುಗಳು ಕೂಡಿ ಗಂಟಿಕ್ಕಿದುವು. ತುಟಿಗಳು ಒಂದನ್ನೊಂದು ಒತ್ತಿದ್ದುವು. ಜೋಯಿಸರು ಕಷ್ಟದಲ್ಲಿ ಸಿಕ್ಕಿದವರಂತೆ ತೀಕ್ಷ್ಣವಾಗಿ ಯೋಚಿಸುತ್ತಿದ್ದರು.

ಕತೆಯು ಮುಗಿದರೂ ಮುಂದಿನ ವಿಷಯವು ಚರ್ಚೆಗೆ ಬರಲಿಲ್ಲ. ಸೂರಪ್ಪನೂ ಗಂಗಮ್ಮನವರೂ ಶಾಸ್ತ್ರಿಗಳ ರೀತಿಯನ್ನು ನೋಡಿ, ಈ ಮಾತನ್ನೆತ್ತುವುದಕ್ಕೇ ಭಯಪಡುತ್ತಿದ್ದರು. ಗುಂಡಮ್ಮನೇನೋ ಆತುರಳಾಗಿದ್ದಳು; ಆದರೆ ಅವಳು ತಮ್ಮನ ಹೆದರಿಕೆಯಿಂದ ಸುಮ್ಮನಿದ್ದಳು. ದೇವಮ್ಮನೆಂದರೆ ಯಜ್ಞಪಶುವಿನ ಸ್ಥಿತಿಯಲ್ಲಿದ್ದು ಮಾತಿನ ಅಧಿಕಾರವನ್ನೇ ಕಳೆದುಕೊಂಡಿದ್ದಳು. ಕಡೆಗೆ, ಕೆಲವು ನಿಮಿಷಗಳಾದ ಮೇಲೆ ಶಾಸ್ತ್ರಿಗಳೇ ಮಾತನ್ನು ಮೊದಲು ಮಾಡಿದರು.

“ಹೂಂ. ಹಾಗಾದರೆ ಪೂರ್ತಿಯಾಗೇ ಜಾತಿ ಕೆಟ್ಟುಬಿಟ್ಟಿದ್ದಾಳೆ!” – ದೀರ್ಘವಾಗಿ ಉಸಿರನ್ನು ಬಿಟ್ಟು ತೀರ್ಮಾನವನ್ನು ಹೇಳಿದರು.

“ಶಾಸ್ತ್ರಿಗಳೆ?” ಸೂರಪ್ಪನು ಗಾಬರಿಯಾಗಿ ಆಕ್ಷೇಪಣೆಯ ಸ್ವರದಿಂದ ಹೇಳಿದನು.

“ಹುಂ ಕಣಯ್ಯ. ಇರೋ ವಿಷಯ ಮುಚ್ಚೋದಕ್ಕೆ ಆಗುತ್ತೆಯೆ – ಅದೂ ಇಂಥಾ ಮತಧರ್ಮ ವಿಚಾರಗಳಲ್ಲಿ?”

“ಹಾಗಲ್ಲ. ಆದರೆ ಅವಳೇನು ಬೇಕಾಗಿ ಹಾಗೆಲ್ಲ ಮಾಡಲಿಲ್ಲ. ಬೆದರಿಕೆಗೆ – ಬಲಾತ್ಕಾರಗಳಿಗೆ ಸಿಕ್ಕಿ ನಿಸ್ಸಹಾಯಕಳಾಗಿ, ಬೇರೆ ಉಪಾಯವಿಲ್ಲದೆ, ಅವರಿಂದ ತಪ್ಪಿಸಿಕೊಳ್ಳೋ ಉದ್ದಿಶ್ಯದಿಂದ....”

“ಅದೆಲ್ಲ ಸರಿ. ಆದರೆ ತಪ್ಪು ಹೇಗೆ ಮಾಡಿದರೂ ತಪ್ಪೇ. ದೋಷವಿಲ್ಲ ಅನ್ನೋದಕ್ಕೆ ಹೇಗಾಗುತ್ತೆ?”

“ಅವಳ ಸಂದರ್ಭದಲ್ಲಿ ಯಾರಾದರೂ ತಾನೇ ಇನ್ನೇನು....”

“ನಿಜ, ಒಪ್ಪಿದೆ. ಆದರೆ ನಡೆದದ್ದು ನಡೆದುಹೋಯ್ತೋ? ಹಿಂದೂ ಧರ್ಮ ಹೋಯ್ತೋ? ಹಾಗಾದರೆ ಒಳಕ್ಕೆ ತೆಗೆದುಕೊಳ್ಳೋದಕ್ಕೆ ಮುಂಚೆ ಶುದ್ಧಿಶಾಸ್ತ್ರ ಆಗಲೇಬೇಕು?”

“ಏನಂದೆ?” ಶಾಸ್ತ್ರಿಗಳು ಅತ್ಯಾಶ್ಚರ್ಯದಿಂದ ಕೇಳಿದರು.

“ಅದೇ ಪ್ರಾಯಶ್ಚಿತ್ತ...” ಸೂರಪ್ಪನು ವಿವರಿಸಲು ಹೊರಟ.

“ಇದೇನಯ್ಯ, ಇಂಥಾ ಶ್ರೋತ್ರಿಯರ ವಂಶದಲ್ಲಿ ಹುಟ್ಟಿ ಹೀಗೆ ಕೇಳುತ್ತೀಯೆ? ಶಾಸ್ತ್ರಿಗಳು ತಮಗೇ ಅಪಮಾನವಾದಂತೆ ಕೇಳಿದರು.

“ಯಾಕೆ?”

“ಯಾಕೆ! ಚೆನ್ನಾಯ್ತು. ಹಿಂದೂ ಮತದಲ್ಲಿ ಜಾತಿ ಕೆಟ್ಟೋರನ್ನ ಮತ್ತೆ ತೆಗೆದುಕೋತಾರೇನಯ್ಯಾ? ಅದರಲ್ಲಾಗಿ ನಮ್ಮದು ಬ್ರಾಹ್ಮಣಕುಲ!” ಶಾಸ್ತ್ರಿಗಳು ಬಾಂಬು ಹಾಕಿದರು.

“ಆ!” ಸೂರಪ್ಪನು ಗಾಬರಿಯಾದನು.

ದೇವಮ್ಮನು ಬೆಚ್ಚಿದಳು. ದುಃಖವು ಒತ್ತಿಬಂದಿತು. ಗಂಗಮ್ಮನವರು “ಅಯ್ಯೋ” ಅಂದರು. ಗುಂಡಮ್ಮನು “ಹೀಗೇ ಏನಾದರೂ ಇರುತ್ತೇ ಅಂತ ನನಗೆ ಗೊತ್ತಿತ್ತು. ಅದಕ್ಕೇ ಆಗ ಎಚ್ಚರಿಸಿದ್ದು. ಇವನು ಹೇಳಿದ ಹಾಗೇ ದುಡುಕಿದ್ದರೆ ಏನು ಅನಾಹುತ ಆಗುತ್ತಿತ್ತೊ!” ಎಂದು ತನ್ನನ್ನು ಸಮರ್ಥಿಸಿಕೊಂಡಳು. ಮಗುವು ಗಾಢ ನಿದ್ರೆಯಲ್ಲಿತ್ತು.

“ಶಾಸ್ತ್ರಿಗಳೇ, ಹಾಗೆಂದರೆ ಹೇಗೆ? ಬೇರೆ ದಾರಿ ಇರಬೇಕು!” ಸೂರಪ್ಪನು ಒಪ್ಪಿಕೊಳ್ಳಲಿಲ್ಲ.

“ದಾರಿಯೇನೂ ಇಲ್ಲ – ಮತ್ತೆ ಹುಟ್ಟೋದನ್ನು ಬಿಟ್ಟು.”

“ಇಷ್ಟು ಕಠಿಣವಾಗಬೇಡಿ ದಯೆತೋರಿಸಬೇಕು!” ಅವನು ಅಂಗಲಾಚಿದನು.

“ಅಯ್ಯಾ, ಇದು ನಂಗೇನು ಇಷ್ಟವೇ? ದೇವಮ್ಮನ ವಿಚಾರ ನೀನು ನಂಗೆ ಹೇಳಬೇಕೆ? ಇದರಲ್ಲಿ ಕಾಠಿಣ್ಯ, ದಯೆ ಇದಕ್ಕೇನು ಅವಕಾಶವಿದೆ? ಇರೋ ವಿಚಾರ ಅದು. ನಾನೇನು ಮಾಡಲಿ? ಯಾರೇನು ಮಾಡಬಲ್ಲರು, ಹೇಳು? ಮತಕ್ಕೆ ವಿರುದ್ಧವಾಗಿ ನಡೆಯೋದು ಹಾಗಿರಲಿ, ಹೇಳೋದೂ ಮಹಾ ಪಾಪ. ಯಾರ ಅನುಕೂಲಕ್ಕೂ ನಾನು ಬೇರೆ ಹೇಳಲಾರೆ. ನನ್ನ ಮಗಳೇ ಆಗಿದ್ದರೂ ಅಷ್ಟೆ. ಏನು ಮಾಡೋದಪ್ಪಾ. ನಂಗೂ ವ್ಯಸನವೆ – ನಿನ್ನಷ್ಟೆ. ಆದರೆ ಇಂಥ ಕಷ್ಟದ, ದುಃಖದ ಸಂದರ್ಭಗಳು ಬಂದಾಗ ಸ್ಥೈರಿಸಿಕೋಬೇಕು. ನಷ್ಟಕ್ಕೆ ಎದೆ ಗಟ್ಟಿಮಾಡಿಕೋಬೇಕು. ಬೇರೆ ಗತಿಯಿಲ್ಲ. ಹಾಗಲ್ಲದೆ ಧರ್ಮಾಂಧರಾಗಿ ನಡೆದು ಮತಹಾನಿ ಮಾಡೋಕಾಗುತ್ತೆಯೆ? ಮಾಡೋದನ್ನ ಯಾರಾದರೂ ಒಪ್ಪುತ್ತಾರೋ, ಅದಕ್ಕೆ ಅವಕಾಶ ಕೊಡುತ್ತಾರೋ? ಎಲ್ಲ ವಿಧಿವಿಲಾಸ. ಅದೃಷ್ಟ ಇದ್ದಹಾಗೆ ನಡೆದುಹೋಗುತ್ತೆ. ಹಣೆಬರಹ....

“ಸಾಕು ಶಾಸ್ತ್ರಿಗಳೆ – ಉಪದೇಶ” ಸೂರಪ್ಪನು ಬೇಸರದಿಂದ ತಡೆದ.

“ಅಪ್ಪಾ! ಅವರಿಗೆ ಅವರಿಗೆ ಅವಮಾನ ಮಾಡಬೇಡಪ್ಪಾ, ತಪ್ಪಾಯ್ತು ಅನ್ನು!” ಗಂಗಮ್ಮನವರು ಬೆದರಿ ಹೇಳಿದರು.

“ನಂಗೇನೂ ಅವಮಾನವಿಲ್ಲ ತಾಯಿ. ಅದು ಅನ್ನೋರಿಗೇ ಅಶ್ರೇಯಸ್ಸು ಅಷ್ಟೆ. ಸೂರಪ್ಪನಿಗೆ ಬಹಳ ದುಃಖವಾಗಿದೆ. ಇನ್ನೂ ಹುಡುಗ. ದುಡುಕಿನಲ್ಲಿ ಏನಾದರೂ ಅಂತಾನೆ. ಅನ್ನಲಿ ಬಿಡಿ. ವಿವೇಕ ಹೇಳೋದು ನನ್ನ ಕರ್ತವ್ಯ. ಹಾಗೆ ಮಾಡುತ್ತೀನಿ, ಅಷ್ಟೆ.”

“ಕ್ಷಮಿಸಬೇಕು ಶಾಸ್ತ್ರಿಗಳೆ – ಅಂದದ್ದನ್ನು; ಆದರೆ ನಾನು ಈ ನಿರ್ಧಾರಕ್ಕೆ ಒಪ್ಪೋದಿಲ್ಲ. ಅವಳನ್ನು ಹೇಗಾದರೂ ತೆಗೆದುಕೊಳ್ಳಲೇಬೇಕು.”

ದೇವಮ್ಮನು ನೀರು ತುಂಬಿದ ಕಣ್ಣುಗಳನ್ನೆತ್ತಿ ಸೂರಪ್ಪನನ್ನು ಕೃತಜ್ಞತೆಯಿಂದ ನೋಡಿದಳು. ಮುಳುಗುವವರಿಗೆ ಸಿಕ್ಕಿದ ಜೊಂಡಿನಂತಿತ್ತು – ಅವನ ಮಾತು, ಅವಳಿಗೆ.

"ಎಲ, ಎಲಾ! ಏನು ಹೇಳುತ್ತೀಯೋ ಸೂರಪ್ಪಾ! ಸ್ವಲ್ಪ ಪ್ರಜ್ಞೆ ತಂದುಕೊಂಡು ಯೋಚಿಸಿ ಮಾತಾಡು. ಅವಳನ್ನು ತೆಗೆದುಕೊಂಡರೆ ನೀವೆಲ್ಲ ಜಾತಿ ಕೆಡಬೇಕಾಗುತ್ತೆ ಗೊತ್ತೆ?" ಶಾಸ್ತ್ರಿಗಳು ಎಚ್ಚರಿಸಿದರು.

"ಹಾಗಾಗೋದಕ್ಕೆ ಆಗುತ್ತೇನಪ್ಪಾ ಮಗು?" ಗಂಗಮ್ಮನವರು ಎಚ್ಚೆತ್ತುಕೊಂಡರು.

"ನಾನು ಬೇರೆ ಇಲ್ಲಿರೋದಿಲ್ಲ; ತಿರುಪೆಯಾದರೂ ಮಾಡಿಕೊಂಡು ಬಾಳುತ್ತೀನಿ" ಗುಂಡಮ್ಮನು ಖಂಡಿತವಾಗಿ ಹೇಳಿದಳು.

"ಏನಾದರೂ ಆಗಲಿ – ನಂಗೆ" ಸೂರಪ್ಪನು ಪಟ್ಟನ್ನು ಬಿಡಲಿಲ್ಲ.

"ಸೂರಪ್ಪಾ, ನಿಂಗೆಲ್ಲೋ ಹುಚ್ಚು ಹಿಡಿದಿದೆ. ನಿಧಾನವಾಗಿ ಯೋಚಿಸು. ಸುಮ್ಮನೆ ಹಾಳಾಗಬೇಡ. ನೀನು ದೇವಮ್ಮನ ಜೊತೆಯಲ್ಲಿ ಬಾಳಿದರೆ ಏನಾಗುತ್ತೆ ನೋಡು. ನಿನ್ನ, ಪ್ರಾಯಶಃ ಈ ಸಂಸಾರವನ್ನೆಲ್ಲ ಮಠದವರು ಜಾತಿಯಿಂದ ಹೊರಗೆ ಹಾಕುತ್ತಾರೆ. ನಿಮ್ಮ ಬ್ರಾಹ್ಮಣ್ಯ ಹಾಳಾಗುತ್ತೆ – ಹುಂ, ಬ್ರಾಹ್ಮಣ್ಯ ಸಾಮಾನ್ಯವೆ? ಎಷ್ಟೋ ಸಾವಿರ ಜನ್ಮಗಳಲ್ಲಿ ಒಂದು ಬಾರಿ ಬ್ರಾಹ್ಮಣನಾಗಿ ಹುಟ್ಟೋದು. ತಿಳೀತೆ? ಅದನ್ನೂ ಕಳೆದುಕೊಂಡು ಚಂಡಾಲನಾಗುತ್ತೀಯೆ. ಇಲ್ಲಿ ನಿನ್ನನ್ನು ಯಾರೂ ಇರಗೊಡಿಸುವುದಿಲ್ಲ. ಮನೆ, ಮಠ, ಭೂಮಿ, ಕಾಣಿ, ಊರು, ಕೇರಿ ಎಲ್ಲ ಬಿಟ್ಟು ಹೋಗಬೇಕು. ಅಷ್ಟೇ ಅಲ್ಲ ಇಂಥ ಸದ್ವಂಶಕ್ಕೆ ಕಳಂಕ ತಂದು ನಿರ್ಮೂಲ ಮಾಡಿದ ಅಪಕೀರ್ತಿ ಎಂದೆಂದಿಗೂ ನಿನ್ನದಾಗುತ್ತೆ. ಒಟ್ಟು ಇಲ್ಲಿಯ ಜನಕ್ಕೇ ಹೀನಾಯವಾಗುತ್ತೆ. ಅದೂ ಹೋಗಲಿ ಅಂದರೆ, ನಿಮ್ಮ ವಂಶವನ್ನಾದರೂ ಜ್ಞಾಪಿಸಿಕೊ, ಅಷ್ಟು ಪುರಾತನ ಕಾಲದಿಂದ ನಡೆದುಕೊಂಡು ಬಂದ ವಂಶ. ನಿಮ್ಮ ಪೂರ್ವಜರು ಎಷ್ಟು ಜನ ಇರಬೇಕು? ಅಂಥ ಶ್ರೇಷ್ಠ ಬ್ರಾಹ್ಮಣರು – ಮಹರ್ಷಿ ಭಾರದ್ವಾಜ ಗೋತ್ರದವರು. ಆಚಾರವಂತರು; ಕೀರ್ತಿವಂತರು, ಅವರ ಧರ್ಮ ಇಲ್ಲಿಯವರೆಗೂ ಸಂತತವಾಗಿ ನಡೆದುಕೊಂಡು ಬಂದಿದೆ. ಅವರೆಲ್ಲ ಸ್ವರ್ಗದಲ್ಲಿ ಸುಖವಾಗಿದ್ದಾರೆ. ಈಗ ನೀನು ಆ ವಂಶವನ್ನು ಕೆಡಿಸಿ ಕೊನೆಗಾಣಿಸುತ್ತೀಯೆ? ಹಾಗೆ ಮಾಡಿದರೆ ಮಹಾಯಜ್ಞ ಮಾಡುತ್ತ ಹವಿಸ್ಸನ್ನು ನಾಯಿಗೆ ಇಟ್ಟ ಹಾಗೆ ಆಗುತ್ತೆ. ನಿನ್ನ ಯೋಗ್ಯತೆ ಏನಾಯ್ತು? ನಿಂಗೆ ಏನು ಶಿಕ್ಷೆಯಾಗುತ್ತೆ, ಯೋಚಿಸಿಕೊ! ಎಲ್ಲ ಯಾತಕ್ಕಾಗಿ? ಕೇವಲ ಒಂದು ಹೆಣ್ಣು ಜೀವಕ್ಕಾಗಿ. ಹಾಗೆಂದರೆ ಅದನ್ನು ಕಡೆಗಾಣಿಸಬೇಕು ಅಂತ ಹೇಳೋದಿಲ್ಲ. ಮನುಷ್ಯ ಮಾತ್ರಕ್ಕೆ ಸಾಧ್ಯವಾಗಿ ಧರ್ಮ ವಿರುದ್ಧವಾಗಿರದೇ ಇದ್ದಾಗಲೆಲ್ಲ ಅದನ್ನು ರಕ್ಷಿಸಲೇಬೇಕು. ಆದರೆ ಹೀಗೆ ವಿಧಿಯಿಲ್ಲದೆ ಬಂದಾಗ ಏನು ಮಾಡೋದು? ಅದಕ್ಕಾಗಿ ಅಷ್ಟೊಂದು ಪಾಪದ ಹೊರೆ ಹೊತ್ತುಕೊಳ್ಳೋದು, ಕಷ್ಟ ಪರಂಪರೆಗೆ ಒಳಗಾಗೋದು ಸರಿಯೆ? ನ್ಯಾಯಸಮ್ಮತವೆ? ಹೆಚ್ಚು ಯಾವುದು ಅಂತ ನೋಡಿ ಅದಕ್ಕೆ ಪ್ರಾಮುಖ್ಯತೆ ಕೊಡಬೇಡವೆ? ಇಂತ ಸಂದರ್ಭದಲ್ಲಿ ಹೆಂಡತಿ ಅನ್ನೋ ವ್ಯಾಮೋಹ ಬಿಡಬೇಡವೆ? ಯೋಚಿಸು ನಿಂಗೇ ಗೊತ್ತಾಗುತ್ತೆ..." ಮೊದಲಾಗಿ ದೀರ್ಘವಾಗಿ ಉಪದೇಶಿಸಿದರು.

ಇದರ ಪರಿಣಾಮ ಮೊದಲು ಗಂಗಮ್ಮನವರ ಮೇಲಾದುದು ಕಂಡಿತು. ಅವರು "ಮಗು ಶಾಸ್ತ್ರಿಗಳ ಮಾತುಗಳನ್ನು ವಿಚಾರಕ್ಕೆ ತೆಗೆದುಕೋಬೇಕಪ್ಪಾ. ಹಟ ಹಿಡಿಯಬೇಡ" ಎಂದು ಶಾಸ್ತ್ರಿಗಳಿಗೆ ಒತ್ತಾಸೆ ಕೊಟ್ಟರು. ಇಲ್ಲಿಯವರೆಗೆ ಅನುತಾಪ ತೋರಿಸುತ್ತ ಆಶೆ ಹುಟ್ಟಿಸಿದ್ದ ಅತ್ತೆಯು ಹೀಗೆ ಮಾರ್ಪಟ್ಟುದು, ದೇವಮ್ಮನಿಗೆ ತನ್ನ ಊರುಗೋಲೊಂದು ಬಿದ್ದುಹೋದಂತಾಯಿತು. ಅವಳು "ಅಯ್ಯೋ!" ಎಂದುಕೊಂಡು ಬಾಯಿಗೆ ಕೈಗೊಟ್ಟು ಉಕ್ಕಿಬರುವ ದುಃಖವನ್ನು ತಡೆಯುತ್ತಿದ್ದಳು. ತಾಯಿಯ ಮಾತನ್ನು ಕೇಳಿದ ಮೇಲೂ ಕೊಂಚ ಕಾಲ ಸೂರಪ್ಪನು ನಿಶ್ಚೇಷ್ಟಿತನಾಗಿ ಕಲ್ಲಿನ ಪ್ರತಿಮೆಯಂತೆ ನಿಂತಿದ್ದನು. ಕಡೆಗೆ "ಇನ್ನೇನು ಮಾಡೋದಮ್ಮಾ?" ಎಂದು ಕ್ಷೀಣ ಸ್ವರದಲ್ಲಿ ಕೇಳಿದನು. ತಾನು ನಂಬಿದ್ದ ಗಂಡನೊಬ್ಬನೂ ಹೀಗೆ ಅನಿರ್ಧಾರದ ಮಾತನ್ನು ಹೇಳಿದಾಗ, ಆ ಬಡ ಹುಡುಗಿಗೆ ಬರಸಿಡಿಲು ಬಡಿದಂತಾಯಿತು. ನೀರಿನಲ್ಲಿ ಬಿದ್ದಿದ್ದರೂ, ಇಲ್ಲಿಯವರೆಗೆ ಈ ಜೊಂಡನ್ನು ಹಿಡಿದು ಅವಳು ಒದ್ದಾಡುತ್ತಿದ್ದಳು. ಈಗ ಇದೂ ಕಿತ್ತುಹೋಗಿ ಅವಳು ನಡುಪ್ರವಾಹದ ರಭಸಕ್ಕೆ ಸಿಕ್ಕಿದಳು. ತನ್ನ ದುಃಖದಲ್ಲಿ ದಿಕ್ಕೇ ತೋಚದೆ ಹುಚ್ಚಳಂತಾಗಿ ಆರ್ತಸ್ವರದಿಂದ "ಕೈ ಬಿಡಬೇಡಿ! ಕಾಪಾಡಿ!" ಎಂದು ಅವನ ಕಡೆಗೆ ಕೈ ನೀಡಿದಳು. ಅವನು ತನ್ನ ಕೈ ಕೊಡಹುತ್ತ "ಛೆ! ಇದೆಂಥ ಸಂಕಟ ಬಂತಲ್ಲ!" ಎಂದು ಒದರಿದ.

"ಕೆಟ್ಟೋಳಂತೂ ಕೆಟ್ಟಳು. ಅಲ್ಲೆ ಆದರೂ ಸರಿಹೋಗಿಸಿಕೊಂಡಿದ್ದರೆ, ಈ ಫಜೀತಿಯಾದರೂ ಯಾರಿಗೂ ಇರುತ್ತಾ ಇರಲಿಲ್ಲ" ಗುಂಡಮ್ಮನು ನಿರ್ದಾಕ್ಷಿಣ್ಯವಾಗಿ ಹೇಳಿದಳು.

"ಅತ್ತಿಗೆಮ್ಮಾ!" ದೇವಮ್ಮನು ಶೂಲದಿಂದ ಎದೆ ಇರಿಯಲ್ಪಟ್ಟ ಪ್ರಾಣಿಯಂತೆ ಹೇಳಿದಳು.

"ಹುಂ. ಆಗ ನೀನೂ ಒಂದು ದಾರಿ ಹತ್ತಬಹುದಾಗಿತ್ತು. ಈಗ ನೋಡು. ನಾನು ನಿಷ್ಠುರವಾಗಿ ಹೇಳತೀನಿ ಅಂತ ನೊಂದುಕೋಬೇಡ; ನಮ್ಮಲ್ಲಿ ಜಾತಿ ಕೆಟ್ಟೋರಿಗೆ ಇರೋದು ಎರಡೇ; ಹೊಸ ಜಾತೀಲೇ ಇರೋದು, ಇಲ್ಲ ಸಾಯೋದು!"

"ಅಯ್ಯೊ, ನಾನು ಸಾಯಬೇಕಾಗಿತ್ತು. ಅದೇ ಸುಲಭವಾಗಿತ್ತು. ಮೋಸ ಹೋದೆ. ಇಲ್ಲಿಗೆ ಬರೋ ಆಶೆ ಇಟ್ಟುಕೊಂಡು ಬದುಕೋಕೆ ಇಷ್ಟಪಟ್ಟೆ. ಅದಕ್ಕಾಗಿ ಮಾಡಬಾರದ್ದನ್ನೆಲ್ಲ ಮಾಡಿದೆ, ಸಹಿಸಿದೆ. ಅಯ್ಯೋ" ದೇವಮ್ಮನು ಗೋಳಾಡಿದಳು.

"ಸುಮ್ಮನೆ ಇರಬಾರದೇನೆ ಗುಂಡಿ? ಹೀಗೆ ಕಠಿಣವಾಗಿ ಹೇಳಿ ಯಾಕೆ ನೋಯಿಸುತ್ತೀಯಾ ಅವಳನ್ನ ಪಾಪ! ಏನಾದರೂ ಒಂದು ಸಮಾಧಾನದ ಏರ್ಪಾಡಿಗೆ ಬರೋಣ!" ಗಂಗಮ್ಮನು ಏನನ್ನೋ ಯೋಚಿಸಿಕೊಂಡು ಹೇಳಿದಳು.

"ಹ್ಹ! ಕೊಂದಮೇಲೆ ಒಳ್ಳೆ ಸಮಾಧಾನ!" ಸೂರಪ್ಪನು ತಿರಸ್ಕಾರದಿಂದ ಹೇಳಿದನು.

ಅಪ್ಪಾ, ಅದೃಷ್ಟ ಕೆಟ್ಟಾಗ ಬೇಕಾದ್ದು ಮಾಡೋದಕ್ಕೆ ಸಾಧ್ಯವೆ ಹೇಳು? ಹೀಗೆಲ್ಲ ಆಡಬೇಕಾಗುತ್ತೆ. ಬೇಡವಾದ್ದನ್ನೆಲ್ಲ ಮಾಡಬೇಕಾಗುತ್ತೆ. ನನ್ನ ಎದೆಯೂ ಬೆಂದು ಹೋಗ್ತಾ ಇದೆ, ಗೊತ್ತೆ? ನಿನಗೆ ಹೆಂಡತಿಯಾದರೆ ನಂಗೆ ಸೊಸೆ ಅಲ್ಲವೆ? ಒಬ್ಬಳೆ ಸೊಸೆ. ಅಂಥ ಸೊಸೆ ನಮ್ಮ ವಂಶ ಉಳಿಸಿರೋಳು? ನನ್ನ ಮಗಳು ಅಂತ ತಿಳಿದುಕೊಂಡಿದೀನಿ. ಇವಳನ್ನು ಬಿಟ್ಟಿರೋದು ನಂಗೇನು ಸ್ವಲ್ಪದ ದುಃಖವೇ? ಆದರೇನು ಮಾಡೋದು? ಮತ–ಧರ್ಮ ಬಿಟ್ಟು ನಾವೆಲ್ಲ ಹಾಳಾಗೋದಕ್ಕಾಗುತ್ತೆಯೆ? ಅದಕ್ಕೆ ತಲೆ ತಗ್ಗಿಸಲೇಬೇಕು. ಬೇಕಾದರೆ ತಲೇನೂ ಕೊಡಬೇಕು. ಅದೇ ಶ್ರೇಯಸ್ಸು!" ಗಂಗಮ್ಮನವರು ಖಿನ್ನರಾಗಿ ಹೇಳಿದರು.

"ನ್ಯಾಯವಾದ ಮಾತುಗಳು!" ಶಾಸ್ತ್ರಿಗಳು ತಲೆದೂಗಿದರು.

"ಏನು ನ್ಯಾಯವೋ, ಏನು ಧರ್ಮವೋ, ಏನು ಮತವೋ ನನಗೆ ಒಂದೂ ತಿಳಿಯೋ ಹಾಗಿಲ್ಲ. ನನ್ನ ಬುದ್ಧಿಯೇ ಕೆಟ್ಟುಹೋಗಿದೆ. ಏನು ಬೇಕಾದರೂ ಮಾಡಿ; ನನ್ನಿಂದ ಮಾಡಿಸಿಕೊಳ್ಳಿ, ಧರ್ಮ ಕರ್ಮ ಎಲ್ಲ ನಿಮ್ಮದು. ದೇವರು ನೋಡಿಕೊಳ್ಳಲಿ – ನ್ಯಾಯವನ್ನು ಅವನೇ ದಯೆಯಿಡಬೇಕು. ನಮ್ಮ ಮೇಲೆ!" ಸೂರಪ್ಪನು ನಿಸ್ಸಹಾಯಕನಾಗಿ ನುಡಿದು ಸುಮ್ಮನಾದನು. "ಶಾಸ್ತ್ರಿಗಳೆ, ನಿಮಗೆ ಯಾವ ದಾರಿಯೂ ಹೊಳೆಯೋದಿಲ್ಲವೆ?" ಗಂಗಮ್ಮನವರು ಕೇಳಿದರು.

"ಕಠಿಣವಾಗಿ ಹೇಳಿದರೂ ಗುಂಡಮ್ಮ ಒಂದು ದಾರೀನೇನೋ ತೋರಿಸಿದ್ದಾಳೆ!"

"ಏನು ಅಲ್ಲಿಗೆ ಹೋಗಿ ಬಾಳೋದೆ? ಶಿವ! ಶಿವ! ನಿಮಗೆ ಹೇಳೋದಕ್ಕಾದರೂ ಮನಸ್ಸು ಹೇಗೆ ಬರುತ್ತೆ? ಎಂದಿಗಾದರೂ ಹೋದೇನೆ?" ದೇವಮ್ಮನು ತಾಳ್ಮೆ ಮೀರಿ ಕೂಗಿಕೊಂಡಳು.

"ಬರಿ ಹುಚ್ಚು !" ಸೂರಪ್ಪನು ರೇಗಿದನು.

"ಹೋಗಬೇಕು ಅಂತಲ್ಲ ನಾನು ಹೇಳಿದ್ದು. ಸಾಧ್ಯವಾದ ದಾರಿ ಒಂದನ್ನು ಸೂಚಿಸಿದೆ ಅಷ್ಟೆ. ಇನ್ನೇನು ಮಾಡಬಹುದು, ಯಾರಾದರೂ ಹೇಳಿ ಮತ್ತೆ?" ಶಾಸ್ತ್ರಿಗಳು ತಿದ್ದಿಕೊಂಡು ತಮ್ಮ ಸರದಿಯಲ್ಲಿ ಸಿಟ್ಟಾದರು.

"ಶಾಸ್ತ್ರಿಗಳೆ, ಇವಳು ಇಲ್ಲೇ ಬೇರೆ ಇರೋಹಾಗೆ ಏರ್ಪಾಡು ಮಾಡಿದರೋ?" ಗಂಗಮ್ಮನವರು ತಮ್ಮ ಯೋಚನೆಯನ್ನು ಹೇಳಿದರು.

"ಹೂಂ. ಅದೂ ಒಂದು ದಾರಿಯೆ. ಆದರೆ ಇಲ್ಲಿ ಮುಸಲ್ಮಾನರು ಯಾರೂ ಇಲ್ಲ. ಇವಳೇ ಬೇರೆಯ ಕಡೆ ಬೇರೆಯ ಬೀದಿಯಲ್ಲಿ ಇರಬೇಕಾಗುತ್ತೆ !" ಶಾಸ್ತ್ರಿಗಳು ಯೋಚಿಸುತ್ತ ಸಮ್ಮತಿಸುತ್ತ ನಿಧಾನವಾಗಿ ಹೇಳಿದರು.

"ಏನು, ಬೇರೆ ನಾನೊಬ್ಬಳೆ. ನಿಮ್ಮನ್ನು ಬಿಟ್ಟು ಈ ಕಂದನನ್ನು ಬಿಟ್ಟು ಈ ಹಾಳು ಬಾಳನ್ನು ಸಾಗಿಸಲೆ? ಬೇಡಿ, ಮತ್ತೆ ನಿಮ್ಮ ಮನೆ ಸೇರೋದಕ್ಕೆ ಆಗದೇ ಇದ್ದರೆ, ನಿಮ್ಮ ಸೇವಕಳಾಗಿ ಆದರೂ ಇಟ್ಟುಕೊಳ್ಳಿ. ಇಲ್ಲೇ ಹೊರಗೆ ಹೊರಗೇ ಇರುತ್ತೀನಿ" ಗಂಡನನ್ನು ದೈನ್ಯದಿಂದ ಬೇಡಿಕೊಂಡಳು.

ಉತ್ತರಕ್ಕಾಗಿ ಸೂರಪ್ಪನೂ, ಗಂಗಮ್ಮನವರೂ ಶಾಸ್ತ್ರಿಗಳ ಮುಖವನ್ನು ನೋಡಿದರು.

ಅದು ಹೇಗಾದೀತು ಗಂಗಮ್ಮನೋರೆ? ಮುಸಲ್ಮಾನರೋಳು. ಮ್ಲೇಂಛರೋಳು. ಮನೆಯ ಸುತ್ತ ಸುತ್ತ ಸುಳಿದಾಡುತ್ತಾ ಇದ್ದರೆ, ಏನು ಆಚಾರ ಉಳಿಯುತ್ತೆ ಹೇಳಿ? ಈ ಬೀದಿಯೋರಾದರೂ ಒಪ್ಪುತಾರೋ ಎಂದಿಗೂ ಇಲ್ಲ" ಶಾಸ್ತ್ರಿಗಳು ಖಂಡಿತವಾಗಿ ಹೇಳಿದರು.

"ಅಯ್ಯೋ ಅದಾಗದು ಆಗದು, ನನ್ನ ಬಿಡಬೇಡಿ. ಹಾಗೆ ಬಾಳಲಾರೆ. ನಂಗೆ ತೌರಿಲ್ಲ. ಎಲ್ಲರನ್ನೂ ಕಳೆದುಕೊಂಡ ಅನಾಥೆ. ನೀವೇ ಗತಿ!" ದೇವಮ್ಮನು ತೊಡೆಯ ಮೇಲೆ ಮಲಗಿದ್ದ ಮಗುವಿದ್ದಂತೆಯೇ ತೆವಳಿಕೊಂಡು ಗಂಡನ ಕಡೆಗೆ ಸರಿದು ಕೈಜೋಡಿಸಿದಳು.

"ಏನು ಮಾಡು ಅಂತೀಯ? ನಿಂಗಂತೂ ಇಲ್ಲಿ ಸ್ಥಳ ಇಲ್ಲ ಅನ್ನೋದು ಖಂಡಿತವಾಯ್ತು. ನಾನೂ ನಿನ್ನ ಜೊತೇಲಿ ಬರಲೇನು. ನಡಿ, ಹಾಗೆ ಆಗಲಿ. ಈ ಹಾಳು ಜಾತಿ, ಮತ, ಧರ್ಮ, ಆಚಾರ – ಮಾನವತೆಗೇ ಅವಕಾಶ ಕೊಡದ ಈ ಗೊಂದಲವೆಲ್ಲ ಹಾಳಾಗಿ ಹೋಗಲಿ. ಯಾರಿಗೆ ಬೇಕು. ಏನು ಬೇಕಾದರೂ ಆಗಲಿ. ನಾನು ಎಲ್ಲದಕ್ಕೂ ಸಿದ್ಧ" – ಸೂರಪ್ಪನು ಕಿರಿಚಿಕೊಂಡನು.

"ಅಪ್ಪಾ ! ಅಪ್ಪಾ ! ಮಗು. ಇದೇನು ಸ್ವಲ್ಪವೂ ಪರಿಜ್ಞಾನವಿಲ್ಲದೆ ಮಾತಾಡುತ್ತಿದ್ದೀಯೆ?" ಗಂಗಮ್ಮನವರು ಗಾಬರಿಯಾದರು.

"ಅವನಿಗೇನೋ ಹುಚ್ಚೇ ಹಿಡಿದಿದೆ – ಹೀಗಾಡುತ್ತಿದ್ದಾನೆ" ಗುಂಡಮ್ಮನು ಗದರಿಸಿಕೊಂಡಳು.

"ಇನ್ನು ನಿಮ್ಮ ನಿಮ್ಮ ಪಾಡು. ನಾನು ಹೇಳಿದ್ದಾಯ್ತು. ಅವಿವೇಕ ಮಾಡಿದರೆ ನೀವೇ ಅನುಭವಿಸುತ್ತೀರಿ. ಎಚ್ಚರವಾಗಿರಿ!" ಶಾಸ್ತ್ರಿಗಳು ಸಿಟ್ಟಾಗಿ ನಿಲ್ಲದೆ ಹೊರಟೇ ಹೋದರು. ಗಂಗಮ್ಮನವರು ಕೂಗಿದರೂ ಪ್ರಯೋಜನವಾಗಲಿಲ್ಲ.

"ಇವನ ಅವಿವೇಕವನ್ನೆಲ್ಲ ಅವರು ಯಾಕೆ ಸೈರಿಸಿಕೊಂಡು ಇಲ್ಲಿರುತ್ತಾರೆ? ಹೋದರು. ಇನ್ನು ಇವನು ಸರ್ವನಾಶ ಮಾಡುತ್ತಾನೆ. ದೇವರೇ ಕಾಪಾಡಬೇಕು" ಗುಂಡಮ್ಮನು ಆಕ್ರೋಶದಿಂದ ಹೇಳಿದಳು.

ಸ್ವಲ್ಪ ಹೊತ್ತು ಎಲ್ಲರೂ ಸುಮ್ಮನಿದ್ದರು. ಯೋಚಿಸುತ್ತಿದ್ದರು. ಅನಂತರ ಗಂಗಮ್ಮನವರು ಸೊಸೆಯ ಕಡೆಗೆ ತಿರುಗಿ :

"ಅಮ್ಮಾ, ನೀನು ಆಗಲೇ ಒಂದು ಸಾರಿ ನಮ್ಮ ವಂಶವನ್ನು ಉಳಿಸಿದ್ದೀಯೆ. ಆದರೆ ಈಗ ಅದಕ್ಕಿಂತ ಹೆಚ್ಚಾದ ರೀತಿಯಲ್ಲಿ ಎರಡನೆಯ ಸಾರಿ ಅದನ್ನು ನೀನೇ ಉಳಿಸೋ ಕಾಲ ಬಂದಿದೆ. ನನ್ನ ಮಗನಂತೂ ನೀನು ಹೇಳಿದ ಹಾಗೆ ಕೇಳುತ್ತಾನೆ. ನ್ಯಾಯವಿರಬಹುದು. ಆದರೆ ನೀನು ನಿನ್ನ ವಂಶಕ್ಕೇ ಯಾವುದು ಯೋಗ್ಯ ಅಂತ ಯೋಚಿಸಬೇಕು. ದೊಡ್ಡ ದುರದೃಷ್ಟ ನಿನ್ನನ್ನು ಕವಿದುಕೊಂಡಿದೆ: ನಿಜ. ಅದರ ನಿವಾರಣೆಗೆ ನಮಗೆ ಸಾಧ್ಯವಾದದ್ದನ್ನೆಲ್ಲ ಮಾಡಬೇಕು ಅನ್ನೋದು ನಮ್ಮಿಷ್ಟ. ಆದರೆ ನಿಂಗೆ ಸಂತೋಷವಾಗೋ ಅಷ್ಟು, ನಿನ್ನ ಜೀವನ ಸುಖವಾಗೋ ಅಷ್ಟು ಮಾಡೋದು ನಮ್ಮ ಸ್ಥಿತಿಯಲ್ಲಿ ಆಗೋದಿಲ್ಲ ಅನ್ನೋ ವ್ಯಸನ ನಮ್ಮನ್ನೆಲ್ಲ ತುಂಬಿದೆ. ಆದರೇನು? ನಾವು ಅಸಹಾಯಕರು. ನಿರ್ಬಂಧಕ್ಕೆ ಸಿಕ್ಕಿದ್ದೀವಿ. ನೀನೇ ನೋಡು. ಹೀಗಿದೆ ಅಂತ. ನಿನ್ನ ದುರದೃಷ್ಟವನ್ನು ಈ ಮನೆಮೇಲೂ ಹಾಕೋದು ಸರಿಯೆ? ನಿನ್ನ ಕಳೆದುಕೊಂಡು ದುಃಖವೇ ಅದಕ್ಕೆ ಸಾಲದೆ? ಈಗ ನೀನು ಸಹಾಯವಾಗಿ ನಮ್ಮನ್ನು ಉಳಿಸಬೇಕು. ನಾನು ಕೇಳುತ್ತ ಇರೋದು ಬಲು ದೊಡ್ಡದು ನಂಗೆ ಗೊತ್ತು. ನಾನು ಹೆಂಡತಿಯಾಗಿ, ತಾಯಿಯಾಗಿ ಬಾಳಿದೋಳೇ ಆದರೆ ನಿನ್ನ ಎದೆಯೂ ದೊಡ್ಡದೆ. ನನ್ನ ಈ ಬೇಡಿಕೆಯನ್ನು ನಡೆಸಿಕೊಟ್ಟು ಪುಣ್ಯಕಟ್ಟಿಕೊ! ನನ್ನ ಏರ್ಪಾಡಿಗೆ ಒಪ್ಪಿಕೊ! ಆದಷ್ಟೂ ನಿಂಗೆ ಅನ್ಯಾಯವಾಗದ ಹಾಗೆ ನೋಡಿಕೋತೇವೆ. ನಮ್ಮ ಮನೆ ಉಳಿಸಿದ ದೇವತೆ ಅಂತ ನಿನ್ನ ಹೆಸರಿನಲ್ಲಿ ದೀಪ ಹಚ್ಚಿಡುತ್ತೇವೆ. ನಿನ್ನ ವಂಶವನ್ನು ನೀನೇ ಕಾಪಾಡಬೇಕು" ಎಂದು ಕೇಳಿಕೊಂಡರು.

ಗಂಗಮ್ಮನವರ ಮಾತನ್ನು ಕೇಳಿ ಎಲ್ಲರೂ ಸ್ತಬ್ಧರಾದರು. ದೇವಮ್ಮ ಅಳುವುದನ್ನು ನಿಲ್ಲಿಸಿ ತೀಕ್ಷ್ಣವಾಗಿ ಯೋಚಿಸತೊಡಗಿದಳು. ಕೆಲವು ನಿಮಿಷಗಳು ಕಳೆದುವು. ಗಂಗಮ್ಮನವರು "ಒಪ್ಪಿಕೊಳ್ಳುತ್ತೀಯಾ ತಾಯಿ?" ಎಂದು ಕೇಳಿದರು.

"ಆ?"

“ಒಪ್ಪಿಕೊಂಡು ಉದ್ಧಾರ ಮಾಡಮ್ಮಾ!”

“ಅಯ್ಯೋ, ಹೇಗೆ ಒಪ್ಪಿಕೊಳ್ಳಲಿ?”

“ಬಿಡು, ಬೇಡ!” ಸೂರಪ್ಪನು ಹೇಳಿದನು.

“ಇಲ್ಲ... ಇಲ್ಲ... ಈ ಮನೆ ಹಾಳಾಗಬಾರದು... ಆಗಲಿ... ಹೇಗಾದರೂ ಆಗಲಿ... ನನ್ನ ಗತಿ!” ದೇವಮ್ಮನು ನಿರಾಶಳಾಗಿ ಒಪ್ಪಿಬಿಟ್ಟಳು.

“ಎಲೆ ಹುಚ್ಚಿ ! ಇದೇನು, ನಿನ್ನ ಆತ್ಮಹತ್ಯ ! ನಾನು ಹೇಗೆ ಒಪ್ಪಲಿ ಇದಕ್ಕೆ?” ಸೂರಪ್ಪನು ಆಶ್ಚರ್ಯ, ಖೇದಗಳಿಂದ ಹೇಳಿದನು.

“ಬೇರೆ ಮಾಡೋ ಹಾಗಿಲ್ಲ” ದೇವಮ್ಮನು ನಿರ್ಧಾರವನ್ನು ಹೇಳಿದಳು.

“ತಾಯಿ?” ನೀನೆ ನಮ್ಮ ಮನೆ ದೇವರಮ್ಮಾ. ದೇವರು ನಿಂಗೆ ಒಳ್ಳೇದು ಮಾಡಲಿ!” ಗಂಗಮ್ಮನವರು ಹೇಳಿ ಸಮಾಧಾನ ಹೊಂದಿದರು.

“ಸದ್ಯ ಅನಾಚಾರ ಹೇಗೋ ತಪ್ಪಿತಲ್ಲಾ !” ಗುಂಡಮ್ಮನು ತೃಪ್ತಿ ಹೊಂದಿದಳು.

“ಹುಂ, ನೋಡೋಣ” ಸೂರಪ್ಪನು ಅನಿಶ್ಚಯದಿಂದ ಸುಮ್ಮನಾದನು.

ಗಂಟೆ ಎರಡಾಗಿತ್ತು. ಮಲಗುವ ಪ್ರಯತ್ನ ನಡೆಯಿತು. ದೇವಮ್ಮನು ಆ ರಾತ್ರಿ ಹೊರಗೆ ಮುಟ್ಟಾದವರ ಹೊರಕೋಣೆಯಲ್ಲಿ ಮಲಗಬೇಕೆಂದು ನಿಶ್ಚಯವಾಯಿತು. ಗಂಗಮ್ಮನವರು “ಬಟ್ಟೆ ಬಿಚ್ಚಿ ಮಗು ಕೊಡು” ಅಂದರು. ದೇವಮ್ಮನು, “ಇಲ್ಲ”. ಹೇಗಿದ್ದರು ನನ್ನ ಬಳಿ ಬಂದಿದೆ. ಈ ಒಂದು ರಾತ್ರಿ ನನ್ನ ಹತ್ತಿರದಲ್ಲೇ ಇರಲಿ !” ಎಂದು ಬೇಡಿಕೊಂಡಳು. ಒಪ್ಪಿಗೆ ಸಿಕ್ಕಿತು. ಗಂಗಮ್ಮನವರು ಚಾಪೆ, ಹಳೆಯ ಸೀರೆ, ಕಂಬಳಿಯನ್ನು ಕೊಟ್ಟರು. ದೇವಮ್ಮನು ಮಗುವನ್ನು ಮಲಗಿಸಿಕೊಂಡು ಮಲಗಿದ ಮೇಲೆ ಉಳಿದವರು ಒಳಗೆ ಮಲಗಿದರು.

ದೇವಮ್ಮನಿಗೆ ನಿದ್ದೆ ಹೇಗೆ ಹತ್ತೀತು? ಯೋಚನೆಗಳು ಅವಳನ್ನು ಬಾಧಿಸುತ್ತಿದ್ದುವು. ತನ್ನ ಹಿಂದಿನ ಜೀವನವೆಲ್ಲ ಅವಳ ಕಣ್ಣಮುಂದೆ ಹಾಯ್ದಿತು. ಆಗ ತಾನೆ ನಡೆದಿದ್ದ ಮಾತುಕತೆಗಳು ಮತ್ತೊಮ್ಮೆ ಮನದಲ್ಲಿ ಹರಿದುವು. ಅವಳು ದೀರ್ಘವಾಗಿ ನಿಟ್ಟುಸಿರೊಂದನು ಬಿಟ್ಟಳು. ಚಳಿಯ ಗಾಳಿ ಬೀಸಿತು. ಮಗುವು ನಡುಗಿತು. ಅವಳು ಕಂಬಳಿಯನ್ನೂ ಜೋಡಿಸಿದ್ದ ಸೀರೆಯನ್ನೂ ಸರಿಮಾಡಿ ಹೊದ್ದಿಸಿ, ಮಗುವನ್ನು ತನ್ನ ಎದೆಯ ಕಡೆಗೆ ಸರಿಸಿಕೊಂಡಳು. ಹಾಗೇ ಆ ಸೀರೆಯ ನೆನಪು ಬಂತು. ಅದು ತನ್ನ ಗಂಡನು ತನಗೆ ಮೊದಲ ಸಾರಿ ಆರಿಸಿ ತಂದು ಕೊಟ್ಟಿದ್ದುದು. ಅದನ್ನು ಅವಳು ಉಟ್ಟಾಗಲೆಲ್ಲ ಅವನು ಬಹಳವಾಗಿ ಮೆಚ್ಚಿಕೊಳ್ಳುತ್ತಿದ್ದನು. ಹುಂ; ಅವನು ಯಾವಾಗಲೂ ಹಾಗೆಯೇ. ಅವಳನ್ನು ಕಂಡರೆ ಹುಚ್ಚನಂತಾಗುತ್ತಿದ್ದನು. ಈಗಲೂ ಹಾಗೇ ಅಲ್ಲವೆ? ಉಹುಂ. ಆ ಹುಚ್ಚಿಗೆ ಇನ್ನು ಆಸ್ಪದ ಕೊಡದಂತೆ ಮಾಡಬೇಕು. ನಿಜ.... ಆ ಕಂಬಳಿಯೋ? ಅದನ್ನು ನಿಷೇಕದಲ್ಲಿ ತಂದೆಯವರು ಕೊಟ್ಟಿದ್ದರು. ಹಾ! ಈಗ ತಂದೆಯವರಿದ್ದರೆ? ತಾಯಿ ಇದ್ದರೆ? ಅವರು ಹೀಗೆ ದೂರ ಮಾಡುತ್ತಿದ್ದರೆ? ಎಂದಿಗೂ... ಏನೊ, ಯಾರಿಗೆ ಗೊತ್ತು? ಮತದ ಪ್ರಭಾವ ಎಲ್ಲೆಲ್ಲಿಯವರೆಗೆ ಹೋಗುವುದೋ! ಹುಂ. ಅದೇಕೆ ಯೋಚನೆ – ಅವರೇ ಇಲ್ಲದಾಗ... ಆ ಕಂಬಳಿ ಎಷ್ಟು ಸುಖವನ್ನು ಕಂಡಿದ್ದಿತು! ಒಂದು ಬಾರಿ ಕಳ್ಳರು ಮನೆಗೆ ಬಿದ್ದಾಗ, ಬಾಕಿಯದರ ಜೊತೆಗೆ ಈ ಕಂಬಳಿಯನ್ನೂ ಹೊತ್ತುಕೊಂಡು ಹೋಗಿದ್ದರು. ಆದರೆ ಅದೂ ಪತ್ತೆಯಾಯಿತು. ಉಣ್ಣೆಗೆ ದೋಷವಿಲ್ಲ ಎಂದು ಬಿಸಿಲಿಗೆ ಹಾಕಿ ಇವರು ಮತ್ತೆ ಉಪಯೋಗಿಸಿದರು. ಪುಣ್ಯಶಾಲಿ ಕಂಬಳಿ! ಅಹಾ, ಈ ಕಂಬಳಿಗಿಂತ ತಾನು ಕಡೆಯಾದೆನಲ್ಲ.... ಹೀಗೆ ಒಂದರಿಂದ ಒಂದು ವಿಷಯಕ್ಕೆ ಹಾರುತ್ತ ಯೋಚಿಸುತ್ತಿದ್ದಳು.

ಗಡಿಯಾರವು ಮೂರು ಗಂಟೆಯನ್ನು ಹೊಡೆಯಿತು. ಅವಳು ದಿಗ್ಗನೆದ್ದು ಕುಳಿತು “ಹೊತ್ತಾಯ್ತು!” ಎಂದುಕೊಂಡಳು. ಶಬ್ದಕ್ಕಾಗಿ ಆಲಿಸಿದಳು. ಎಲ್ಲೆಲ್ಲೂ ನಿಶ್ಶಬ್ದವಾಗಿತ್ತು. ಹೊದ್ದಿಕೆಯನ್ನು ಇನ್ನೊಂದು ಮಡಿಕೆ ಜೋಡಿಸಿ ಮಗುವಿಗೆ ಚೆನ್ನಾಗಿ ಹೊದಿಸಿದಳು. ಅದರ ತಲೆ ಸವರಿದಳು. ಮೃದುವಾಗಿ ಮುತ್ತಿಟ್ಟಳು. ತಲೆಯೆತ್ತಿದಾಗ ಅವಳ ಕಣ್ಣೀರಿನ ಬಿಸಿ ಹನಿಯೊಂದು ಅದರ ಕೆನ್ನೆಯ ಮೇಲೆ ಬಿದ್ದಿತು. ಅದನ್ನು ಮೆಲ್ಲಗೆ ಒರೆಸಿದಳು. “ಕಂದ! ನಿನ್ನನ್ನು ದೇವರೇ

ನೋಡಿಕೊಳ್ಳಲಿ! ಎನ್ನುತ್ತ ಮೇಲೆದ್ದು ಮತ್ತೆ ಬಗ್ಗೆ ತಲೆ ಸವರಿ, ಕೋಣೆಯ ಬಾಗಿಲನ್ನು ಹಾಕಿಕೊಂಡು ಹೊರಬಿದ್ದಳು. ಅವಳು ಮೆಟ್ಟಿಲನ್ನಿಳಿಯುತ್ತಿರುವಾಗ ಅಲ್ಲೆ ವರಾಂಡದಲ್ಲಿ ನಿಂತಿದ್ದ ಹಸುವು ಶಬ್ದ ಮಾಡಿತು. ಅವಳು ಅದರ ಬಳಿಗೆ ಹೋಗಿ ನೀರನ್ನು ಹತ್ತಿರಕ್ಕಿಟ್ಟು, ಮೈದಡವಿದಳು. ಆನಂತರ ಹಿಂದಿರುಗಿ ಬಂದು ಮತ್ತೆ ಮೆಟ್ಟಿಲನ್ನಿಳಿದು ಕುಂಟುತ್ತ ಹೊರಟು ಹೋದಳು.

* * * *

ಮಾರನೆಯ ದಿನ ಬೆಳಿಗ್ಗೆ ಧರ್ಮಕೊಂಡದಲ್ಲಿ ಗದ್ದಲವೋ ಗದ್ದಲ. ಹಳ್ಳಿಯ ಹೊರಗಿನ ಸಿಹಿನೀರಿನ ಬಾವಿಯಲ್ಲಿ ದೇವಮ್ಮನ ಹೆಣ ಸಿಕ್ಕಿತು. ಅವಳ ವಿಷಯವು ಹಳ್ಳಿಗೆಲ್ಲಾ ಗೊತ್ತಾಯಿತು. ಎಲ್ಲರ ಬಾಯಲ್ಲೂ ಅವಳದ್ದೇ ಮಾತು. ಸೂರಪ್ಪನು ತಲೆಯನ್ನು ನೆಲಕ್ಕೆ ಬಡಿದುಕೊಳ್ಳುತ್ತ ಗೋಳಾಡುತ್ತಿದ್ದನು. ಅನೇಕ ಬಾರಿ ತಾನೂ ಪ್ರಾಣ ಕಳೆದುಕೊಳ್ಳುವುದಾಗಿ ಓಡಲು ಯತ್ನಿಸುತ್ತಿದ್ದನು. ಇತರರು ಅನೇಕರು ಹಿಡಿದುಕೊಂಡು ಸಮಾಧಾನ ಹೇಳುತ್ತಿದ್ದರು. ಗಂಗಮ್ಮನವರು ಸುಮ್ಮನೆ ಕಣ್ಣೀರನ್ನು ಸುರಿಸುತ್ತ ಕುಳಿತಿದ್ದರು. ಮಗುವು ಚೀರಿಡುತ್ತಿತ್ತು. ಗುಂಡಮ್ಮನ ಸುತ್ತ ಅನೇಕ ಹೆಂಗಸರು ಸೇರಿದ್ದರು. ಅವಳು ಅವರಿಗೆ ವಿಷಯವನ್ನೆಲ್ಲ ವಿಶದವಾಗಿ ವಿವರಿಸುತ್ತ, "ಅಂತೂ ಅವಳ ಗೊಂದಲ ಬಗೆಹರಿದ ಹಾಗಾಯ್ತು. ಈ ಕೆಲಸವನ್ನು ಅವಳು ಆಗಲೇ ಮಾಡಿದ್ದರೆ, ಈ ಗೋಳಿಗೆ ಕಾರಣವಿರುತ್ತಿರಲಿಲ್ಲ, ಎಂದು ಹೇಳುತ್ತಿದ್ದಳು. ಗುಂಪಿನಲ್ಲಿ ಕೆಲವರು "ಛೆ, ಎಂಥಾ ದುರದೃಷ್ಟ" ಎಂದು ಮರುಗಿದರು. ಕೊಂಚ ಹೊತ್ತಾದ ಮೇಲೆ ಯಾರೋ "ಇದಂತೂ ಸರಿಯಲ್ಲ; ಈ ನೀರು ತೆಗೆದು ಹೊಸ ನೀರು ಬರೋತನಕ ಸೀನೀರಿಗೇನು ಗತಿ ಹೇಳಿ" ಎಂದು ಕೇಳುತ್ತಿದ್ದರು. ಎಲ್ಲರೂ ಚಿಂತೆಗೊಳಗಾಗಿದ್ದರು.

ತನಿಖೆ ಕ್ರಮಗಳು ನಡೆದು ಆತ್ಮಹತ್ಯವು ಸ್ಥಾಪಿಸಲ್ಪಟ್ಟ ಮೇಲೆ ಕಾಳಪ್ಪ ಶಾಸ್ತ್ರಿಗಳು ಶವಸಂಸ್ಕಾರ ವಿಷಯವನ್ನು ಚರ್ಚಿಸುತ್ತ, ಅವಳು ಅನ್ಯಮತಸ್ಥಳಾದುದರಿಂದ ಆ ಮತದ ಕಟ್ಟಳೆಗೆ ಸರಿಯಾಗಿ ಶವವನ್ನು ಕೀಳು ಜಾತಿಯವರು ಅಷ್ಟು ಜನ ಎಲ್ಲಾದರೂ ಹೂಳಬೇಕೆಂದೂ, ಶ್ರಾದ್ಧ ಮೊದಲಾದುವೆಲ್ಲ ಅನಾಚಾರವಾಗುವುದೆಂದೂ ತೀರ್ಮಾನಿಸಿದರು. ಗಂಗಮ್ಮನವರು ಈ ಅಪಮೃತ್ಯುವಿನ ಬಗ್ಗೆ ಭಯವನ್ನು ಶಾಸ್ತ್ರಿಗಳಿಗೆ ತಿಳಿಸಿದರು. ಇದರ ವಿಚಾರವಾಗಿ ಶಾಸ್ತ್ರಿಗಳು ಮಧ್ಯಾಹ್ನದ ಹೊತ್ತಿಗೆ ಸೂರಪ್ಪನ ಮನೆಯಲ್ಲಿ, ಶುದ್ಧಿ, ಪೂಜೆ, ಶಾಂತಿ ಮುಂತಾಗಿ ಅಗತ್ಯವಾದ ಕಾರ್ಯಗಳನ್ನೆಲ್ಲ ನೆರವೇರಿಸಿದರು.

* * * *

ಕೆಲವು ವರ್ಷಗಳು ಕಳೆದುವು. ಸೂರಪ್ಪನಿಗೆ ಎರಡನೆ ಮದುವೆಯಾಯಿತು. ಬೇರೆ ಮಕ್ಕಳೂ ಆದುವು. ಮೊದಲನೆಯ ಹೆಣ್ಣು ಮಗುವಿಗೆ ಸೂರಪ್ಪನು ದೇವಮ್ಮನೆಂದೇ ಹೆಸರಿಟ್ಟಿದ್ದಾನೆ. 'ದೇವು' ಎಂದು ಕರೆಯುತ್ತಾನೆ. ಗಂಗಮ್ಮವನರು ಇಂದಿಗೂ ದೇವಮ್ಮನ ಹೆಸರಿನಲ್ಲೇ ದೀಪವನ್ನು ಹಚ್ಚುತ್ತಾರೆ. ಗುಂಡಮ್ಮನವರು ಈಗಲೂ ಈ ಕತೆಯನ್ನು ಸಮಯ ಸಿಕ್ಕಿದಾಗಲೆಲ್ಲ ಅವರಿವರಿಗೆ ಸವಿಸ್ತಾರವಾಗಿ ತನ್ನ ವ್ಯಾಖ್ಯಾನದೊಂದಿಗೆ ತಿಳಿಸುತ್ತ "ದೇವರೇ ಅವಳಿಗೆ ಒಳ್ಳೆ ಬುದ್ಧಿ ಕೊಟ್ಟು ನಮ್ಮನ್ನು ಆಪತ್ತಿನಿಂದ ಪಾರುಮಾಡಿಸಿದ!" ಎಂದು ಪೂರ್ತಿಮಾಡುತ್ತಾಳೆ.

**(ಆಕರ: ಕನ್ನಡ ಸಣ್ಣ ಕತೆಗಳು, ಸಂಪಾದನೆ: ಡಾ.ಜಿ.ಎಚ್. ನಾಯಕ)**

# ೨. ಬುದ್ಧಾನುಶಾಸನ

– ಡಾ. ಮೂಡ್ನಾಕೂಡು ಚಿನ್ನಸ್ವಾಮಿ

ಎರಡನೆಯ ಪೋಪ್ ಜಾನ್ ಪಾಲ್ ನವೆಂಬರ್, ೧೯೯೯ ರಲ್ಲಿ ಭಾರತ ದೇಶಕ್ಕೆ ಭೇಟಿ ನೀಡಿದರು. ವಿಶೇಷ ವಿಮಾನದಿಂದ ದೆಹಲಿಯಲ್ಲಿ ಇಳಿಯುತ್ತಿದ್ದಂತೆಯೆ ನೆಲಕ್ಕೆ ಬಾಗಿ ಭೂಮಿಯನ್ನು ಚುಂಬಿಸಿದರು. ಕಾರಣ ಕೇಳಿದಾಗ ಇದು 'ಬುದ್ಧ ಹುಟ್ಟಿದ ನಾಡು' ಎಂದು ಹೇಳಿ ಭಾವುಕರಾಗಿದ್ದರು. ದೇವರಿಲ್ಲದ ಧರ್ಮಮಾರ್ಗವೊಂದನ್ನು ಬೋಧಿಸಿ ಭಾರತಕ್ಕೆ ಭೂಮಿ ತೂಕವನ್ನು ತಂದುಕೊಟ್ಟವನು ಬುದ್ಧ. ಅಭಿವ್ಯಕ್ತಿ ಸ್ವಾತಂತ್ರ್ಯದ ಮೆಕ್ಕಾ ಎನಿಸಿರುವ ಅಮೆರಿಕೆಯಲ್ಲಿ ಎರಡು ವರ್ಷಗಳಿಗೊಮ್ಮೆ ಸರ್ವಧರ್ಮ ಸಮ್ಮೇಳನ ನಡೆಯುತ್ತದೆ. ವಿಶ್ವದಾದ್ಯಂತ ಧಾರ್ಮಿಕ ವಿದ್ವಾಂಸರು ಅಲ್ಲಿಗೆ ಬಂದು ಭಾಗವಹಿಸುತ್ತಾರೆ. ಅಲ್ಲಿ ಬೌದ್ಧ ಧರ್ಮವನ್ನು ಕುರಿತು ಏಕಕಾಲಕ್ಕೆ ಅನೇಕ ಕೇಂದ್ರಗಳಲ್ಲಿ ಚರ್ಚೆಗಳು ನಡೆಯುತ್ತವೆ ಎಂದು ಅಲ್ಲಿಗೆ ಭೇಟಿ ನೀಡಿದ ಸಂಸ್ಕೃತ ಪ್ರಾಧ್ಯಾಪಕರೊಬ್ಬರು ಹೇಳಿದರು, ಅಮೆರಿಕೆಯಲ್ಲಿ ಸುಮಾರು ೧೦೦ ವಿಶ್ವವಿದ್ಯಾಲಯಗಳಲ್ಲಿ ಬೌದ್ಧ ಧರ್ಮ ಬೋಧಿಸಲ್ಪಡುತ್ತದೆಯಂತೆ. ಅಲ್ಲಿನ ವಿದ್ಯಾರ್ಥಿಗಳು ಕಡ್ಡಾಯವಾಗಿ ಯಾವುದಾದರು ಎರಡು ಧರ್ಮಗಳನ್ನು ಐಚ್ಛಿಕವಾಗಿ ಓದಲೇಬೇಕಾಗಿರುವುದರಿಂದ ಸಾಮಾನ್ಯವಾಗಿ ಅವರು ಬೌದ್ಧ ಮತ್ತು ಜುಡಾಯಿಸಂ ಧರ್ಮಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆಂದು ಅವರು ಹೇಳಿದರು. ೨೦೦೪ ರಲ್ಲಿ ನಾನು ಲಾಸ್ ಏಂಜಲ್ಸ ಗೆ ಹೋಗಬೇಕಾಗಿ ಬಂದಾಗ ಅಲ್ಲಿನ ಯಾವುದಾದರೂ ಬೌದ್ಧ ವಿಹಾರಕ್ಕೆ ಭೇಟಿ ನೀಡಬೇಕೆನಿಸಿತು. ಮಹಾಬೋಧಿ ಸಂಘದ ಆನಂದ ಭಂತೇಜಿಯವರನ್ನು ಕೇಳಿದಾಗ ಅವರು ಅಂತರ್ಜಾಲದಿಂದ ಹುಡುಕಿ ತೆಗೆದು ಅಲ್ಲಿರುವ ೬೦೦ ಬೌದ್ಧ ವಿಹಾರಗಳ ವಿಳಾಸಗಳನ್ನು ಕೊಟ್ಟರು! ಇವೆಲ್ಲವೂ ಬೌದ್ಧ ಧರ್ಮಕ್ಕಿರುವ ಘನತೆ, ಅದಕ್ಕಿರುವ ಜನಪ್ರಿಯತೆಯನ್ನು ಕುರಿತು ಹೇಳುತ್ತವೆ.

ಧರ್ಮ ಮತ್ತು ದೇವರು ಒಂದನ್ನೊಂದು ಬೆಸೆದುಕೊಂಡಿವೆ. ಅವು ಬೇರೆ ಬೇರೆ ರೂಪದಲ್ಲಿ ಮನುಷ್ಯನ ತಾತ್ತ್ವಿಕ ಪ್ರಶ್ನೆಗಳಿಗೆ ಅವ್ಯಾಹತವಾಗಿ ಉತ್ತರಗಳನ್ನು ಹುಡುಕುತ್ತಿವೆ. ಅವೆಲ್ಲವೂ ಸಿಗಲಾರದ ಉತ್ತರಗಳಿಗಾಗಿಯೆ ಹುಡುಕುತ್ತಿವೆ ಎಂಬ ಸತ್ಯವನ್ನು ಬುದ್ಧ ೨೬೦೦ ವರ್ಷಗಳ ಹಿಂದೆಯೆ ಕಂಡುಕೊಂಡ. ಅದಕ್ಕೆ ಧರ್ಮದಿಂದ ದೇವರನ್ನು ಬೇರೆ ಮಾಡಿದ. ನೈತಿಕ ನೆಲೆಗಟ್ಟಿನ ಮೇಲೆ ನಿಂತ, ವೈಚಾರಿಕ ಮನಸ್ಸುಗಳಿಗೆ ಒಗ್ಗುವ, ಅನುಭವಕ್ಕೆ ದಕ್ಕುವ ಬದುಕುವ ಮಾರ್ಗವನ್ನು ವಿಶ್ಲೇಷಿಸಿದ. ಅದು ದೇವರ ಹಂಗಿಲ್ಲದೆ ನಿಲ್ಲುವ ಶಕ್ತಿಯನ್ನು ಪಡೆದುಕೊಂಡಿತು. ಆದ್ದರಿಂದಲೇ ಅದು ಇತರ ಧರ್ಮಗಳಿಗಿಂತ ಭಿನ್ನವಾಗಿದೆ ವಿಶಿಷ್ಟವಾಗಿದೆ ಮತ್ತು ಆಕರ್ಷಣೀಯವಾಗಿದೆ. ಪ್ರಾಯಶಃ ಇತರ ಧರ್ಮಗಳ ತಥಾಕಥಿತ ಮಂಥನ ಕ್ರಿಯೆಯಲ್ಲಿ ದೇವರು ಪ್ರತ್ಯಕ್ಷವಾಗದೆ ಇರುವುದರಿಂದ ಜನರು ಭ್ರಮನಿರಸನಗೊಂಡಿರಬೇಕು. ಆದ್ದರಿಂದ ಬೌದ್ಧ ಧರ್ಮ ತನ್ನ ಜನಪ್ರಿಯತೆಯನ್ನು ಹೆಚ್ಚಿಸಿಕೊಳ್ಳುತ್ತಿದೆ.

ಸಿದ್ಧಾರ್ಥ ಗೌತಮನನ್ನು ಕ್ಷಾತ್ರ ಗುಣಗಳಿಂದ ಕೂಡಿದ ಉತ್ತಮ ರಾಜನನ್ನಾಗಿಸಬೇಕೆಂಬ ಆಸೆ ಸಹಜವಾಗಿಯೆ ಅವನ ತಂದೆ ತಾಯಿಗಳಿಗಿರುತ್ತದೆ. ಒಮ್ಮೆ ಸಾಕು ತಾಯಿ ಮಹಾಪ್ರಜಾಪತಿ ಮಗನಿಗೆ ಬೇಟೆಯಾಡಿಕೊಂಡು ಬರಲು ಆಗ್ರಹಿಸುತ್ತಾಳೆ. ಅದಕ್ಕೆ ಗೌತಮ ಅದು ಕೊಲ್ಲುವ ಆಟ ಒಲ್ಲೆ ಎನ್ನುತ್ತಾನೆ. ಮುಂದೆ ಶತೃಗಳೊಡನೆ ಕಾದಾಡಲು ಬೇಟೆ ತರಬೇತಿಯಿದ್ದಂತೆ; ನೀನು ಬೇಟೆಯಾಡುವುದು ಕ್ಷತ್ರಿಯರ ಸಹಜ ಧರ್ಮ ಎಂದು ಹೇಳುತ್ತಾಳೆ. ಆದರೆ ಸಿದ್ಧಾರ್ಥ ಕೊಲ್ಲುವುದು ಯಾವ ಧರ್ಮ ಎಂದು ಮತ್ತೆ ಪ್ರಶ್ನಿಸುತ್ತಾನೆ. ದೇವದತ್ತನು ಹೊಡೆದುರುಳಿಸಿದ ಹಂಸವನ್ನು ಕೈಗೆತ್ತಿಕೊಂಡು ಬಾಣವನ್ನು ಕಿತ್ತು ಗಿಡ ಮೂಲಿಕೆಗಳಿಂದ ಗಾಯಕ್ಕೆ ಆರೈಕೆ ನೀಡುತ್ತಾನೆ. ಈ ಘಟನೆ ಬುದ್ಧನಲ್ಲಿ ಬಾಲ್ಯದಲ್ಲಿಯೆ ಅಹಿಂಸೆ, ಕರುಣೆ, ದಯೆ ಮುಂತಾದ ಉದಾತ್ತ ಮೌಲ್ಯಗಳು ಅಂಕುರಿಸಿದ್ದವು ಎಂಬುದನ್ನು ತಿಳಿಸುತ್ತದೆ.

ಈ ಸೃಷ್ಟಿಯ ಮೂಲವನ್ನು ಹುಡುಕುವುದು ಮನುಷ್ಯನ ತಣಿಯದ ಕುತೂಹಲ. ಅದು ವ್ಯರ್ಥ ಕಾಲಹರಣವೆಂದು, ಅದರ ಅವಶ್ಯಕತೆಯಿಲ್ಲವೆಂದು ಬುದ್ಧ ಸುಂದರ ರೂಪಕಗಳಲ್ಲಿ ಅನೇಕ ಸಂದರ್ಭದಲ್ಲಿ ಹೇಳಿದ್ದಾನೆ. ದೀಘ ನಿಕಾಯದಲ್ಲಿ ಬರುವ 'ಪಾಥಿಕಸುತ್ತ'ದ ಈ ಪ್ರಸಂಗದಲ್ಲಿ ಆದಿಕಾರಣವನ್ನು ಹುಡುಕುವುದು ಮೂರ್ಖತನ ಎಂಬುದನ್ನು ಬುದ್ಧ ನಿರೂಪಿಸುತ್ತಾನೆ. ಆದಿಕಾರಣವೆಂದರೆ ಈ ಸೃಷ್ಟಿ ಹೇಗಾಯಿತು, ಯಾರು ಕಾರಣ ಎಂಬಿತ್ಯಾದಿ ಪ್ರಶ್ನೆಗಳು. ಸುನಕ್ಖತ್ತ ಎಂಬ ಶಿಷ್ಯನು ಬುದ್ಧ ಭಗವಾನರಿಂದ ದೂರವಾಗಲು ಬಯಸುತ್ತಾನೆ. ಕಾರಣವೇನೆಂದರೆ ಹೀಗೆ ಪ್ರಶ್ನೆಗಳನ್ನು ಹಾಕುತ್ತಾನೆ.

'ಭಂತೆ, ಮನುಷ್ಯರಿಗೆ ಸಾಧ್ಯವಲ್ಲದ ಕಾರ್ಯಗಳನ್ನು ನೀವು ನನ್ನ ಎದುರಿಗೆ ಮಾಡಿಲ್ಲ'

'ಸುನಕ್ಖತ್ತ, ನೀನು ನನ್ನ ಹತ್ತಿರ ಇರು, ನಾನು ಮನುಷ್ಯರಿಗೆ ಸಾಧ್ಯವಲ್ಲದ ಕಾರ್ಯಗಳನ್ನು ಮಾಡಿ ತೋರಿಸುತ್ತೇನೆ ಎಂದು ನಿನಗೆ ಎಂದಾದರೂ ಹೇಳಿದ್ದೇನೆಯೇ?.

'ಇಲ್ಲ ಭಂತೆ'

'ನಾನು ಭಗವಾನರ ಹತ್ತಿರವೇ ಉಳಿಯುತ್ತೇನೆ. ಅವರು ಮನುಷ್ಯರಿಗೆ ಸಾಧ್ಯವಲ್ಲದ ಕೆಲಸಗಳನ್ನು ಮಾಡಿ ತೋರಿಸಬೇಕು, ಎಂದು ನೀನು ಹೇಳಿದ್ದಿಯೋ?

'ಇಲ್ಲ ಭಂತೆ'

'ಸುನಕ್ಖತ್ತ, ಮನುಷ್ಯರಿಗೆ ಸಾಧ್ಯವಲ್ಲದ ಕಾರ್ಯಗಳನ್ನು ಮಾಡಿ ತೋರಿಸುತ್ತೇನೆ, ನೀನು ನನ್ನ ಬಳಿ ಇರು ಎಂದು ನಿನಗೆ ನಾನು ಎಂದೂ ಹೇಳಲಿಲ್ಲ. ನನ್ನನ್ನು ಹಾಗೆ ಎಂದೂ ನೀನೂ ಕೇಳಲಿಲ್ಲ. ಹಾಗಿದ್ದ ಮೇಲೆ ನನ್ನಿಂದ ದೂರವಾಗುತ್ತೇನೆಂದು ನೀನು ಹೇಳುವುದು ದಡ್ಡತನವಲ್ಲವೇ? ನಿನಗೆ ಏನನ್ನಿಸುತ್ತದೆ, ಸುನಕ್ಖತ್ತ? ನಾನು ಭೋಧಿಸುವ ಧರ್ಮವು ಮನುಷ್ಯರಿಗೆ ಸಾಧ್ಯವಲ್ಲದ ಕಾರ್ಯಗಳನ್ನು ಮಾಡುವವರನ್ನು ದುಃಖಕ್ಷಯದೆಡೆಗೆ ಕೊಂಡೊಯ್ಯುತ್ತದೆ ಎಂದು ತಿಳಿಸುತ್ತದೆಯೇ?

'ಮನುಷ್ಯರಿಗೆ ಸಾಧ್ಯವಲ್ಲದ ಕಾರ್ಯಗಳನ್ನು ಮಾಡುವವನೇ ಆಗಲಿ, ಆಂಥ ಕಾರ್ಯಗಳನ್ನು ಮಾಡದವನೇ ಆಗಲೀ ದುಃಖಕ್ಷಯವನ್ನು ಸಾಧಿಸುತ್ತಾನೆ ಎಂಬುದಾವುದನ್ನೂ ಭಗವಾನರು ಬೋಧಿಸಿರುವ ಧರ್ಮವು ತಿಳಿಸುವುದಿಲ್ಲ!

'ಹಾಗಾದರೆ, ಸುನಕ್ಖತ್ತ, ಮನುಷ್ಯರಿಗೆ ಸಾಧ್ಯವಲ್ಲದ ಕಾರ್ಯಗಳನ್ನು ಮಾಡುವುದಾದರೂ ಏಕೆ? ಓ ಮೂರ್ಖ, ನೋಡು, ನಿನ್ನದು ತಪ್ಪು.'

'ಭಂತೆ, ನನಗೆ ಆದಿಕಾರಣವನ್ನು ನೀವು ವಿವರಿಸಿಲ್ಲವಲ್ಲವೆ?" ಸುನಕ್ಖತ್ತ, ನೀನು ನನ್ನ ಹತ್ತಿರ ಇರು, ನಿನಗೆ ಆದಿಕಾರಣವನ್ನು ವಿವರಿಸುತ್ತೇನೆ ಎಂದು ಎಂದಾದರೂ ಹೇಳಿದ್ದನೆ?

'ಇಲ್ಲ ಭಂತೆ'

'ನಾನು ಭಗವಾನರ ಹತ್ತಿರವಿರುತ್ತೇನೆ, ಅವರು ನನಗೆ ಆದಿಕಾರಣವನ್ನು ತಿಳಿಸುತ್ತಾರೆ ಎಂದು ನೀನು ಎಂದಾದರೂ ನನಗೆ ಹೇಳಿದ್ದೆಯಾ?'

'ಇಲ್ಲ ಭಂತೆ'

'ನೀನು ನನ್ನ ಹತ್ತಿರ ಇರು, ನಿನಗೆ ನಾನು ಆದಿಕಾರಣವನ್ನು ತಿಳಿಸುತ್ತೇನೆ. ಎಂದು ನಾನು ಎಂದೂ ಹೇಳಲಿಲ್ಲ. ನಾನು ಭಗವಾನರ ಹತ್ತಿರ ಇರುತ್ತೇನೆ, ಅವರು ನನಗೆ ಆದಿಕಾರಣವನ್ನು ವಿವರಿಸಬೇಕು ಎಂದು ನೀನು ಎಂದೂ ನನ್ನನ್ನು ಕೇಳಲಿಲ್ಲ. ಸುನಕ್ಖತ್ತ, ಅದಿಕಾರಣವನ್ನು ವಿವರಿಸುವ ಅಥವಾ ವಿವರಿಸದೆ ಹೋಗುವುದೇ ನನ್ನಿಂದ ಬೋಧಿತವಾಗಿರುವ ಧರ್ಮದ ಗುರಿಯೇ? ಅಂಥ ವಿವರಣೆ ಒಬ್ಬನನ್ನು ದುಃಖಕ್ಷಯದೆಡೆಗೆ ಕೊಂಡೊಯ್ಯುತ್ತದೆಯೆ?

'ಆದಿಕಾರಣವನ್ನು ವಿವರಿಸುವುದಾಗಲಿ, ಅದನ್ನು ವಿವರಿಸದಿರುವುದಾಗಲೀ ಧರ್ಮದ ಗುರಿಯಲ್ಲ ಭಗವಾನರಿಂದ ಭೋದಿಸಲ್ಪಟ್ಟಿರುವ ಧರ್ಮವು ದುಃಖಕ್ಷಯದ ಕಡೆಗೆ ಕೊಂಡೊಯ್ಯುತ್ತದೆ.'

'ಸುನಕ್ಖತ್ತ, ಆದಿಕಾರಣವನ್ನು ವಿವರಿಸುವುದಾಗಲೀ, ವಿವರಿಸದಿರುವುದಾಗಲೀ ನನ್ನ ಧರ್ಮದ ಗುರಿಯಲ್ಲ. ಆ ಧರ್ಮವು ದುಃಖಕ್ಷಯದ ಕಡೆಗೆ ಕೊಂಡೊಯ್ಯುತ್ತದೆ. ಆದಿಕಾರಣವನ್ನು ತಿಳಿಯುವುದರಿಂದ ನಿನಗಾಗುವ ಉಪಯೋಗವಾದರೂ ಏನು? ನೋಡು, ದಡ್ಡ, ನಿನ್ನದೇ ಅಪರಾಧವಾಗುತ್ತದೆ.

ಹೀಗೆ ಬುದ್ಧ ತನ್ನ ವೈಚಾರಿಕ ಎಚ್ಚರದಿಂದಲೇ ಜನರನ್ನು, ಜಿಜ್ಞಾಸುಗಳನ್ನು ಮಣಿಸುತ್ತಿದ್ದನೆ ಹೊರತು ಪವಾಡಗಳ ಪ್ರದರ್ಶನದಿಂದಲ್ಲ. ಬೌದ್ಧ ವಾಙ್ಮಯದಲ್ಲಿ ಪವಾಡ ಸದೃಶವೆನ್ನಿಸುವ ಬುದ್ಧನ ಒಳನೋಟಗಳು ಹಾದು ಹೋಗುತ್ತವೆ.

ಆದರೆ ಬುದ್ಧ ಬಹುಜನರಿಗೆ ಜೀರ್ಣಾರ್ಹವಾದ ವಿಚಾರಗಳನ್ನು ಮಾತ್ರ ಬೋಧಿಸಿದ್ದಾನೆ. ಧರ್ಮದ ವ್ಯಾಖ್ಯಾನವೂ ಅಷ್ಟೆ. ದಮ್ಮ ಪದದಲ್ಲಿ ಬರುವ ೧೮೩ ನೇ ಗಾಥೆ ಬೌದ್ಧ ಧರ್ಮವನ್ನು ಹೀಗೆ ಸಾದರಪಡಿಸುತ್ತದೆ.

ಸಬ್ಬ ಪಾಪಸ್ಸ ಅಕರಣಂ
ಕುಸಲಸ್ಸ ಉಪಸಂಪದಾ
ಸಚಿತ್ತ ಪರಿಯೋದಪನಂ
ಏತಂ ಬುದ್ಧಾನುಶಾಸನಂ.

ಇದರ ಸಾರಾಂಶವಿಷ್ಟೆ. ಕೆಟ್ಟದ್ದೆಲ್ಲವನ್ನು ತ್ಯಜಿಸುವುದು/ ಒಳ್ಳೆಯದನ್ನು ಬೆಳೆಸಿಕೊಳ್ಳುವುದು/ ಮನಸ್ಸನ್ನು ಶುದ್ಧವಾಗಿಟ್ಟುಕೊಳ್ಳುವುದು/ ಇದೇ ಬುದ್ಧರು ಹೇಳಿದ ಶಾಸನ. ಇಷ್ಟು ಸರಳವಾಗಿ ಹಾಗೂ ಸಮರ್ಪಕವಾಗಿ ಧರ್ಮವನ್ನು ಬೇರೆಯವರು ವ್ಯಾಖ್ಯಾನಿಸಲಾಗಿಲ್ಲವೆನಿಸುತ್ತದೆ.

ಪರಮಾರ್ಥದ ನೆಪದಲ್ಲಿ ಬುದ್ಧ ಅಲೌಕಿಕ ಶಕ್ತಿಗಳ ಮೊರೆಹೋಗುವುದಿಲ್ಲ. ಮನುಷ್ಯನ ಎಲ್ಲ ಸಮಸ್ಯೆಗಳು ಮತ್ತು ಪರಿಹಾರಗಳು ಅವನ ಮನಸ್ಸಿನಲ್ಲಿಯೆ ಅಡಗಿರುತ್ತವೆ ಎಂಬ ಅಗೋಚರ ಸತ್ಯವನ್ನು ಬಹಿರಂಗಪಡಿಸುತ್ತಾನೆ, ಮನಸ್ಸನ್ನು ಕುರಿತ ಬುದ್ಧನ ವಿಶ್ಲೇಷಣೆಯನ್ನು ನೋಡಿದರೆ ಈ ಲೋಕದ ಮೊದಲ ಮನಶ್ಯಾಸ್ತ್ರಜ್ಞ ಬುದ್ಧ ಎಂಬುದು ಅರಿವಾಗುತ್ತದೆ. ಮನಸ್ಸನ್ನು ಪಳಗಿಸುವ ಬಗೆಯೆ ಧ್ಯಾನ ಮಾರ್ಗವೆಂದು ಜಗತ್ತಿಗೆ ಬೋಧಿಸಿದ್ದಾನೆ.

ಮನಷ್ಯನ ಪರಮೋಚ್ಚ ಗುರಿ ಎಂದರೆ ತಾನು ಸುಖವಾಗಿರುವುದು. ಬೌತಿಕ ಆಸೆ ಆಕಾಂಕ್ಷೆಗಳನ್ನು ನೀಗಿಸಿಕೊಳ್ಳುವುದರಿಂದ ಸುಖವಾಗಿರಬಲ್ಲೆನೆಂಬ ನಂಬಿಕೆ ಹುಸಿಯಾಗಿದೆ. ಹಾಗಿದ್ದರೆ ಪಾಶ್ಚಾತ್ಯ ರಾಷ್ಟ್ರಗಳೆಲ್ಲವೂ ಈಗ ಸುಖದ ಸುಪ್ಪತ್ತಿಗೆಗಳಾಗಿರುತ್ತಿದ್ದವು. ಹಣ ಸಂಪಾದನೆ, ಕಾರು, ಬಂಗಲೆ ವೈಭವೋಪೇತ ಪರಿಕರಗಳು ಸುಖವನ್ನು ತಂದುಕೊಡಲಾರವು. ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸುಧಾರಣೆಗಳನ್ನು ಕಂಡ ಪಾಶ್ಚಾತ್ಯ ರಾಷ್ಟ್ರಗಳು ಆಧುನಿಕವಾದ ಸುವ್ಯವಸ್ಥಿತವಾದ ಬೌತಿಕ ಜಗತ್ತನ್ನು ಸೃಷ್ಟಿಮಾಡಿಕೊಂಡಿವೆ. ಆದರೂ ಜನರಲ್ಲಿ ದುಃಖವಿದೆ, ಆತಂಕಗಳಿವೆ ಯಾಕೆ? ಬಯಕೆಗಳ ಪೂರೈಕೆ ಮತ್ತಷ್ಟು ಬಯಕೆಗಳ ಸೃಷ್ಟಿಯೇ ಆಗಿದೆ, ಅದು ನಿರಂತರ, ಆದ್ದರಿಂದ ದುಃಖವೂ ನಿರಂತರ.

ಬೌದ್ಧಧರ್ಮದಲ್ಲಿ ದುಃಖವನ್ನು ಕುರಿತ ಜಿಜ್ಞಾಸೆ ಅತಿಯಾಗಿದೆ, ಆದ್ದರಿಂದ ಅದು ಬದುಕಿಗೆ ವಿಮುಖವಾಗಿದೆ ಎಂದು ತಪ್ಪಾಗಿ ಅರ್ಥೈಸುವ ಜನರೂ ಇದ್ದಾರೆ. ಜಗತ್ತಿನಲ್ಲಿ ಕತ್ತಲು ಹೇಗೆ ಸ್ಥಾಯಿಯಾಗಿದೆಯೋ ಹಾಗೆಯೆ ಮನಸ್ಸಿನಲ್ಲಿ ತೃಷ್ಣೆಯಿದೆ, ಆದ್ದರಿಂದ ದುಃಖ ಸ್ಥಾಯಿಯಾಗಿದೆ. ಕತ್ತಲನ್ನು ಹೋಗಲಾಡಿಸಲು ಸೂರ್ಯನೆಂಬ ಬೆಳಕು ಹರಿದು ಬರಬೇಕಾಗುತ್ತದೆ, ಮನಸ್ಸಿನ ದುಃಖವನ್ನು ದೂರಮಾಡಲು 'ಅರಿವು' ಎಂಬ ಬೆಳಕಿನ ಅಗತ್ಯವಿದೆ. ಈ 'ಅರಿವು' ಬುದ್ಧ ಬೋಧಿಸಿದ ನಾಲ್ಕು ಆರ್ಯಸತ್ಯಗಳಲ್ಲಿ, ದುಃಖ ನಿವಾರಣೆ ಮಾಡಲು ತೋರಿಸಿದ ಅಷ್ಟಾಂಗ ಮಾರ್ಗಗಳಲ್ಲಿ ಅಡಗಿದೆ. ಅಷ್ಟಾಂಗ ಮಾರ್ಗಗಳು ಮನುಷ್ಯನ ಸುಃಖ ಜೀವನಕ್ಕಾಗಿ ಹೆಣೆದ ಸೂತ್ರಗಳಾಗಿವೆ. ಆದ್ದರಿಂದ ಬೌದ್ಧ ಧರ್ಮ ಬದುಕಿಗೆ ವಿಮುಖವಾಗಿದೆ ಎಂದು ಹೇಳುವುದು ಮೂರ್ಖತನವಾಗುತ್ತದೆ.

ಈ ಅಷ್ಟಾಂಗ ಮಾರ್ಗಗಳನ್ನು ಮೂರು ವಿಧಗಳಲ್ಲಿ ಪ್ಯಾಕೇಜ್ ಮಾಡಿರುವುದರಿಂದ ಅವು ಬೌದ್ಧ ಧರ್ಮದ ಮಹಾಮಂತ್ರಗಳಾಗಿವೆ. ಅವುಗಳೆಂದರೆ ಪ್ರಜ್ಞೆ, ಶೀಲ ಮತ್ತು ಸಮಾಧಿ, ಪ್ರಜ್ಞೆಯಿಂದ ಹೊರಡುವ ದೃಷ್ಟಿ ಮತ್ತು ಸಂಕಲ್ಪಗಳು ಸರಿಯಾದ ಮಾರ್ಗದಲ್ಲಿರಬೇಕು. ಶೀಲಕ್ಕೆ ಸಂಬಂಧಿಸಿದ ವಚನ, ಕರ್ಮಮತ್ತು ಜೀವನಕ್ರಮ ಸರಿದಾರಿಯಲ್ಲಿರಬೇಕು. ಸಮಾಧಿಸ್ಥಿತಿಯನ್ನು ಬೇಡುವ ಪ್ರಯತ್ನ, ಮನಸ್ಥಿತಿ ಮತ್ತು ಧ್ಯಾನ ಇವುಗಳು ಸರಿಯಾದ ಮಾರ್ಗದಲ್ಲಿರಬೇಕು, ಇಂಥಲ್ಲಿ ದುಃಖ ಅಡ್ಡಗಾಲಿಡುವ ಸಂಭವವೇ ಇರುವುದಿಲ್ಲ. ಇವು ಯಾರೊಬ್ಬರ ಸಾಮಾನ್ಯ ತಿಳಿವಳಿಕೆಗೂ ಒಗ್ಗುವ ವಿಚಾರಗಳೇ, ಇವುಗಳನ್ನು ಬುದ್ಧ ಮಧ್ಯಮ ಮಾರ್ಗವೆಂದು ಕರೆದಿದ್ದಾನೆ. ಯಾಕೆಂದರೆ ಈ ಮಾರ್ಗ ಎರಡು ಅತಿರೇಕಗಳಿಂದ ಮುಕ್ತವಾಗಿವೆ. ಒಂದು ಐಹಿಕ ಬೋಗಲಾಲಸೆಗಳಲ್ಲಿ ಮುಳುಗುವುದು, ಇನ್ನೊಂದು ವೈರಾಗ್ಯದ ನೆಪದಲ್ಲಿ ದೇಹದಂಡನೆಯಂಥ ಮಾರ್ಗವಿಡಿದು ತನ್ನನ್ನು ತಾನು ಶಿಕ್ಷಿಸಿಕೊಳ್ಳುವುದು.

ಇವೆಲ್ಲವೂ ಬುದ್ಧ ತನ್ನ ಅನುಭವದಿಂದಲೇ ಕಂಡುಕೊಂಡ ಸತ್ಯಗಳು, ಬುದ್ಧ ಮಾರ್ಗದಲ್ಲಿ ನಡೆಯುವುದೆಂದರೆ ಈ ಅಷ್ಟಾಂಗ ಮಾರ್ಗಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳುವುದು, ಆಚರಣೆಯಲ್ಲಿ ಅನುಷ್ಠಾನಗೊಳಿಸುವುದು. ಜ್ಞಾನ

ಸಂಪಾದನೆಯೂ ಅನುಭವದ ಮೂಲಕವೇ ಆಗಬೇಕೆಂಬುದು ಬೌದ್ಧ ಆಶಯ. ಜೆನ್ ಪಂಥ ಬಿಕ್ಕುಗಳಿಗೆ ಕೆಲವು ವರ್ಷಗಳವರೆಗೆ ಗ್ರಂಥಾಭ್ಯಾಸವನ್ನೆ ನಿಷೆಧಿಸಿದೆ. ಅತಿರಂಜಿತ, ಅಲೌಕಿಕ ಶಕ್ತಿಗಳಿಗೆ ಆತುಕೊಳ್ಳದೆ ಸರಳ ಸನ್ಮಾರ್ಗ ಜೀವನ ಪದ್ಧತಿಯನ್ನು ಬೋಧಿಸುವ ಬೌದ್ಧಧರ್ಮ ಜಗತ್ತಿನ ಗಣ್ಯರನೇಕರ ಪ್ರಶಂಸೆಗೊಳಗಾಗಿರುವುದು ಸೋಜಿಗವೇನಲ್ಲ.

**(ಆಕರ: ಅಪರಿಮಿತದ ಕತ್ತಲೆ, ಸುಮೇಧ ಪ್ರಕಾಶನ, ಗುಲ್ಬರ್ಗ, ೨೦೧೦)**

# ೩. ಸಮಗಾರ ಭೀಮವ್ವ

– ಎಚ್.ಎಸ್. ಶಿವಪ್ರಕಾಶ್

ಸಮಗಾರ ಭೀಮವ್ವ ಎದೆ ಹಾಲ ನೀಡವ್ವ
ನೆಲದೆದೆಯ ಹಾಲು ಹೀರಿ ನೆತ್ತಿಗೇರಿದ ಬಿಸಿಲು
ಕರಗಲಾಗದೆ ಬೀಳ್ಬಿಡುವ ನವಲಗುಂದದ ಗುಡ್ಡ
ಅತ್ತ ಇತ್ತ ಸುಡುವೆಲರ ಸುಯ್ಲು ಊರು....

ನಡುಹಗಲಿನಲ್ಲೇ ಗವ್ವಿರುಳು ಕಣ್ಣಿಗಿಳಿಯಿತು ತಾಯಿ
ನಿಂತನೆಲ ಒಮ್ಮೆಗೇ ಚಿಮ್ಮಿ
ಪುಟಿಯಿತು ಮೇಲೆ ಕೆಳಗೆ
ಎಡಗಡೆಗೆ ಬಲಗಡೆಗೆ
ಕಿಕ್ಕಿರಿದು, ತಾರೆ ಸಂಕುಳ ದಿಕ್ಕೆಟ್ಟ ಹಾಗಾಗಿ
ಸ್ವಪ್ನ ಬಂದೆರಗಿತ್ತು; ಗಿರಿಗಟ್ಟಲೆ ಜಗದ ಮಧ್ಯ
ಕಾಯುವ ಗುಡ್ಡದ ಮೇಲೆ ಬೇಯುವ ಜ್ವರದ
ಮೈಯಾರಿ ಬಾಯೇಹಾರಿ
ಹೋಗುವ ಮುನ್ನ
ಸಮಗಾರ ಭೀಮವ್ವ ಎದೆ ಹಾಲ ನೀಡವ್ವ

ಅಜಾತನಾದವನಿಗೆ ಜಾತಿ ಯಾವುದೆ ತಾಯಿ?
ಹೊಟ್ಟೆಯಲ್ಲಿಟ್ಟುಕೊಂಡದ್ದಕ್ಕೆ ತಾಯಿ ನೋವಿಗೆ ತೊತ್ತು;
ತಂದೆ ಹಾಕುವ ತುತ್ತು; ಸುತ್ತ ಮುತ್ತು ಊರು ಕೇರಿ
ದಿಕ್ಕು ದೇಶ ಹರಿದು
ಜ್ಯೋತಿಯನ್ನರಸುತ್ತ
ಬಿಸಿಲು ಮಳೆ ಗಾಳಿ ಮಾಗಿ ಮಂಜಿನಿಬ್ಬನಿ ತೊಟ್ಟ
ನಾಗಲಿಂಗನ ಮೈಯಿ ಇಂದು ಕೆಂಡ
ಒಡಲು ಹಸಿವಿನ ಕುಂಡ, ಹಾಲು ಸುರಿಯೇ ತಾಯಿ
ಸಮಗಾರ ಭೀಮವ್ವ ಎದೆ ಹಾಲ ನೀಡವ್ವ

ಏನಾಯ್ತು ನಿಟಿಲ ಭ್ರೂಮಧ್ಯ ಸ್ಫಟಿಕ ವರ್ಣದ ದೀಪ್ತಿ
ಮೇರುದಂಡದಿ ಹರಿದ ತಿಳಿಬೆಳಕಿನ ಹಾದಿ
ದಾಟಿ ಕದಳಿ ಶಿಖರ ಮೀರಿ ಹಾರಿ
ಅಂಬರದಲ್ಲಿ ತೇಲಾಡಿ ನನ್ನ ಆತ್ಮದ ಪಕ್ಷಿ
ಯಾಕೆ ನಾಟಿತೋ ಯಾವ ಬಾಣವೋ ಏನೋ...
ನಿನ್ನ ಕಾಲಡಿ ಬಿದ್ದ ಹಸಿವು ಜ್ವರಗಳ ಮುದ್ದೆ
ಸೀದ ಕಿರುಮರಿ ಹಕ್ಕಿ
ಎದೆಗುಟುಕ ನೀಡವ್ವ ಸಮಗಾರ ಭೀಮವ್ವ
ಸಮಗಾರ ಭೀಮವ್ವ ಎದೆ ಹಾಲ ನೀಡವ್ವ

ಈ ರೀತಿ ಲಕ್ಷಯೋಜನದಾಚೆ ಕೋಟಿಯೋಜನೆಯಾಚೆ
ನೀ ಯಾಕೆ ಕುಳಿತಿರುವಿ? ಬಂಜೆಗಂಬನಿ

ಮಣಿಯ ಯಾಕೆ ಪೋಣಿಸುತಿರುವಿ?
ಮೌನದೆಳೆ ಎಳೆ ಎಳೆಯ ರಾಟಿಯ ಸುತ್ತಿ ಬಿಚ್ಚಿ
ಮತ್ತೆ ಸುತ್ತುತ್ತಿರುವಿ? ನೆಲದ ಕಸವನು ಗುಡಿಸಿ ಕಸವ ಗೊಬ್ಬರ ಮಾಡಿ
ಬೀಜಬಿತ್ತುವ ಕೈಯೆ,
ದೇಸಾಯಿ ಪಾಟೀಲ ಕುಲಕರಣಿಗಳ ಕಾವು
ಕಡಿಯಲಾಗದ ಮರವೆ, ಕಡಿದರೂ ಹೊಲೆ
ಹೊಲೆಯೆಂಬ ಒಲೆಯಲ್ಲಿ ಸುಟ್ಟರೂ
ರೊಟ್ಟಿಯಾಗುವ ಬಾಯ್ಗೆ.

ಮೊಲೆಬರದ ಕೊಡಗೂಸೆ
ಮದುವೆಯಾಗದ ತಾಯೆ
ಮೊಲೆಹಾಲು ಬೇಡವ್ವ ಎದೆ ಹಾಲ ನೀಡವ್ವ
ಸಮಗಾರ ಭೀಮವ್ವ

ತಂದಿರುವೆ ನಿನಗೆಂದು
ಗದಗುಡುವ ಗದಗ ಬೀದಿಗಳ ಪ್ಲೇಗನ್ನು; ವಿಕ್ಟೋರಿಯಾ ರಾಣಿ ನಾಣ್ಯದ
ಬೆಳಕು
ಕಮರಿಸಿದ ಸೂರ್ಯರನು; ಹಸಿರು ಜಗ್ಗನೆ ಉರಿವ ಹೊಲದ ಆಳದಲ್ಲಿ
ಬಸಿರ ಮಕ್ಕಳ ಹೂತು ಕೊಯ್ಲಾದ
ತೆನೆ ತೆನೆ ಜೋಳಗಂಬನಿಯನ್ನು; ಬ್ರಾಹ್ಮಣರ ಕೇರಿಯಲಿ ಕಾಲರದ ಹೊಲೆಯ
ಕೂಸು ಮಕ್ಕಳನೊಯ್ದು ಸಿದಿಗಿ ಬೊಂಬುಗಳನ್ನು; ಕಿತ್ತೂರ ವಂಶವನು ಕಿತ್ತೆಸೆದ
ಕಡುಗೋಪಿ
ಹುಚ್ಚ ಮಡಿವಾಳನ ಕಣ್ಣುಗಳನು;
ತೊಲೆಬಿದ್ದ ಯಮನ ಮನೆಯಲ್ಲಿ
ಉಳುಕೊಳ್ಳದೆ ಮಡದಿಯ
ಕಳುಹಿಕೊಟ್ಟಿರುವ ಶಿಶುವಿನ ಹಾಳು
ಶರೀಫನ ಕರುಳ ಹುಣ್ಣುಗಳನು.

ಯಾವ ಗುಡಿಸಲಿನಲ್ಲಿ ಯಾವ ಆಕಳು ಬರಡು
ಯಾರ ಕಾಲಿಗೆ ಕುತ್ತು
ಕ್ಷಾಮಲಕ್ಷ್ಮಿಯ ಸಿಟ್ಟು ಯಾರ ಹೊಲದಲಿ ಬಿತ್ತು
ಊರಸೀರೆಗೆ ಹಿಗ್ಗಿ ಹೀರೆಯಾಗುವ ಆಗಸ
ಯಾರ ಚಿನ್ನಕೋ ಕೊಬ್ಬಿದ ಪತ್ತಾರಣ್ಣ;
ಕೂಸುಗಳ ಕದಪು ಎಷ್ಟೊಂದು ಕೆಂಪು
ಯಾವ ಹೂವಿನ ಕಂಪು...
ಕೂಳುಂಡು ಬದುಕಲಾರದೆ ಹೇಲುಂಡು ಬದುಕೇನೆಂಬ
ಈ ಚಿಂತೆಗಳ ಹುಲುಗೂರ ಸಂತೆ
ಹರಿಯುವ ಮೊದಲು ಸಮಗಾರ ಭೀಮವ್ವ ಎದೆ ಹಾಲ ನೀಡವ್ವ

ಎಳೆಗೂಸು ನೀನು ಮುದಿಗಣ್ಣೀರನೊರೆಸವ್ವ
ಕೊಡಗೂಸು ಗೆಳತಿ ಕೈಹಿಡಿದು ನಡೆಸವ್ವ

ತಾರವ್ವ ಮಳೆಯ ಎಳೆಎಳೆಯ ಎದೆಹಾಲ
ಸಿಂಪಡಿಸು ಗುಡ್ಡಕ್ಕೆ ನವಲಗುಂದಕ್ಕೆ
ಗದಗಕ್ಕೆ ಗಿರಣಿಗಳು ಕಿರುಗುಡುವ ಹುಬ್ಬಳ್ಳಿ ನಗರಕ್ಕೆ
ತಾರೆಮಂಡಲ ಬುಗುರಿ ಕೆದರಿರುವ ವ್ಯೋಮಕ್ಕೆ
ತಾರವ್ವ ಚಂದ್ರವ್ವ ಮುಗಿಲವ್ವ ಭುಗಿ ಭುಗಿಲವ್ವ
ಎದೆಯಲ್ಲಿ ಕರುಳಲ್ಲಿ ನೆಲದಲ್ಲಿ...
ಏಸು ಕಾವಿತ್ತವ್ವ ಮಳೆಬಿದ್ದ ನೆಲದಲ್ಲಿ?
ಕಾವು ತಡೆಯದೆ ಹಾವೇಸು ಹುತ್ತವ ಬಿಟ್ಟು

ನೆಲದುದ್ದ ನೆಲದಗಲ ಹೊರಳಿದುವ್ವವ್ವಾ...
ಸಮಗಾರ ಭೀಮವ್ವ ಎದೆ ಹಾಲ...

**(ಆಕರ: ಮಳೆ ಬಿದ್ದ ನೆಲದಲ್ಲಿ, ಕವಿತೆ: ಇಂದಿನ ತನಕ, ಸಮಗ್ರ ಕವಿತೆಗಳು)**

# ೪. ಧರ್ಮ ಮತ್ತು ರಾಜಕಾರಣ (ಓದು ಪಠ್ಯ)

– ರಾಮಮನೋಹರ ಲೋಹಿಯಾ
ಅನು: ಲಕ್ಷ್ಮೀನಾರಾಯಣ ಅರೋರಾ

ಧರ್ಮ ಮತ್ತು ರಾಜಕಾರಣ ಇವೆರಡರ ನಡುವೆ ಇರುವ ಸಂಬಂಧ ಇಂದು ಕೆಟ್ಟುಹೋಗಿದೆ. ಧರ್ಮ ದೀರ್ಘಕಾಲದ ರಾಜಕಾರಣವಾದರೆ, ರಾಜಕಾರಣ ಅಲ್ಪಕಾಲದ ಧರ್ಮ. ಧರ್ಮ ಶ್ರೇಯಸ್ಸನ್ನು ಗಳಿಸಿಕೊಳ್ಳುವ ಪ್ರಯತ್ನ ಮಾಡಿದರೆ, ರಾಜಕಾರಣ ಕೆಟ್ಟದ್ದರೊಂದಿಗೆ ಹೋರಾಡುತ್ತದೆ. ನಾವು ಇಂದು ಎಂಥ ದೌರ್ಭಾಗ್ಯದ ಪರಿಸ್ಥಿತಿಯಲ್ಲಿದ್ದೇವೆಂದರೆ ಕೆಟ್ಟದ್ದರ ವಿರುದ್ಧವಾಗಿ ನಡೆಸುವ ಹೋರಾಟದಲ್ಲಿ ಧರ್ಮದ ಪಾತ್ರ ಏನೇನೂ ಇಲ್ಲವಾಗಿದೆ. ಅದು ನಿರ್ಜೀವವಾಗಿದೆ. ಜೊತೆಗೆ, ರಾಜನೀತಿ ವಿಪರೀತ ಕಲಹಗಳಿಂದ ಕೂಡಿದೆ ಹಾಗೂ ನಿಷ್ಪ್ರಯೋಜಕವಾಗಿದೆ. ತುಳಸೀದಾಸರ ರಾಮಾಯಣದಲ್ಲಿ ಖಂಡಿತವಾಗಿ ಚಿನ್ನ, ವಜ್ರ ಮತ್ತು ಮಾಣಿಕ್ಯಗಳು ಬೇಕಾದಷ್ಟಿವೆ. ಆದರೆ ಅದರಲ್ಲಿ ಕಸಕಡ್ಡಿಗಳು ಮತ್ತು ಅಪ್ರಯೋಜಕವಾದ ಅಂಶಗಳು ಕೂಡ ಸಾಕಷ್ಟು ಪ್ರಮಾಣದಲ್ಲಿವೆ. ಇವೆರಡನ್ನೂ ಧರ್ಮದ ತಳಹದಿಯ ಮೇಲಿಟ್ಟು ಎಷ್ಟು ಪವಿತ್ರವೆನಿಸುವಂತೆ ಮಾಡಿಬಿಟ್ಟಿದ್ದರೆಂದರೆ ಇದರಿಂದಾಗಿ ಭಾರತದ ಜನತೆ ತನ್ನ ವಿವೇಚನಾದೃಷ್ಟಿಯನ್ನು ಕಳೆದುಕೊಂಡುಬಿಟ್ಟಿದೆ.

ನಮ್ಮ ವಿವೇಚನೆ ಆಳವಾಗಿ ಮತ್ತು ವ್ಯಾಪಕವಾಗಿ ಇಲ್ಲದಿದ್ದಲ್ಲಿ ಆನಂದವೂ ದೊರಕುವುದಿಲ್ಲ, ತಿಳಿವಳಿಕೆಯೂ ಬರುವುದಿಲ್ಲ. ತುಳಸೀ ರಾಮಾಯಣದಲ್ಲಿ ಆನಂದದ ಜೊತೆಜೊತೆಗೆ ಧರ್ಮವೂ ಸೇರಿಕೊಂಡು ಬಂದಿದೆ; ಶಾಶ್ವತವಾದ ಅರ್ಥದಲ್ಲಿ ಹಾಗೂ ಕಾಲಕ್ಕೆ ತಕ್ಕಂತಹ ಅರ್ಥದಲ್ಲಿ ಧರ್ಮ ಜೊತೆಗೂಡಿಕೊಂಡು ಬಂದಿದೆ. ತುಳಸೀದಾಸರ ಬರವಣಿಗೆಯಲ್ಲಿ ದಿನನಿತ್ಯದ ಅದೆಷ್ಟೋ ಸೂಕ್ತಿಗಳು ಮತ್ತು ಗಾದೆಗಳು ಎದುರಾಗುತ್ತವೆ. ಇವು ಮನುಷ್ಯನನ್ನು ತಿದ್ದುತ್ತವೆ, ನೇರ ಮಾಡುತ್ತವೆ. ಹಾಗೆಯೇ ತುಂಬ ಕ್ರೂರವಾದ ಇಲ್ಲವೆ ಕ್ಷಣಭಂಗುರವಾದ ಧರ್ಮಕ್ಕೆ ಅಂಟಿಕೊಂಡಿರುವ, ಶೂದ್ರನನ್ನು ಇಲ್ಲವೆ ಹೆಣ್ಣನ್ನು ನಿಂದೆ ಮಾಡುವ ಹಾಗೂ ಗೋವನ್ನು ಮತ್ತು ವಿಪ್ರನನ್ನು ಪೂಜೆ ಮಾಡಬೇಕೆಂದು ಹೇಳುವ ಪದ್ಯಗಳು ಕೂಡ ಇಲ್ಲಿ ಸಿಗುತ್ತವೆ. ಮುತ್ತನ್ನು ಆರಿಸಬೇಕಾದರೆ ಕಸಕಡ್ಡಿಗಳನ್ನು ನುಂಗಬೇಕಾಗಿಲ್ಲ, ಕೊಳಚೆಯನ್ನು ತೆಗೆದು ಶುಚಿಗೊಳಿಸುವ ಆತುರದಲ್ಲಿ ಮುತ್ತನ್ನು ತಿಪ್ಪೆಗೆಸೆಯುವ ಅಗತ್ಯವೂ ಇಲ್ಲ.

ರಾಮನು ಭಾರತದ ಉತ್ತರ–ದಕ್ಷಿಣಗಳನ್ನು ಒಂದುಗೂಡಿಸುವ ದೇವತೆಯಾಗಿದ್ದ; ಕೃಷ್ಣ ಪಶ್ಚಿಮ ಪೂರ್ವಗಳನ್ನು ಬೆಸೆಯುವ ದೇವತೆಯೆನಿಸಿದ್ದ. ರಾಮ ಮತ್ತು ಕೃಷ್ಣರಲ್ಲಿ ಬೇಕಾದಷ್ಟು ಇತರ ಗುಣಗಳೂ ಇದ್ದವು. ಆದರೂ ಈ ಒಟ್ಟುಗೂಡಿಸುವ ಗುಣಕ್ಕಿಂತ ಮಿಗಿಲಾದ ಹಿರಿಮೆಯುಳ್ಳದ್ದು ಬೇರಾವುದೂ ಇಲ್ಲ. ಹಿಂದೂ ಧರ್ಮ ಈ ಬಗೆಯಾಗಿ ಘನವಾದ ರಾಜಕಾರಣವೊಂದರೊಡನೆ ಬೆಸೆದುಕೊಂಡಿರುವ ವಿದ್ಯಮಾನವನ್ನು ನೋಡಿ ನಾನು ಇತರ ಧರ್ಮಗಳ ವಿಚಾರವಾಗಿ ಆಲೋಚನೆ ಮಾಡಿದೆ. ಅಲ್ಲೂ ಕೂಡ ಹೆಚ್ಚುಕಡಿಮೆ ಇದೇ ರೀತಿಯ ವಿದ್ಯಮಾನ ಕಂಡುಬಂದಿತು. ಧರ್ಮ ಮತ್ತು ರಾಜನೀತಿ ಇವೆರಡರ ಮೂಲ ಒಂದೇ ಎಂಬ ವಾಸ್ತವಾಂಶವನ್ನು ಮನಸ್ಸಿನಲ್ಲಿಟ್ಟುಕೊಂಡೇ ನಾವು ಇವೆರಡರ ಪರಿಧಿಗಳನ್ನು ಬೇರೆಬೇರೆಯಾಗಿಯೇ ಇಟ್ಟುಕೊಳ್ಳುವುದು ಒಳ್ಳೆಯದು. ಈ ಮೊದಲೇ ಹೇಳಿದ ಹಾಗೆ ಧರ್ಮವು ದೀರ್ಘಕಾಲದ ರಾಜಕಾರಣವಾದರೆ, ರಾಜಕಾರಣವು ಅಲ್ಪಕಾಲದ ಧರ್ಮವಾಗಿದೆ. ಒಂದೇ ವಸ್ತುವಿನ ಎರಡು ಸ್ವರೂಪಗಳ – ಒಂದು ಅಲ್ಪಕಾಲದ್ದು, ಇನ್ನೊಂದು ದೀರ್ಘಕಾಲದ್ದು – ನಡುವಣ ವ್ಯತ್ಯಾಸವನ್ನು ಪರಿಗಣಿಸಿದಾಗ ಒಂದು ಪರಿಣಾಮ ಅವಶ್ಯವಾಗಿ ಕಂಡುಬರುತ್ತದೆ. ತನ್ನ ದೀರ್ಘಸ್ವರೂಪದಲ್ಲಿ ಕಾಲ ಶಾಂತವಾಗಿರುತ್ತದೆ; ಆದರೆ ಅಲ್ಪದಲ್ಲಿ ರೌದ್ರವಾಗಿರುತ್ತದೆ. ಎರಡರ ತಾತ್ಪರ್ಯವೂ ಒಂದೇ. ದೀರ್ಘಕಾಲದ ಧರ್ಮ ಒಳ್ಳೆಯದನ್ನು ಮಾಡುತ್ತದೆ, ಒಳ್ಳೆಯದನ್ನು ಸ್ತುತಿಸುತ್ತದೆ. ಅಲ್ಪಕಾಲದ ರಾಜಕಾರಣ ಕೆಟ್ಟದ್ದರ ಜೊತೆ ಹೊಡೆದಾಡುತ್ತದೆ, ಕೆಟ್ಟದ್ದನ್ನು ನಿಂದಿಸುತ್ತದೆ. ಒಳ್ಳೆಯದರ ಸ್ತುತಿ ಹಾಗೂ ಕೆಟ್ಟದ್ದರ ನಿಂದೆ; ಒಳ್ಳೆಯದನ್ನು ಮಾಡುವುದು ಹಾಗೂ ಕೆಟ್ಟದ್ದರೊಡನೆ ಹೋರಾಡುವುದು ಇವೆರಡರ ನಡುವೆ ವ್ಯತ್ಯಾಸವಿದೆ. ಈ ವ್ಯತ್ಯಾಸ ಹೆಚ್ಚಾದಾಗ ಒಂದು ಇನ್ನೊಂದರೊಡನೆ ಸಂಪರ್ಕ ಕಳೆದುಕೊಳ್ಳುತ್ತದೆ. ಆಗ ಒಳ್ಳೆಯದನ್ನು ಸ್ತುತಿಸುವ ಕ್ರಿಯೆ ನಿರ್ಜೀವವಾಗುತ್ತದೆ. ಕೆಟ್ಟದ್ದನ್ನು ನಿಂದಿಸುವ ಕ್ರಿಯೆಯನ್ನು ಕಲಹಗಳು ಆವರಿಸಿಕೊಳ್ಳುತ್ತವೆ. ಅತ್ಯಂತ ಒಳ್ಳೆಯ ಧರ್ಮದ ಎದುರಿಗಿರುವ ಅಪಾಯವೆಂದರೆ ಅದು ಅರ್ಧಕ್ಕರ್ಧ ಮೃತಪ್ರಾಯವಾಗಬಹುದು. ಹಾಗೆಯೇ ಅತ್ಯಂತ ಚೊಕ್ಕವಾದ ರಾಜಕಾರಣ ಎದುರಿಸುವ ಅಪಾಯವೆಂದರೆ ಅದು ಕಲಹಪ್ರಾಯವಾಗಬಹುದು. ಇಲ್ಲಿ ನಾವು ಚರ್ಚೆ ಮಾಡುತ್ತಿರುವುದು

ಕೆಟ್ಟ ಧರ್ಮ ಹಾಗೂ ಕೆಟ್ಟ ರಾಜಕೀಯದ ಬಗ್ಗೆ ಅಲ್ಲ. ಧರ್ಮ ಕೆಡುತ್ತಾ ಹೋದಂತೆಲ್ಲ ಅದು ಕಲಹಗಳಿಂದೊಡಗೂಡುತ್ತಾ ಹೋಗುತ್ತದೆ.

ಅಂತೆಯೇ ರಾಜಕಾರಣ ಕೆಡುತ್ತಾ ಹೋದಂತೆಲ್ಲ ಅದು ಶವವಾಗಿ ಸ್ಮಶಾನಶಾಂತಿಯನ್ನು ಕಂಡುಕೊಳ್ಳುತ್ತಾ ಹೋಗುತ್ತದೆ.

ಧರ್ಮ ಮತ್ತು ರಾಜಕಾರಣ ಇವೆರಡೂ ವಿವೇಕರಹಿತವಾಗಿ ಜೊತೆಗೂಡಿದಾಗ ಎರಡೂ ಭ್ರಷ್ಟಗೊಳ್ಳುತ್ತವೆ. ಯಾವುದೇ ಒಂದು ಧರ್ಮ ಯಾವುದೇ ಒಂದು ರಾಜಕಾರಣದೊಡನೆ ಎಂದೂ ಜೊತೆಗೂಡಬಾರದು. ಇದರಿಂದಾಗಿಯೇ ಸಾಂಪ್ರದಾಯಿಕ ಮತಾಂಧತೆ ಹುಟ್ಟಿಕೊಳ್ಳುತ್ತದೆ. ಧರ್ಮ ಮತ್ತು ರಾಜಕಾರಣ ಇವೆರಡನ್ನೂ ಬೇರೆ ಬೇರೆಯಾಗಿಡುವ ಮುಖ್ಯ ಉದ್ದೇಶವೆಂದರೆ ಸಾಂಪ್ರದಾಯಿಕ ಸೇರ್ಪಡೆಯಿಂದ ಹಾಗೂ ಮತಾಂಧತೆಯಿಂದ ನಾವು ಬಚಾವಾಗಬೇಕು ಎನ್ನುವುದು. ಇನ್ನೊಂದು ಉದ್ದೇಶವೆಂದರೆ ರಾಜಕಾರಣದ ದಂಡನೆ ಮತ್ತು ಧಾರ್ಮಿಕ ವ್ಯವಸ್ಥೆಗಳನ್ನೂ ಬೇರೆ ಬೇರೆಯಾಗಿಡಬೇಕು. ಇಲ್ಲದಿದ್ದರೆ ಕಂದಾಚಾರಗಳು ಹೆಚ್ಚಾಗಬಹುದು, ಅತ್ಯಾಚಾರ ಹೆಮ್ಮರವಾಗಬಹುದು. ಇಷ್ಟೆಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡೂ, ಧರ್ಮ ಮತ್ತು ರಾಜಕಾರಣ ಒಂದರೊಡನೊಂದು ಕೊಂಡಿ ಕಳಚಿಕೊಳ್ಳಲು ಬಿಡಬಾರದು. ಅಗತ್ಯವಾದ ದೂರವನ್ನು ಉಳಿಸಿಕೊಂಡೇ ಅವು ಒಟ್ಟಿಗೆ ಮುಂದುವರಿಯಬೇಕು. ಇಂದು ರಾಜಕಾರಣದ ಕ್ಷೇತ್ರದಲ್ಲಿ ಧರ್ಮ ತಿಳಿದೋ ತಿಳಿಯದೆಯೋ ಕಂದಾಚಾರ, ಪ್ರತಿಕ್ರಿಯೆ, ಗುಲಾಮಗಿರಿ ಹಾಗೂ ಅರೆಮೃತ್ಯುಗಳಿಗೆ ಒತ್ತಾಸೆ ನೀಡಬಹುದು. ನನಗೆ ಹಾಗೂ ನನ್ನಂತೆ ಇರುವ ಜನರ ಪಾಲಿಗೆ ಇರುವ ಹಕ್ಕೆಂದರೆ ಧರ್ಮದ ಆ ಭಾಗವನ್ನು ಶುಚಿಗೊಳಿಸಬೇಕು, ಆದು ಹೇಗಾದರೂ ಶುಚಿಯಾಗುವಂತೆ ಮಾಡಬೇಕು. ಅದರೊಟ್ಟಿಗೆ ಧರ್ಮ ಕೂಡ ಒಂದು ವಿಚಾರವನ್ನು ಗಮನಿಸುತ್ತಿರಬಹುದು. ಆ ವಿಚಾರವನ್ನು ನನ್ನಂತಹ ಜನ ಖುದ್ದಾಗಿ ನೋಡುತ್ತಿದ್ದಾರೆ. ಅದೇನೆಂದರೆ ರಾಜಕಾರಣ ಕಲಹಪ್ರಾಯವಾಗುತ್ತಿದೆ, ಕ್ಷಣಭಂಗುರವಾಗುತ್ತಿದೆ. ಮನುಷ್ಯನ ಗಮನವನ್ನು ಗಟ್ಟಿಯಾದ ಹಾಗೂ ದೃಢವಿಚಾರಗಳ ಕಡೆ ಹೆಚ್ಚುಹೆಚ್ಚಾಗಿ ಸೆಳೆಯಬೇಕಾದುದು ಧರ್ಮಕ್ಕೆ ಒದಗುವ ಜನರ ಹಕ್ಕು.

**(ಆಕರ: ರಾಮಮನೋಹರ ಲೋಹಿಯಾ ಚಿಂತನೆ, ಸಂಪಾದನೆ: ನಟರಾಜ್ ಹುಳಿಯಾರ್, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮)**

# IV. ಬಹಿರಂಗ

೧೨ನೇ ಶತಮಾನದ ಶರಣರು ಮಾನವ ಜೀವನದ ಮೂಲ ಸೂತ್ರವೆಂದರೆ ನಡೆ ಮತ್ತು ನುಡಿ ಒಂದಾಗಿರಬೇಕು ಎಂದಿದ್ದಾರೆ. ಅವರ ಪ್ರಕಾರ ಮಾತು ಹಾಗೂ ಕೃತಿ ಬೇರೆ ಬೇರೆಯಲ್ಲ; ಅವು ಜೀವನದ ಕಷ್ಟ ಸುಖ ಎಂತಹದ್ದೇ ಸಂದರ್ಭಗಳಲ್ಲಿಯೂ ಒಂದೇ ಆಗಿರಬೇಕು ಎಂಬುದು ಅವರ ಆದರ್ಶವಾಗಿತ್ತು. ಆ ಆದರ್ಶವು ಬರಿ ಮಾತಿನಲ್ಲಷ್ಟೇ ವ್ಯಕ್ತವಾಗದೇ ಮಾಡುವ ಎಲ್ಲ ಕೆಲಸ ಕಾರ್ಯಗಳಲ್ಲಿಯು ಬಿಂಬಿತವಾಗಬೇಕು ಎಂಬುದಾಗಿತ್ತು. ಅದಕ್ಕೆ ತಕ್ಕಂತೆಯೇ ಅವರು ಒಳಗೊಂದು ಹಾಗೂ ಹೊರಗೊಂದು ರೀತಿಯಲ್ಲಿ ತೋರಿಸಿಕೊಳ್ಳುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಅಂತರಂಗ ಮತ್ತು ಬಹಿರಂಗ–ಇವು ಎರಡೂ ಏಕತ್ರಗೊಳ್ಳಬೇಕು ಎನ್ನುವುದೇ ಅವರ ಪ್ರಮುಖ ಆಶಯವಾಗಿತ್ತು.

ಪ್ರತಿಯೊಬ್ಬರಿಗೂ ತಮ್ಮದೇ ಆದ ಒಳಗಿನ ದನಿ ಇರುವಂತೆಯೇ ಹೊರಗಿನ ದನಿಯು ಇರುತ್ತದೆ. ನಾವು ನಮ್ಮೊಳಗಿನ ದನಿಗೆ ಕಿವಿಯಾಗುತ್ತಲೇ ಇರುತ್ತೇವೆ. ಹಾಗೆಯೇ ಹೊರಗಿನ ದನಿಯನ್ನು ಕೂಡ ನಮ್ಮೊಳಗೆ ತಂದುಕೊಳ್ಳಲು ಪ್ರಯತ್ನಿಸುತ್ತಲೇ ಇರುತ್ತೇವೆ. ಈ ಹಿನ್ನೆಲೆಯಲ್ಲಿ ನಾವು ಯಾವಾಗಲೂ ಅಂತರ್‌ಮುಖಿಗಳಾಗಿಯೇ ಇರುವುದಿಲ್ಲ; ಆಗಾಗ ಬಹೀರ್‌ಮುಖಿಗಳಾಗಿಯೂ ಇರುತ್ತೇವೆ. ಆದ್ದರಿಂದ ನಾವು ಅಂತರಂಗ ಮತ್ತು ಬಹಿರಂಗ ಬೇರೆ ಬೇರೆ ಎಂದು ಬೇರ್ಪಡಿಸುವುದು ಕಷ್ಟವೇ ಸರಿ. ಎಷ್ಟೋ ಸಲ ನಾವು ಏಕಕಾಲಕ್ಕೆ ಈ ಎರಡೂ ಕ್ರಿಯೆಗಳಿಗೆ ಒಳಗಾಗುತ್ತಲೇ ಇರುತ್ತೇವೆ. ಅಂತರಂಗದ ಪ್ರೇರಣೆಯಿಂದ ಬಾಹ್ಯ ಕ್ರಿಯೆ ಚಾಲನೆ ಸಿಗಬಹುದು. ಹಾಗೆಯೇ ಬಹಿರಂಗದ ಯಾವುದೋ ಒಂದು ಪ್ರೇರಣೆಯು ಅಂತರಂಗದ ಅವಲೋಕನಕ್ಕೆ ದಾರಿ ಮಾಡಿ ಕೊಡಬಹುದು.

ಯಾವುದೇ ಒಂದು ಪ್ರಯಾಣವು ಅಂತರಂಗದ ಸ್ಫುರಣೆಯಿಂದ ಆರಂಭವಾಗಬಹುದು. ಅದು ದೀರ್ಘ ಪ್ರಯಾಣಕ್ಕೆ ಸಿದ್ಧಗೊಳ್ಳುವ ಹಾಗೆ ಮಾಡಬಹುದು. ಆ ಪ್ರಯಾಣವು ಪುನಃ ಅಂತರಂಗದ ಒಳಗೆ ಇಳಿದು ಚಿಂತನ ಮಂಥನಗಳಿಗೆ ತುಯ್ಯುವ ಹಾಗೆ ಮಾಡಬಲ್ಲದು. ಆದ್ದರಿಂದ ಸುತ್ತಾಟ, ತಿರುಗಾಟ, ಪ್ರವಾಸಗಳು ನಮ್ಮನ್ನು ನಾವು ನೋಡಿಕೊಳ್ಳುವ ಪ್ರಮಾಣಗಳಾಗುತ್ತವೆ. ಅಷ್ಟೇ ಅಲ್ಲದೆ, ಇಂತಹ ತಿರುಗಾಟಗಳು ಸಮಾಜ, ಸಾಹಿತ್ಯ, ಕಲೆ, ರಾಜಕೀಯ ವಿದ್ಯಮಾನಗಳನ್ನು ಹೊಸ ಬೆಳಕಿನಲ್ಲಿ ನೋಡುವಂತೆ ಮಾಡುತ್ತವೆ. ಮರೆವಿಗೆ ಸಂದ ಎಷ್ಟೋ ಸಂಗತಿಗಳನ್ನು ಮರು ಪರಿಶೀಲನೆ ಮಾಡಲು ತೋರು ದೀಪಗಳಾಗುತ್ತವೆ. ಈ ಹಿನ್ನೆಲೆಯಲ್ಲಿ ಇಲ್ಲಿಯ ಪಾಠಗಳನ್ನು ಕೇವಲ ಪ್ರವಾಸ ಕಥನಗಳೆಂದು ನೋಡದೆ ಅವು ಆಕಾರ ಪಡೆದ ಮನೋಭೂಮಿಕೆಯನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯವಾಗಿರುತ್ತದೆ. ಅವು ಕಾಲ ಮತ್ತು ದೇಶಗಳ ಗಡಿಯನ್ನು ಮೀರಿ ಸ್ಪಂದಿಸುವ ಅವುಗಳ ಆಶಯಗಳನ್ನು ಬೇರೆ ಬೇರೆ ನೆಲೆಯಲ್ಲಿ ನೋಡುವುದು ಅಗತ್ಯವಾಗಿದೆ. ಅವುಗಳ ಅಂತರಾಳದಲ್ಲಿರುವ ಸಮಕಾಲೀನ ಸಂಗತಿಗಳನ್ನು ಗುರುತಿಸಿ ವಿಶ್ಲೇಷಿಸಬೇಕಾಗುತ್ತದೆ.

# ೧. ಸನ್ನತಿಯಿಂದ ಬೋಧಗಯೆಗೆ

**– ಡಾ. ರಹಮತ್ ತರೀಕೆರೆ**

೧

ಕೆಲವು ವರ್ಷಗಳ ಹಿಂದೆ ಕರ್ನಾಟಕದ ಬೌದ್ಧತಾಣಗಳನ್ನು ನೋಡುತ್ತ, ಭೀಮಾ ಹೊಳೆದಡದ ಸನ್ನತಿಗೆ ಹೋದೆ. ಬೌದ್ಧಧರ್ಮ ಹುಟ್ಟಿಬೆಳೆದಿದ್ದು ಗಂಗಾನದಿಯ ಬಯಲಿನಲ್ಲಿ. ಆದರೆ ದಕ್ಷಿಣ ಭಾರತದಲ್ಲಿ ಅದರ ಹಬ್ಬಿಕೆಯಿತ್ತು. ಕರ್ನಾಟಕದಲ್ಲಿ ಅಶೋಕನ ಶಾಸನಗಳು ಕೊರೆಯಲ್ಪಟ್ಟವು; ಸಾತವಾಹನರ ಕಾಲದಲ್ಲಿ ಚೈತ್ಯಾಲಯಗಳು ನಿರ್ಮಾಣವಾದವು. ಆಂಧ್ರದ ಅಮರಾವತಿ, ನಾಗಾರ್ಜುನಕೊಂಡ ಹಾಗೂ ಸನ್ನತಿಯಲ್ಲಿರುವವು ಆ ಕಾಲದ ಚೈತ್ಯಾಲಯಗಳೇ. ಯಾಕೊ ಏನೊ ಸನ್ನತಿ, ಹಂಪಿಯಂತೆ ಅಥವಾ ನಾಗಾರ್ಜುನ ಕೊಂಡದಂತೆ ಖ್ಯಾತವಾಗಲಿಲ್ಲ. ಪ್ರವಾಸಿಗರಿರಲಿ, ಕರ್ನಾಟಕದ ಬಹಳಷ್ಟು ಸಂಶೋಧಕರೇ ಅದನ್ನು ನೋಡಹೋಗಿಲ್ಲ. ಆದರೆ ಸನ್ನತಿಯೊಂದು ಅಪೂರ್ವ ಶಿಲ್ಪತಾಣ. ಬುದ್ಧನು ಜ್ಞಾನೋದಯ ಪಡೆದ ಬೋಧಿವೃಕ್ಷದ ಚೆಲುವಾದ ಶಿಲ್ಪವು ಅಲ್ಲಿದ್ದು, ಮನಸ್ಸನ್ನು ಸೆಳೆಯುತ್ತದೆ. ಶಿಲ್ಪಿಯು ಬೋಧಿಯ ಎಲೆಗಳನ್ನು ಅದರ ನರಗಳ ಸಮೇತ ಎಷ್ಟು ನಾಜೂಕಾಗಿ ಅರಳಿಸಿರುವನು. ಅದನ್ನು ನೋಡುತ್ತ ನನ್ನೊಳಗೆ ಬೋಧಿವೃಕ್ಷವಿರುವ ಬೋಧಗಯೆಗೆ ಹೋಗಬೇಕೆಂದು ತುಡಿತ ಹುಟ್ಟಿತು.

ಒಮ್ಮೆ ಅವಕಾಶ ಮಾಡಿಕೊಂಡು ಬಿಹಾರಕ್ಕೆ ಹೋದೆ. ಬಿಹಾರದ ಹೆಸರು 'ವಿಹಾರ'ದಿಂದ ಬಂದುದು. ಅಶೋಕನ ಮಗಧ ರಾಜ್ಯದ ರಾಜಧಾನಿಯಾಗಿದ್ದ ಪಾಟಲಿಪುತ್ರ ಈಗಿನ ಪಟ್ನಾ ಆಗಿದೆ. ಪಾಟಲಿಪುತ್ರಕ್ಕೂ ಕರ್ನಾಟಕಕ್ಕೂ ಪ್ರಾಚೀನ ನಂಟು. ಅಶೋಕನ ಅಜ್ಜನಾದ ಚಂದ್ರಗುಪ್ತ ಮೌರ್ಯನು ಕ್ರಿ.ಪೂ. ೩ನೇ ಶತಮಾನದಲ್ಲಿ, ಪಾಟಲಿಪುತ್ರದಿಂದ ಭದ್ರಬಾಹು ಮುನಿಗಳ ಜತೆಗೂಡಿ ಶ್ರವಣಬೆಳಗೊಳಕ್ಕೆ ಬಂದವನು, ಇಲ್ಲಿರುವ ಚಿಕ್ಕಬೆಟ್ಟದ ಮೇಲೆ ಸಲ್ಲೇಖನ ವ್ರತ ಹಿಡಿದು ದೇಹತ್ಯಾಗ ಮಾಡಿದನು. ಅವನು ದೇಹಬಿಟ್ಟ ಬೆಟ್ಟವೇ ಚಂದ್ರಗಿರಿ. ಆತನ ಹೆಸರಲ್ಲೊಂದು ಪುಟ್ಟ ಬಸದಿಯೂ ಅಲ್ಲಿದೆ. ಪೂರ್ಣಚಂದ್ರನು ಬುದ್ಧನ ಹುಟ್ಟುಸಾವಿನ ಜತೆ ಸಂಬಂಧ ಪಡೆದಿರುವಂತೆ, ಜೈನರಲ್ಲೂ ಪ್ರಮುಖ ಸಂಕೇತವಾಗಿದ್ದಾನೆ. ಆಗಸದ ಚಂದ್ರ ಸೂರ್ಯನ ಬೆಳಕನ್ನು ಭೂಮಿಗೆ ಕೊಡುವಂತೆ, ಸಂತರು ಎಲ್ಲೆಲ್ಲಿಂದಲೊ ಪಡೆದ ಜ್ಞಾನವನ್ನು ಇನ್ನೊಂದೆಡೆ ಹರಡುತ್ತಾರೆ. ಅದರಲ್ಲೂ ಸವಣರು ಸೂಫಿಗಳು ನಾಥರು ಶರಣರು ಎಲ್ಲೊ ಹುಟ್ಟಿ ಬೆಳೆದು ಇನ್ನೆಲ್ಲೊ ಮರಣಿಸಿ ಸೋಜಿಗ ಹುಟ್ಟಿಸುತ್ತಾರೆ. ಬಸವಕಲ್ಯಾಣಕ್ಕೆ ಬಂದ ಮೋಳಿಗೆಯ ಮಾರಯ್ಯ ಕಾಶ್ಮೀರದವನಂತೆ; ತೆಲುಗಿನ 'ಬಸವಪುರಾಣಮು' ಬರೆದ ಪಾಲ್ಕುರಿಕೆ ಸೋಮನಾಥ, ನಲ್ಗೊಂಡ ಜಿಲ್ಲೆಯವನಾಗಿದ್ದು ಮಾಗಡಿ ಸಮೀಪದ ಕಲ್ಯಕ್ಕೆ ಬಂದು ತೀರಿದನು; ದೆಹಲಿಯಲ್ಲಿ ಹುಟ್ಟಿಬೆಳೆದ ಬಂದೇನವಾಜ ಗೇಸುದರಾಜನು ಗುಲಬರ್ಗೆಯಲ್ಲಿ ಸಮಾಧಿಯಾದನು; ನೇಪಾಳದ ಲುಂಬಿನಿಯಲ್ಲಿ ಹುಟ್ಟಿದ ಬುದ್ಧ ಕೊನೆಯ ದಿನಗಳನ್ನು ಗಯೆಯಲ್ಲಿ ಕಳೆದು ಕುಶೀನಗರದಲ್ಲಿ ತೀರಿಕೊಂಡನು. ಬನವಾಸಿ ನಾಡಿನ ಅಲ್ಲಮ, ದೂರದ ಶ್ರೀಶೈಲದ ಕದಳಿಯ ಗುಹೆಗೆ ಹೋಗಿ ಜೀವತೆತ್ತನು. 'ಎತ್ತಣ ಮಾಮರ ಎತ್ತಣ ಕೋಗಿಲೆ ಎತ್ತಣಿಂದೆತ್ತ ಸಂಬಂಧವಯ್ಯಾ' ಎಂಬ ಅಲ್ಲಮನ ಮಾತು ಮಾರ್ಮಿಕ.

ಹೊಳೆಗಳ ಸ್ವಭಾವವೂ ಹೀಗೇ. ಎಲ್ಲೊ ಹುಟ್ಟಿ ಇನ್ನೆಲ್ಲೆಲ್ಲೊ ಹರಿದು ಮತ್ತೆಲ್ಲೊ ಇರುವ ದೂರದ ಕಡಲಲ್ಲಿ ಸಂಗಮಿಸುತ್ತವೆ. ಅವು ಹುಟ್ಟುವ ಪರ್ವತ ಹಾಗೂ ಕೂಡುವ ಕಡಲ ಎರಡು ಬಿಂದುಗಳ ನಡುವಣ ಬಯಲಲ್ಲಿ ಇರುವುದು ಚಲನೆಯ ತತ್ವ. ಹರಿವ ನದಿಗೆ ಮೈಯೆಲ್ಲ ಕಾಲೆಂದು ಅಲ್ಲಮ ರೂಪಕದಲ್ಲಿ ಹೇಳುತ್ತಾನಷ್ಟೆ. ಬುದ್ಧನ ಕಾಲಲ್ಲಿ ಚಕ್ರದ ಗುರುತಿತ್ತು. ಅವನು ಸ್ಥಾಪಿಸಿದ ಧಮ್ಮದಲ್ಲೂ ಚಕ್ರವಿದೆ. ಚಕ್ರವು ವಿಷ್ಣುವಿನ ಕೈಯಲ್ಲಿ ಶತ್ರುಸಂಹಾರದ ಆಯುಧವಾದರೆ, ಬುದ್ಧನಲ್ಲಿ ಚಲನೆಯ ಸಂಕೇತ. ಬುದ್ಧನಿಗೆ ಸಂಬಂಧಪಟ್ಟ ಬೋಧಗಯೆ, ಪಾಟಲಿಪುತ್ರ, ಸಾರನಾಥ, ಕುಶೀನಗರ ಮುಂತಾದವು ಹೊಳೆಗಳ ಆಸುಪಾಸಿನಲ್ಲಿರುವುದು ಗಮನಾರ್ಹ. ಇದರಂತೆ ಸನ್ನತಿ ಭೀಮೆಯ ದಡದಲ್ಲೂ, ಅಮರಾವತಿ ನಾಗಾರ್ಜುನಕೊಂಡಗಳು ಕೃಷ್ಣೆಯ ದಡದಲ್ಲೂ ಇವೆ.

೨

ನಸುಕಿಗೇ ಹೊರಡುವ ಪಟ್ನಾ-ಗಯಾ ಪ್ಯಾಸೆಂಜರಿನಲ್ಲಿ ಬೋಧಗಯೆಗೆ ಯಾನ ಶುರುಮಾಡಿದೆ. ಪಟ್ನಾ ರೈಲು ನಿಲ್ದಾಣವು, ಲೋಕದ ದಶದಿಕ್ಕುಗಳಿಗೆ ದುಡಿವ ಜನರನ್ನು ಸರಬರಾಜು ಮಾಡುವ ರವಾನೆ ಕೇಂದ್ರದಂತಿದೆ. ಬಿಹಾರದ ಹಳ್ಳಿಗಾಡುಗಳಿಂದ ಬಂದ ಶ್ರಮಿಕರು ಭಾರತದ ನಾನಾ ಸ್ಥಳಗಳಿಗೆ ಇಲ್ಲಿಂದ ಹೋಗುವರು. ಪಟ್ನಾದಿಂದ ಗಯೆಗೆ ೧೦೦ ಕಿಮೀ ಅಂತರ; ನಾಲ್ಕು ತಾಸಿನ ಪಯಣ; ೧೨ ರೂಪಾಯಿ ಹಾಸಲು. ಬೇಕೆಂದೇ ಪಟ್ನಾ-ರಾಂಚಿ ಇಂಟರ್‌ಸಿಟಿ ಟ್ರೈನನ್ನು

ಬಿಟ್ಟುಕೊಟ್ಟು, ಈ ಪ್ಯಾಸೆಂಜರನ್ನು ಹಿಡಿದಿದ್ದೆ. ಇದು ಸಣ್ಣಪುಟ್ಟ ನಿಲ್ದಾಣಗಳಲ್ಲಿ ನಿಲ್ಲುತ್ತ, ಬುದ್ಧನು ಭಿಕ್ಷೆಯನ್ನು ಸರ್ವರಿಂದಲೂ ಸ್ವೀಕರಿಸುತ್ತ ಚರಿಸುತ್ತಿದ್ದಂತೆ, ಶಾಲಾ ಮಕ್ಕಳನ್ನೂ ಕಾಯಿಪಲ್ಲೆ ಮಾರುವವವರನ್ನೂ ಕಛೇರಿಗೆ ಹೋಗುವವರನ್ನೂ ಅನಾಥ ಭಿಕ್ಷುಕರನ್ನೂ ರೈತರನ್ನೂ ತುಂಬಿಕೊಂಡು, ಭಾರತದ ಬೀದಿಯೆ ನಡೆದಂತೆ ಅಥವಾ ಬಿಹಾರದ ಬಡತನವೇ ಮೆರವಣಿಗೆ ಹೊರಟಂತೆ, ನಿಧಾನವಾಗಿ ಚಲಿಸುತ್ತದೆ. ಟ್ರೈನಿನಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಶೇಂಗಾ ಚನಾ ತಿಲ್ಲೂಟ್ ಚಹಾ ಮುಂತಾದ ತಿಂಡಿತಿನಿಸು ಮಾರುವವರು.

ನಾನು ಹೋಗಿದ್ದು ಮಾಗಿಯ ಕಾಲ. ರೈಲುರಸ್ತೆಯ ಎರಡೂ ಬದಿ ಮಾಗಿ ಬಾಗಿದ ಬತ್ತದ ಗದ್ದೆಗಳಿದ್ದವು. ಬೋಧಗಯೆ ಬುದ್ಧನ ಬಾಳಿನಲ್ಲಿ ಮಹತ್ವದ ಜಾಗ. ನಾವು ಶಾಲೆಯಲ್ಲಿದ್ದಾಗ "ಬೋಧಿವೃಕ್ಷದ ಕೆಳಗೆ ಕುಳಿತಿರುವಾಗ ಸಿದ್ಧಾರ್ಥನಿಗೆ ಜ್ಞಾನೋದಯವಾಯಿತು. ಬಳಿಕ ಅವನು ಬುದ್ಧನಾದನು" ಎಂದು ಬಾಯಿಪಾಠ ಮಾಡಿದ್ದುಂಟು. ನಮಗೆ 'ಜ್ಞಾನೋದಯ' ಎಂದರೆ, ಸ್ವಿಚ್ ಹಾಕಿದರೆ ಕತ್ತಲೆ ಮಾಯವಾಗಿ ಬೆಳಕು ಧುತ್ತನೆ ಉದ್ಭವಿಸುವಂತೆ ಎಂದೇ ಅರ್ಥ. ಆದರೆ 'ಜ್ಞಾನೋದಯ' ಎಂದು ಆಡಂಬರದ ಭಾಷೆಯಲ್ಲಿ ಕರೆಯಲಾಗುವ ಈ ಮಾಗುವ ಘಟ್ಟವನ್ನು ತಲುಪುವ ಮುನ್ನ ಬುದ್ಧ ಮಾಡಿದ ತಿರುಗಾಟ ಪ್ರಯೋಗ ಹೋರಾಟ ಸೆಣಸಾಟ ಎಷ್ಟು ಅಪಾರ? ಬೆಣ್ಣೆ ಮೊಸರಲ್ಲಿ ಮಂತುವಿಟ್ಟು ಕಡೆದೊಡನೆ ಬರುವುದಿಲ್ಲವಷ್ಟೆ. ಬೋಧಗಯೆಯ ಹಾದಿಯಲ್ಲಿ ಬರ್ಬರ್ ಎಂಬ ಸಣ್ಣ ನಿಲ್ದಾಣ ಸಿಗುತ್ತದೆ. ಅಲ್ಲಿಂದ ನೋಡಿದರೆ, ದೂರದಲ್ಲಿ ಕಲ್ಲುಬೆಟ್ಟದ ಸಾಲೊಂದು ಕಾಣುತ್ತದೆ. ಗಂಗಾಬಯಲಿನ ಉತ್ತರಪ್ರದೇಶ ಬಿಹಾರ ಬಂಗಾಳಗಳಲ್ಲಿ ಬೆಟ್ಟಗಳೇ ಇಲ್ಲ. ಚಾಪೆ ಹಾಸಿದಂತಹ ಬಟಾಬಯಲಲ್ಲಿ ಅಪರೂಪದ ವಸ್ತುವಿನಂತೆ ಎದ್ದುಕಾಣುವ ಈ ಬೆಟ್ಟಗಳ ಗುಹೆಗಳಲ್ಲಿ ಬುದ್ಧ ದೇಹದಂಡನೆಯ ಪ್ರಯೋಗ ಮಾಡಿದನು; ಗುಹೆಯಿಂದ ಹೊರಬಂದು, ದೇಹದಂಡನೆ ಮಾಡುವುದರಿಂದ ಹೊಸ ತಿಳಿವು ಸಾಧ್ಯವಿಲ್ಲ ಎಂದು ಸಾರಿದನು. ಅಲ್ಲಮಪ್ರಭು ಬಯಲು ನಾಡಿನಲ್ಲಿ ತಿರುಗಾಡಿ ಕಡೆಗೆ ಕದಳಿಯ ಗುಹೆಯನ್ನು ಹೊಕ್ಕವನಾದರೆ, ಬುದ್ಧ, ಗುಹೆಯಲ್ಲಿ ದೇಹದಂಡನೆಯ ಪ್ರಯೋಗ ಮಾಡಿ ಮರಳಿ ಬಯಲಿಗೆ ಬಂದವನು. ಬುದ್ಧನ ದರ್ಶನದಿಂದ ಪ್ರಭಾವಿತನಾಗಿದ್ದ ಕನ್ನಡದ ಶರಣ ಅಲ್ಲಮಪ್ರಭುವಿನ ಪರಿಭಾಷೆಯಲ್ಲಿ ಬಯಲೆಂದರೆ, ಬುದ್ಧ ಹೇಳಿದ ಶೂನ್ಯಸ್ಥಿತಿಯೇ! ಮಹಾ ತಿರುಗಾಡಿಯಾಗಿದ್ದ ಅಲ್ಲಮನು ಬೋಧಗಯೆಗೆ ಬಂದಿದ್ದನೊ ಇಲ್ಲವೊ ತಿಳಿಯದು. ಆದರೆ ಆತ ಕರ್ನಾಟಕದ ಬುದ್ಧನೆಂಬುದು ಮಾತ್ರ ದಿಟ.

೩

ಗಯಾದ ನಿಲ್ದಾಣ ಬಂತು. ಇಳಿದವನೇ ಪ್ರಯಾಣಿಕರನ್ನು ಎಳೆದುಕೊಂಡು ಹೋಗಿ ಕೂರಿಸಿಕೊಳ್ಳುವ ರಿಕ್ಷಾದಲ್ಲಿ ಕೂತೆ. ೧೨ ಕಿಮೀ ಸಾಗಿದರೆ ಬೋಧಗಯೆ. ಪಟ್ನಾ ಗಂಗಾನದಿಯ ದಡದ ನಗರವಾದರೆ, ಬೋಧಗಯೆ ನಿರಂಜನಾ ಎಂಬ ಪುಟ್ಟ ಹೊಳೆಯ ತಟದಲ್ಲಿರುವ ಊರು. ಪಟ್ನಾದಲ್ಲಿ ಐದಾರು ಮೈಲಿ ಅಗಲಕ್ಕೆ ಹರಿವ ವಿಶಾಲ ಗಂಗೆಯ ವೈಭವವಿದ್ದರೆ, ಇಲ್ಲಿ ಫರ್ಲಾಂಗು ಅಗಲದಲ್ಲಿ ನೆಲಮಟ್ಟಕ್ಕೆ ತುಸುವೇ ಕೆಳಗಿರುವ ನಿರಂಜನಾ, ಮರಳ ಹಾಸಿನ ಮೇಲೆ ಬುದ್ಧನ ಬೆಳ್ಳನೆಯ ಅಂಗವಸ್ತ್ರ ಹರಡಿದಂತೆ ತೆಳ್ಳಗೆ ಹರಿಯುತ್ತಿತ್ತು. ದಡದಲ್ಲಿ ಬೂದಿಬಿಳುಪಿನ ಉಸುಕುನೆಲದ ಬಯಲು; ದಡದ ಬದಿ ಹೊಲಗಳಲ್ಲಿ ಭಂಡಾರ ಚೆಲ್ಲಿದಂತೆ ಹೂಬಿಟ್ಟ ಸಾಸಿವೆಪೈರು. ತನಗೂ ತನ್ನ ಅನುಯಾಯಿಗಳಿಗೂ ಸುಭಿಕ್ಷೆ ಸಿಗುತ್ತದೆಯೆಂದು ಹೊಳೆತಟದ ಊರುಗಳನ್ನು ಬುದ್ಧ ಆರಿಸಿಕೊಂಡಿರಬೇಕು ಎಂದು ವಿಚಾರ ಮಾಡುತ್ತಿರುವಷ್ಟರಲ್ಲೇ, ಬೋಧಗಯೆ ಬಂತು. ಪ್ರಾಚೀನ ಕಾಲದಲ್ಲಿ ಉರುವೇಲಾ ಎಂದು ಹೆಸರಾಗಿದ್ದ ಇದು, ಬುದ್ಧನ ಕಾರಣದಿಂದ ಈ ಹೆಸರನ್ನು ಪಡೆದಿದೆ.

ನೇರ ಚೈತ್ಯಾಲಯಕ್ಕೆ ಹೋದೆ. ದೊಡ್ಡದೊಂದು ತಗ್ಗಿನಲ್ಲಿ ಕಲ್ಲಿನಿಂದ ಕೆತ್ತಿದ ಗೋವಿನ ಜೋಳದ ತೆನೆಯಂತೆ ಅದು ಆಗಸಕ್ಕೆ ನಿಮಿರಿನಿಂತಿತ್ತು. ಅದನ್ನು ಇಡಿಯಾಗಿ ಹಿಂಬದಿಯಿಂದ ತಬ್ಬಿಕೊಳ್ಳುತ್ತಿರುವಂತೆ ಬೋಧಿಮರವು ಬೆಳೆದಿತ್ತು. ಶಿಖರದ ತುಂಬ ಸ್ತೂಪಾಕಾರದ ಕಿಂಡಿಗಳಲ್ಲಿ ಭೂಸ್ಪರ್ಶ ಮುದ್ರೆಯಲ್ಲಿ ಕುಳಿತಿರುವ ಬುದ್ಧ ಮೂರ್ತಿಗಳು; ಬೋಧಿಮರದ ಹಣ್ಣುಗಳನ್ನು ತಿಂದು ಈ ಮೂರ್ತಿಗಳ ತಲೆಗಳ ಮೇಲೆ ಕುಳಿತು ವಿರಮಿಸುತ್ತ ಹಿಕ್ಕೆ ಹಾಕುತ್ತಿರುವ ಪಾರಿವಾಳಗಳು. ನಮಗೆ ಬುದ್ಧನ ಪ್ರತಿಮೆ. ಅವಕ್ಕೊ ಅದು ಗೊತ್ತು ಕೂರುವ ಗೂಡು. ಅಹಿಂಸೆಯನ್ನು ಹೇಳಿದ ಬುದ್ಧಮೂರ್ತಿಯು ಶಾಂತಿಯ ಪ್ರತೀಕವಾದ ಪಾರಿವಾಳಗಳ ಹಕ್ಕೆಯಾಗಿರುವುದು ಅರ್ಥಪೂರ್ಣವೆನಿಸಿತು. ಚೈತ್ಯಾಲಯದ ಸುತ್ತ ನೂರಾರು ಸ್ತೂಪ ಮತ್ತು ಶಿಲಾ ಸ್ಮಾರಕಗಳು. ಬೋಧಗಯೆಯಲ್ಲಿ ಧಮ್ಮವನ್ನು ನಿತ್ಯದಲ್ಲಿ ಬದುಕುವ ಜೀವಂತ ಸಮಾಜಗಳು ಹೆಚ್ಚು ಕಾಣಿಸಲಿಲ್ಲ. ಬೃಹದಾಕಾರದ ಚೈತ್ಯಾಲಯವನ್ನು ಅಥವಾ ಗೊಮ್ಮಟನನ್ನು ಕಂಡಾಗ ಆಗುವಂತೆ 'ಯಾರೊ ತೆಕ್ಕನೆ ಬಾಯ್ಮುಚ್ಚಿ ಹಿಡಿದ' ಭವ್ಯಾನುಭವ ಆಗಲಿಲ್ಲ. ಚೈತ್ಯಾಲಯದ ಗರ್ಭದೊಳಗೆ ವಜ್ರದ ಹರಳುಗಳಿಂದ ಸಿಂಗಾರಗೊಂಡಿರುವ ಹೊನ್ನಬಣ್ಣದಿಂದ

ಲೇಪಿತವಾದ ತಥಾಗತನ ಮೂರ್ತಿಯಿತ್ತು. ಅರೆನಿಮೀಲಿತ ನೇತ್ರನಾಗಿ ಧ್ಯಾನಮುದ್ರೆಯಲ್ಲಿ ಕುಳಿತಿರುವ ಈ ಮೂರ್ತಿ, ಅಜಂತಾದಲ್ಲಿರುವ ಮೂರ್ತಿಗಳಂತೆ ಯಾಕೊ ಮನಸ್ಸನ್ನು ತುಂಬಿಕೊಳ್ಳಲಿಲ್ಲ. ನಿಜ ಹೇಳಬೇಕೆಂದರೆ, ಮೂರ್ತಿ ಮನಸ್ಸನ್ನು ತುಂಬಿಕೊಳ್ಳಲು ಬೇಕಾದ ಏಕಾಂತ ಮತ್ತು ಮೌನಕ್ಕೆ ಬೇಕಾದ ವಾತಾವರಣ ಅಲ್ಲಿರಲಿಲ್ಲ. ಬೋಧಗಯಾ ಸುಪ್ರಸಿದ್ಧ ಯಾತ್ರಾಸ್ಥಳ. ಬಂದವರೆಲ್ಲರೂ  ಗದ್ದಲಮಾಡುತ್ತ ಫೋಟೊ ಸೆಳೆಯುತ್ತ ಇರುತ್ತಾರೆ. ಧ್ಯಾನ ಮಾಡುವವರಿಗೆಂದೇ ಪ್ರತ್ಯೇಕವಾಗಿ ಕಾದಿರಿಸಿದ ವನ ಹೊರಗಡೆ ಇದೆ. ಅಲ್ಲಿ ಸಾಧಕರ್‍ಯಾರೂ ಕಾಣಲಿಲ್ಲ. ಆದರೆ ಕೊಂಚ ಗೌಜು ಕಡಿಮೆಯಿರುವ ಚೈತ್ಯಾಲಯದ ಹಿಂದೆ, ಬೋಧಿಮರದ ಕೆಳಗೆ, ನಾನಾ ದೇಶಗಳಿಂದ ಬಂದ ಸಾಧಕರು ಭಿಕ್ಷುಗಳು ಧ್ಯಾನಮಾಡುತ್ತಿದ್ದರು.

ಬಳಿಕ ಚೈತ್ಯಾಲಯದ ತುಂಬ ಇರುವ ಬುದ್ಧನ ಬಗೆಬಗೆಯ ವಿನ್ಯಾಸದ ಪ್ರತಿಮೆಗಳನ್ನೂ ನೂರಾರು ಸ್ತೂಪಗಳನ್ನೂ ನೋಡುತ್ತ ನಡೆದೆ. ಒಂದು ನಮೂನೆಯ ಮಂಕು ಆವರಿಸತೊಡಗಿತು. ಮೊದಲು ಕಂಡ ಪ್ರತಿಮೆ ಉಕ್ಕಿಸಿದ ತನ್ಮಯತೆ ಮತ್ತು ಬೀರಿದ ಪ್ರಭಾವ, ನಂತರ ಕಾಣುತ್ತ ಹೋದ ಪ್ರತಿಮೆಗಳು ಕಡಿಮೆಗೊಳಿಸಿದಂತೆ, ಏಕತಾನತೆ ಹುಟ್ಟಿಸತೊಡಗಿದವು. ಒಂದೇ ಸಲಕ್ಕೆ ಬಹಳ ಚಿತ್ರಗಳನ್ನು ಮನದೊಳಕ್ಕೆ ತುಂಬಿಕೊಳ್ಳಬಾರದೊ ಏನೊ? ಈ ಪ್ರತಿಮೆ ಚೈತ್ಯ ವಿಹಾರ ಸ್ತೂಪಗಳು ಬುದ್ಧನ ತತ್ವಚಿಂತನೆಯಿಂದ ದೂರ ಕರೆದೊಯ್ಯುತ್ತವೆಯೆ? ಹಾಗೆ ದೂರಹೋದಾಗಲೇ ಪ್ರತಿಮಾ ಮತ್ತು ಚೈತ್ಯ ಸಂಸ್ಕೃತಿ ಆರಂಭವಾಗುತ್ತದೆಯೊ?  ಸಾಕಾರ ಸಗುಣ ದೇವರಿಗೆ ಶರಣಾಗತ ಭಕ್ತಿಯನ್ನರ್ಪಿಸುವ ಧರ್ಮಗಳಿಗೆ ಆರಾಧಿಸುವ ಆಚರಣೆಗಳು ಸಾಕು; ಜಿಜ್ಞಾಸೆಯ ಮೂಲಕವೇ ವ್ಯಕ್ತಿಯನ್ನು ರೂಪಾಂತರಗೊಳಿಸುವ ದರ್ಶನ ಪ್ರಧಾನ ಧರ್ಮ ಮತ್ತು ಪಂಥಗಳಿಗೆ ಆರಾಧನಾ ಆಚರಣೆಗಳೇ ಒಂದು ತೊಡಕು. ಆದರೆ ಆರಾಧನೆಗಳಿಲ್ಲದೆ ಧರ್ಮ ಮೂರ್ತವಾಗಿ ಉಳಿಯುವುದಿಲ್ಲ. ಅದನ್ನು ಮೂರ್ತಸ್ಥಾವರ ಮತ್ತು ಆಚರಣೆಗಳ ರೂಪದಲ್ಲಿ ಉಳಿಸಿಕೊಂಡರೆ, ಧರ್ಮದ ದರ್ಶನದ ಕೇಂದ್ರಬಿಂದುವೇ ವಿಚಲಿತವಾಗುತ್ತದೆ. ಎಂತಲೇ ಇರಬೇಕು, ಚಿಂತನೆ ಮತ್ತು ಕ್ರಿಯೆ ಪ್ರಧಾನವಾದ ಝೆನ್ ಧರ್ಮದ ಶಾಖೆಯು, ಬೋಧಿವೃಕ್ಷದ ಟೊಂಗೆಯನ್ನು ಒಯ್ದು ನಮ್ಮೂರಲ್ಲಿ ಬೆಳೆಸಿಕೊಂಡರೆ ಅದು ನಮ್ಮದೇ ಮರವಾಗುವಂತೆ, ಬೆಳೆದಿದ್ದು. ಅದು ಬುದ್ಧ ಎದುರುಬಂದರೂ ಮಾತಾಡಿಸಬೇಡಿ. ಅವನ ದರ್ಶನ ಸಾಕು ನಮಗೆ ಎಂದಿತು.

ಹಾಗೆ ಕಂಡರೆ, ಮೂರ್ತಿ ಚೈತ್ಯಾಲಯ ಸ್ತೂಪಗಳಂತಹ ಸ್ಥಾವರಗಳಿದ್ದರೂ, ಬೌದ್ಧತಾಣಗಳಲ್ಲಿ ಪುರೋಹಿತಶಾಹಿಯೇನೂ ಬೆಳೆದಿಲ್ಲ. ಭಂತೆಗಳು ಮೂಲತಃ ಜ್ಞಾನಾರ್ಜನೆ ಮಾಡುವ ಭಿಕ್ಷುಗಳು. ಬಲಾಢ್ಯ ಚೀನಾವನ್ನು ಎದುರುಹಾಕಿಕೊಂಡು, ದೇಶಭ್ರಷ್ಟರಾದ ಟಿಬೆಟಿಯರು ಚದುರಿಹೋಗದಂತೆ ಕಲೆಹಾಕಿಕೊಂಡು, ದೇಶದ ಬಿಡುಗಡೆಯಾಗಿ ಸೆಣಸಾಡುತ್ತಿರುವ ಚಳುವಳಿಗಾರರೂ ಚತುರ ರಾಜಕಾರಣಿಯೂ ಆಗಿರುವ ದಲೈಲಾಮ, ತಮ್ಮ ಮೊಗದಲ್ಲಿ ಹಸುಗೂಸಿನ ಮುಗ್ಧತೆಯನ್ನು ಉಳಿಸಿಕೊಂಡಿರುವುದು ಸಾಧ್ಯವಾಗಿರುವುದು ಈ ಜ್ಞಾನದಿಂದಲೇ ಇರಬೇಕು. ಕರ್ನಾಟಕದಲ್ಲಿ ಟಿಬೆಟಿಯನ್ ಬೌದ್ಧತಾಣಗಳಾದ ಮುಂಡಗೋಡು ಬೈಲುಕುಪ್ಪೆಗಳಲ್ಲಿರುವ ಧರ್ಮಶಾಲೆಗಳನ್ನು ನೋಡುವಾಗಲೂ, ಅವು ವಿದ್ಯಾಕೇಂದ್ರಗಳು ಅನಿಸುತ್ತವೆಯೇ ಹೊರತು ಪೂಜಾಸ್ಥಾನಗಳು ಅನಿಸುವುದಿಲ್ಲ. ಮಹಾಯಾನಿಗಳಿಗೆ ಹೋಲಿಸಿದರೆ ಹೀನಯಾನದ ತೇರಾಪಂಥದವರು ಬುದ್ಧನ ಪಥ್ಯ ಮತ್ತು ಚಿಂತನೆಗಳಿಗೆ ಹೆಚ್ಚು ಹತ್ತಿರವಾಗಿ ಉಳಿದಿರುವರು. ಅದರಲ್ಲೂ ನನಗೆ ಬೌದ್ಧಧ್ಯಾನ ಕಲಿಸಿದ ಗುರುಗಳಾದ ಮಹಾಬೋಧಿ ಸೊಸೈಟಿಯ ಆನಂದಭಂತೇಜಿಯವರು ನೆನಪಾಗುತ್ತಾರೆ. ಚೈತ್ಯಾಲಯದ ಆವರಣದಲ್ಲಿ ಟಿಬೆಟ್ಟಿನ ಮಹಾಯಾನ ಬೌದ್ಧರು ಬಟ್ಟಲುಗಳಲ್ಲಿ ನೀರುತುಂಬಿಸಿ ಹೂವುಗಳನ್ನೊ  ತುಪ್ಪ ತುಂಬಿಸಿ ದೀಪಗಳನ್ನೊ ಹಚ್ಚುತ್ತಿದ್ದರು; ಶ್ರೀಲಂಕಾ ಮತ್ತು ಮ್ಯಾನ್ಮಾರಿನ ಹೀನಯಾನ ಶಾಖೆಯ ಬೌದ್ಧರು ತ್ರಿಪಿಟಕಗಳನ್ನು ಪಠಣಿಸುತ್ತಿದ್ದರು. ಆದರೆ ಮಂತ್ರಪಠಣವೂ ಕೂಡ ಪೂಜೆಯಷ್ಟೇ ಯಾಂತ್ರಿಕವೆನಿಸುತ್ತಿತ್ತು. ಇದಕ್ಕೆ ಹೋಲಿಸಿದರೆ, ಚೈತ್ಯಾಲಯದ ಹಿಂದೆ, ಮರದ ನೆರಳಲ್ಲಿ ಕುಳಿತು ಧ್ಯಾನಮಗ್ನರಾಗಿರುವ ನಾನಾ ದೇಶಗಳಿಂದ ಬಂದಿರುವ ಭಂತೆಗಳಲ್ಲದ ಲೌಕಿಕ ಸಾಧಕರೇ ನಿಜವಾದ ತತ್ವಾನ್ವೇಷಿಗಳೇನೊ ಅನಿಸಿತು. ನಾನೂ ಕೊಂಚ ಹೊತ್ತು ಅಮಿತಾಭನ ಸ್ಮಿತವದನವನ್ನು ಮನದಲ್ಲಿ ಮೂಡಿಸಿಕೊಂಡು ಧ್ಯಾನಮಗ್ನನಾದೆ. ಅರಳಿಮರದ ತುಂಬ ತುಂಬಿಕೊಂಡು ಹಣ್ಣನ್ನು ತಿನ್ನಲು ಬಂದಿರುವ ಹಕ್ಕಿಗಳ ಕಲರವ ಕಿವಿಯನ್ನೂ ಮನಸ್ಸನ್ನೂ ತುಂಬಿಕೊಂಡಿತು. ಬೋಧಿಹಣ್ಣನ್ನು ತಿನ್ನಲು ಈ ಹಕ್ಕಿಗಳು ಎಲ್ಲೆಲ್ಲಿಂದ ಬಂದಿವೆಯೊ?

ಕುತೂಹಲ ಹುಟ್ಟಿಸಿದ್ದು ಬೌದ್ಧಚೈತ್ಯಾಲಯದ ಎದುರಿಗಿದ್ದ ಶಿವಲಿಂಗದ ಗುಡಿ ಮತ್ತು ಭೈರವಿಯ ಮೂರ್ತಿ. ಬೋಧಗಯೆ ೧೯ನೇ ಶತಮಾನದ ತನಕ ಪಾಳುಬಿದ್ದ ಜಾಗವಾಗಿತ್ತು.  ಆಗ ಒಬ್ಬ ಶೈವಸಾಧು ಇದನ್ನು ತನ್ನ ಸಾಧನೆಯ ಜಾಗವಾಗಿಸಿಕೊಂಡನು. ಈಗಲೂ ಬೋಧಗಯೆಯಲ್ಲಿ ಬೌದ್ಧ ಮತ್ತು ಶೈವಸಮಾಧಿಗಳು ಒಟ್ಟೊಟ್ಟಿಗಿವೆ. ಶೈವ ಸಮಾಧಿಯ ಮೇಲೆ ಲಿಂಗುವಿನ ಕೆತ್ತನೆಯಿದ್ದರೆ, ಬೌದ್ಧಸಮಾಧಿಯ ಮೇಲೆ ಸ್ತೂಪದ ಕೆತ್ತನೆಯಿದೆ. ಭಾರತದಲ್ಲಿ ಬೌದ್ಧವು ಹೆಚ್ಚು

ಒಡನಾಟ ಮಾಡಿದ್ದು ಶೈವದ ಜತೆ. ಕಾರಣ ಎರಡೂ ದೇಹದ ಮೂಲಕ ಸಾಧನೆ ಮಾಡುವ ಮತ್ತು ಮನಸ್ಸಿನ ಮೇಲೆ ನಿಯಂತ್ರಣ ಸಾಧಿಸುವ ಯೋಗಮಾರ್ಗಿಗಳು. ನಾಥಶೈವವೂ ಮಹಾಯಾನ ಬೌದ್ಧವೂ ೧೦ನೇ ಶತಮಾನದ ಸುಮಾರಿಗೆ ಟಿಬೆಟು ನೇಪಾಳ ಬಂಗಾಲಗಳಲ್ಲಿ ಮಹಾಮಿಲನ ಸಾಧಿಸಿದವು. ಇದರ ಪರಿಣಾಮ ಮಚೇಂದ್ರನಾಥನು ಏಕಕಾಲಕ್ಕೆ ಶೈವಯೋಗಿಯೂ ಬೌದ್ಧಯೋಗಿಯೂ ಆದನು. ಶೈವದ ಜತೆ ಬೌದ್ಧಧರ್ಮ ಕೊಡುಕೊಳೆ ಮಾಡಿದ ಒಂದು ಅಧ್ಯಾಯ, ಮಂಗಳೂರಿನ ಕದ್ರಿಯಲ್ಲಿಯೂ ಧರ್ಮಸ್ಥಳದಲ್ಲಿಯೂ ಇದೆ. ಧರ್ಮಸ್ಥಳ ಎಂದರೆ ಧರ್ಮನ ಅಥವಾ ಬುದ್ಧನ ಸ್ಥಳ. ಆದರೆ ಮಹಾಯಾನ ಬೌದ್ಧವು ಇನ್ನೂ ಒಂದು ಹೆಜ್ಜೆ ಮುನ್ನಡೆದು ಶಿವ ಕಾಳಿ ಭೈರವರನ್ನು ತನ್ನ ದೇವತೆಗಳನ್ನಾಗಿಸಿಕೊಂಡಿತು.

ಖುಶಿ ಕೊಟ್ಟಿದ್ದು ಬೋಧಗಯೆಯಲ್ಲಿ ಸಾಧಕರು ಬುದ್ಧನಿಗೆ ತಾವರೆ ಹೂವನ್ನು ತಂದು ಅರ್ಪಿಸುತ್ತಿದ್ದುದು. ಇಲ್ಲಿರುವ ಎಲ್ಲ ಶಿಲ್ಪಗಳಲ್ಲೂ ಬುದ್ಧನು ತಾವರೆಯ ಮೇಲೆ ಕುಳಿತಿರುವನು, ಇಲ್ಲವೇ ಕೈಲಿ ತಾವರೆ ಹಿಡಿದು ಪದ್ಮಪಾಣಿಯಾಗಿರುವನು. ಭಾರತದಿಂದ ಬೌದ್ಧಧರ್ಮವನ್ನು ಟಿಬೆಟಿಗೆ ಒಯ್ದ ಗುರುವಿನ ಹೆಸರು ಕೂಡ ಪದ್ಮಸಂಭವ; ಬೌದ್ಧರು ಪರಸ್ಪರ ನಮಸ್ಕಾರವನ್ನು 'ಓಂ ಮಣಿ ಪದ್ಮಯೇ' ಎನ್ನುತ್ತಾರೆ. ತಾವರೆಗೂ ಬೌದ್ಧಧರ್ಮಕ್ಕೂ ಆಳದ ನಂಟು. ಬದಾಮಿಯ ೪ನೇ ಗುಹೆಯಲ್ಲಿರುವ ಬುದ್ಧನೂ ಪದ್ಮಪಾಣಿ. ಅವನ ಕೈಯಲ್ಲಿನ ಪದ್ಮವಿನ್ನೂ ಅರಳುತ್ತಿರುವ ಮೊಗ್ಗು. ಅದನ್ನು ಅರಳಗೊಡೆವು ಎಂಬಂತೆ ಪದ್ಮಪಾಣಿ ಮೂರ್ತಿಯನ್ನು ಯಾರೊ ಭಗ್ನಗೊಳಿಸಿರುವರು. ಆದರೂ ಅರೆವಿಕಸಿತ ಪದ್ಮ ಮಾತ್ರ ಭಗ್ನವಾದರೆ ಉಳಿದಿದೆ. ಹೂವನ್ನು ಹೊಸಕಿಹಾಕಿದರೂ ಗೆಡ್ಡೆಯಲ್ಲಿರುವ ಕಸುವಿನಿಂದ ಇನ್ನೊಂದು ಹೂವು ಅರಳುತ್ತದೆ. ಎಂತಲೇ ಕರ್ನಾಟಕದಲ್ಲಿ ಬೌದ್ಧಧರ್ಮವು ಮೆಲ್ಲಮೆಲ್ಲನೆ ಹಬ್ಬುತ್ತಿದೆ. ವಿಕಸನ ಸಂಕುಚನ ಮಾಡಬಲ್ಲ ತಾವರೆ ಯೋಗಿಯ ಮನಸ್ಸಿನಂತೆ. ಕೆಸರಲ್ಲಿ ಹುಟ್ಟಿದರೂ ಸೂರ್ಯನಿಗಾಗಿ (ಜ್ಞಾನ) ತಲೆಯೆತ್ತಿ ಊರ್ಧ್ವಗಾಮಿಯಾಗಿ ನಿಲ್ಲುವ ಹೂವಿದು. ಕರ್ನಾಟಕದಲ್ಲಿರುವ ತಾವರೆಕೆರೆಗಳು ಬೌದ್ಧಧರ್ಮಕ್ಕೆ ಸಂಬಂಧವುಳ್ಳವೇನು? ಬೌದ್ಧಯಕ್ಷಿಯಾದ ತಾರೆಯ ಹೆಸರಲ್ಲಿ ಕೆರೆಗಳು ನಿರ್ಮಾಣವಾಗುತ್ತಿದ್ದುದು ಮಾತ್ರ ನಿಜ. ನನ್ನೂರು ತಾರಾಭಗವತಿಯ ಕೆರೆಯ ಸಂಕ್ಷಿಪ್ತರೂಪ ಎಂದು ತಿಳಿದಾಗ ನನಗೆ ಪರಮಾನಂದವಾಗಿತ್ತು.

ಬೋಧಗಯೆ ಮತ್ತು ಸಾರನಾಥಗಳ ವಿಶೇಷತೆ ಎಂದರೆ, ಅಲ್ಲಿ ಜಗತ್ತಿನ ಬೌದ್ಧದೇಶಗಳು ತಂತಮ್ಮ ವಿಹಾರಗಳನ್ನು ನಿರ್ಮಿಸಿಕೊಂಡಿರುವುದು. ಒಬ್ಬ ದೊರೆಯನ್ನು ಸೇವಿಸಲು ನಾನಾ ರಾಷ್ಟ್ರಗಳ ರಾಯಭಾರ ಕಚೇರಿಗಳು ತೆಗೆದಂತೆ ಅವು ಕಾಣುತ್ತವೆ. ಚೀನಾ ಭೂತಾನ ಟಿಬೆಟ್ ಜಪಾನ್ ಶ್ರೀಲಂಕಾ ಮ್ಯಾನ್ಮಾರ್- ಹೀಗೆ ಪ್ರತಿದೇಶದ ವಾಸ್ತುರಚನೆ ಮತ್ತು ಸಾಂಸ್ಕೃತಿಕ ವಿಶಿಷ್ಟತೆಗಳಲ್ಲಿ ಅವು ರೂಪುಗೊಂಡಿವೆ. ಒಳಗಿರುವ ಬುದ್ಧನ ಮುಖ ಕೂಡ ಆಯಾ ದೇಶದವರ ಚಹರೆಯನ್ನೇ ಹೋಲುತ್ತದೆ. ಒಬ್ಬನೇ ಬುದ್ಧ ಬೇರೆಬೇರೆ ದೇಶ ಮತ್ತು ಸಮಾಜಗಳಲ್ಲಿ ಪಡೆದ ರೂಪಾಂತರ ಆಶ್ಚರ್ಯ ಹುಟ್ಟಿಸುತ್ತದೆ. ಥಾಯ್ಲೆಂಡಿನ ವಿಹಾರದಲ್ಲಿ ದೋಣಿಯಲ್ಲಿ ಮುಳುಗುತ್ತಿರುವ ನಾವಿಕರಿಗೆ ಬೆಳಕಾಗಿ ದಾರಿತೋರುವವನಾಗಿ ಬುದ್ಧನಿರುವ ದೊಡ್ಡ ವರ್ಣಚಿತ್ರವಿತ್ತು. ವಿಶೇಷವೆಂದರೆ ಇಲ್ಲಿ ಬಾಂಗ್ಲಾದೇಶದ ವಿಹಾರವೂ ಇರುವುದು. ವಿಹಾರಗಳು ಆಯಾ ದೇಶಗಳ ಸಂಸ್ಕೃತಿಯನ್ನು ಮಾತ್ರವಲ್ಲ, ಸಿರಿವಂತಿಕೆಯನ್ನೂ ಸೂಚಿಸುವಂತಿವೆ. ಜಪಾನಿ ವಿಹಾರ ಎಲ್ಲಕ್ಕಿಂತ ಹೆಚ್ಚು ವೈಭವದಲ್ಲಿದೆ. ಆದರೂ ಎತ್ತರದ ಪ್ರತಿಮೆಯನ್ನು ಸ್ಥಾಪಿಸುವ ಸ್ಪರ್ಧೆಯಲ್ಲಿ ಈ ಬೌದ್ಧದೇಶಗಳು ತೊಡಗಿರುವುದು ಮಾತ್ರ ಅರ್ಥವಾಗಲಿಲ್ಲ.

೪

ಬೋಧಗಯೆ ಬಿಟ್ಟು ಗಯೆಗೆ ಒಂದು ರಿಕ್ಷಾ ಹತ್ತಿದೆ. ಅದರ ತುಂಬ ಕಣ್ಣಿಗೆ ಪಟ್ಟಿಕಟ್ಟಿಕೊಂಡು, ಕಪ್ಪುಕನ್ನಡಕ ಹಾಕಿರುವವರೇ ತುಂಬಿಕೊಂಡಿದ್ದರು. ವಿಚಾರಿಸಲು ಅವರು ಯಾರೂ ಬೋಧಗಯೆಯ ಚೈತ್ಯಾಲಯಕ್ಕೆ ಬಂದವರಲ್ಲ. ಅಲ್ಲಿ ಏರ್ಪಟ್ಟಿದ್ದ ಕಣ್ಣು ಚಿಕಿತ್ಸೆಯ ಕ್ಯಾಂಪಿಗೆ ಬಂದ ಆಸುಪಾಸಿನ ರೋಗಿಗಳು. ಹೆಚ್ಚಾಗಿ ವಯಸ್ಸಾದವರು ಮತ್ತು ಬಡವರು. ಇಂತಹ ರೋಗಿಗಳನ್ನು ಮತ್ತು ವಯಸ್ಸಾದವರನ್ನು ನೋಡಿ ರಾಜಕುಮಾರ ಸಿದ್ಧಾರ್ಥನ ಮನಸ್ಸು ಕದಡಿಹೋಗಿದ್ದು ಎಂದು ಕತೆಯಿದೆ. ಆದರೆ ಬುದ್ಧ ಅರಮನೆ ಬಿಟ್ಟಿದ್ದು ನದಿಯ ಜಗಳಕ್ಕೆ. ಬುದ್ಧನು ಕಣ್ತೆರೆದಿರುವ ಶಿಲ್ಪ ಅಥವಾ ಚಿತ್ರಗಳೇ ಕಡಿಮೆ. ಹೆಚ್ಚಿನ ಶಿಲ್ಪ ಮತ್ತು ಚಿತ್ರಗಳಲ್ಲಿ ಅವನು ಅರೆನಿಮೀಲಿತ ಧ್ಯಾನನಿರತ. ಆದರೆ ಧ್ಯಾನಕ್ಕೆ ಕಣ್ಮುಚ್ಚುವ ಮೊದಲು ಜಗತ್ತನ್ನೆಲ್ಲ ಕಣ್ತೆರೆದು ಸಾಕಷ್ಟು ಕಂಡವನು. ಬೋಧಗಯೆಯ ಮುಖ್ಯ ಬುದ್ಧಮೂರ್ತಿ ಕೂಡ ಕಣ್ತೆರೆದ ಅನಿಮಿಷಲೋಚನ. (ಅಲ್ಲಮನ ಗುರುವಿನ ಹೆಸರು ಅನಿಮಿಷ ಎಂಬುದು ಗಮನಾರ್ಹ.) ಬುದ್ಧನಿಗೆ ಜ್ಞಾನೋದಯವಾದ ಬಳಿಕ ಬೋಧಿಮರವನ್ನು ಬಹುಕಾಲ ದಿಟ್ಟಿಸಿ ನೋಡಿದ್ದರ ಸಂಕೇತವಾಗಿ ಈ ಮೂರ್ತಿ ರೂಪುಗೊಂಡಿರಬೇಕು. ಉಳಿದಂತೆ ಬುದ್ಧ ಕಣ್ಮುಚ್ಚಿ ಕುಳಿತ

ನಿಮಿಷಲೋಚನನೇ. ಆದರೆ ಅವನು ಕೊಟ್ಟ ಚಿಂತನೆ, ಲೋಕದ ಕುರುಡುತನಕ್ಕೆ ಮದ್ದಾಗಿ ಒದಗಿಬಂದಿತು. ಅಂತಹ ಬುದ್ಧನಿಗೆ ಜ್ಞಾನದಕ್ಕಿದ ಊರಲ್ಲಿ, ಅತಿ ಎತ್ತರದ ಸ್ಥಾವರ ಪ್ರತಿಮೆ ಸ್ಥಾಪಿಸುವುದಕ್ಕಿಂತ ಈ ಕಣ್ಣಿನ ಕುರುಡನ್ನು ಕಳೆಯುವ ಔಷಧಿ–ಕನ್ನಡ ಕೊಡುವ ವೈದ್ಯದಾನ ಅರ್ಥಪೂರ್ಣ ಅನಿಸಿತು. ಕಣ್ಣಪಟ್ಟಿ ಕಟ್ಟಿಕೊಂಡು ನಾಳೆ ಬರಲಿರುವ ದೃಷ್ಟಿಗಾಗಿ ಆಸೆ ಪಟ್ಟುಕೊಂಡು ತವಿಸುತ್ತಿರುವ ರೋಗಿಗಳ ಜತೆ ಪಯಣ ಮಾಡಿಕೊಂಡು ಮರಳಿ ಬಂದೆ.

ಸನ್ನತಿಯ ಶಿಲ್ಪದಲ್ಲಿರುವ ಬೋಧಿಮರವು ಎಷ್ಟೇ ಸುಂದರವಿರಲಿ, ಅದು ಎಲೆ ಉದುರಿಸದು. ಹಕ್ಕಿಗೆ ತಾಣವಾಗದು. ಅದರ ಮುಂದೆ ಎಲೆ ಉದುರಿಸುವ, ಧ್ಯಾನ ಮಾಡುವವರಿಗೆ ನೆರಳು ಕೊಡುವ, ಹಕ್ಕಿಗಳ ಹಕ್ಕೆಯಾಗಿರುವ ಬೋಧಗಯೆಯ ಅರಳಿಮರ ಜೀವಂತವಾದುದು. ಹಾಗೆ ಕಂಡರೆ, ಬೋಧಗಯೆ ಮತ್ತು ಸಾರನಾಥಗಳಲ್ಲಿ ಇರುವುದು ಬುದ್ಧ ಜ್ಞಾನೋದಯ ಪಡೆದ ಮೂಲ ಬೋಧಿವೃಕ್ಷವಲ್ಲ. ಭಾರತ ತನ್ನ ನೆಲದ ಧರ್ಮವಾದ ಬೌದ್ಧಧರ್ಮವನ್ನು ಹೊರಗಟ್ಟಿದಂತೆ, ಬೋಧಗಯೆಯಲ್ಲಿದ್ದ ಬೋಧಿವೃಕ್ಷವನ್ನೂ ಕಳೆದುಹಾಕಿತ್ತು. ಗಯೆಯಿಂದ ಒಂದು ಕೊಂಬೆಯನ್ನು ಒಯ್ದು ಶ್ರೀಲಂಕನ್ನರು ಬೆಳೆಸಿಕೊಂಡಿದ್ದ ಮರದಿಂದ ಮತ್ತೆ ಕೊಂಬೆಯೊಂದನ್ನು ತಂದು ಈಗಿರುವ ಮರವನ್ನು ಬೆಳೆಸಲಾಗಿದೆ. ಅರಳಿ ಕೊಂಬೆಯ ಈ ದೇಶಾಂತರ ಯಾನವು ಸಾಂಕೇತಿಕವಾಗಿದೆ; ಲುಂಬಿನಿಯ ರಾಜಕುಮಾರ ಅರಮನೆಯನ್ನು ತ್ಯಜಿಸಿ, ಗಂಗೆಯ ಬಯಲ ತುಂಬ ತಿರುಗಾಡಿ, ಗಯೆಯಲ್ಲಿ ಅರಿವು ಗಳಿಸಿ, ಸಾರನಾಥದಲ್ಲಿ ಬೋಧೆ ಮಾಡಿ, ಕುಶೀನಗರದಲ್ಲಿ ದೇಹಬಿಟ್ಟಷ್ಟೆ ಮಾರ್ಮಿಕವಾಗಿದೆ. ಬೋಧಗಯೆಯನ್ನು ನೆನೆಯಲು ಯತ್ನಿಸಿದರೆ, ಈಗಲೂ ನನಗೆ ಆಗಸದೆತ್ತರಕ್ಕೆ ನಿಂತ ಚೈತ್ಯಾಲಯ ಕಾಡುವುದಿಲ್ಲ. ಕಪ್ಪು ಕನ್ನಡಧಾರಿಗಳಾದ ಮುದುಕರು ನೆನಪಾಗುತ್ತಾರೆ; ಬೋಧಗಯೆಯ ಅರಳಿಮರ ನೆನಪಾಗುತ್ತದೆ. ಮರಕ್ಕೆ ಹಣ್ಣುತಿನ್ನಲು ಬಂದಿದ್ದ ಹಕ್ಕಿಗಳು ಧ್ಯಾನ ಮಾಡಗೊಡದಂತೆ ಮಾಡುತ್ತಿದ್ದ ಕಲರವ ನೆನಪಾಗುತ್ತದೆ. ಕಾರಣ ಸರಳ: ಈ ಮುದುಕರು, ಇಂತಹುದೇ ಮರ, ಇವೇ ಹಕ್ಕಿಗಳು ನಮ್ಮೂರಲ್ಲೂ ಇರುವುದು. ಬುದ್ಧನನ್ನು ಅವನ ತತ್ವಗಳನ್ನು ತೀರ್ಥಯಾತ್ರೆ ಮಾಡಿ ಕಾಣುವುದಕ್ಕಿಂತ ನಮ್ಮ ಬದುಕಿನ ಪರಿಸರದಲ್ಲೇ ಕಾಣಬೇಕು ಎಂಬ ಜ್ಞಾನೋದಯ ನನಗಾಯಿತು.

**(ಆಕರ: ನಡೆದಷ್ಟೂ ನಾಡು, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೨)**

# ೨. ಕಾಫಿ ವಿತ್ ಮಿಲ್ಕ್ ಪ್ಲೀಸ್...

**– ಜಿ.ಎನ್. ಮೋಹನ್**

ಕಾಫಿ ವಿತ್ ಮಿಲ್ಕ್ ಪ್ಲೀಸ್ –

ಹವಾನಾದ ಪ್ಯಾಲೇಸಿಯೋ ಡೆ ಲಾ ಕನ್‌ವೆನ್ಶಿಯೋನೆಲ್‌ನಲ್ಲಿ ಜರುಗುತ್ತಿದ್ದ ವಿಚಾರ ಸಂಕಿರಣಗಳ ಮಧ್ಯೆ ಬಿಡುವು ಮಾಡಿಕೊಂಡು ಬಂದು ಜೋಬಿನಲ್ಲಿರುವ ಡಾಲರ್‌ಗಳನ್ನು ತಲೆಯಿಂದಲೇ ಮುಟ್ಟಿ ಮುಟ್ಟಿ ಭಾರತದಲ್ಲಿ ಎರಡು ರೂಪಾಯಿನಲ್ಲಿ ಮುಗಿಯುತ್ತಿದ್ದ ಕಾಫಿ ಕಥೆಗೆ ಇಲ್ಲಿ ಏನಿಲ್ಲವೆಂದರೂ ಡಾಲರ್ ಲೆಕ್ಕದಲ್ಲಿ ೭೦ ರೂ. ಕೊಡಬೇಕಲ್ಲಾ ಎಂದು ಅಳೆದೂ ತೂಗಿ, ಅಳೆದೂ ತೂಗಿ ಅಂತೂ ಕೊನೆಗೆ ಕಾಸಿಗಿಂತ ಕಾಫಿ ಹುಚ್ಚಿನ ಕೈಯೇ ಮೇಲಾಗಿ ಆರ್ಡರ್ ಮಾಡಿದಾಗ ತಟಕ್ಕನೆ ಪಕ್ಕದಲ್ಲಿ ನಿಂತಿದ್ದ ಯುವತಿ ಮುಖ ಕೆಕ್ಕರಿಸಿ ಕೇಳಿದಳು.

'ಯು ಇಂಗ್ಲಿಸ್'

ಹೌದಮ್ಮಾ ಎಂದೆ.

'ಬ್ಲಡಿ ಬ್ರಿಟಿಸ್' ಎಂದಳು.

ಕೈಯಲ್ಲಿ ಕಪ್ಪನೆ ಕಾಫಿ ಹಿಡಿದ ಆಕೆ ಮತ್ತೆ ಸಂಕಿರಣಕ್ಕೆ ಶರಣಾದಳು. ತಲೆ ಒಂದು ಕ್ಷಣ ಗಿರಿಗಿರಿ ತಿರುಗಿತು. ಇದ್ದಬದ್ದ 'ಇಂಗ್ಲಿಸ್' ಎಲ್ಲಾ ಖರ್ಚು ಮಾಡಿ ಅವರು ಏನು ಹೇಳಿದ್ದು ಎಂದು ಕಾಫಿ ನೀಡುತ್ತಿದ್ದವನನ್ನು ವಿಚಾರಿಸಿದೆ. ಕಪ್ಪು ಕಾಫಿಗೆ ಹಾಲು ಹಾಕಿ ಕುಡಿಯುವವರು ಇಂಗ್ಲೆಂಡ್‌ನವರು. ಉಳಿದೆಲ್ಲಾ ಕಡೆ ಕಾಫಿ ಎಂದರೆ ಕಪ್ಪು ಕಾಫಿಯೇ ಎಂದ.

ಕಾಫಿಗೆ ನಾನು ಹಾಲು ಹಾಕಿಸಿಕೊಂಡದ್ದೇ ತಡ ಇಂಗ್ಲೆಂಡ್‌ನ ಮೇಲೆ ತನ್ನ ಹೊಟ್ಟೆಯಲ್ಲಿಟ್ಟುಕೊಂಡಿದ್ದ ಸಿಟ್ಟನ್ನೆಲ್ಲಾ ಹೊರಗೆ ಚೆಲ್ಲಿದ್ದ ಆಕೆ ಹೊಸ ಇತಿಹಾಸದ ಪಾಠ ಮಾಡಿದ್ದಳು. ಬ್ರಿಟಿಷರು ಭಾರತದ ಮೇಲೆ ಮಾತ್ರವಲ್ಲ ಅಡಿಗೆ ಮನೆಗೆ ನುಗ್ಗಿ ಕಾಫಿ ಮೇಲೂ ದಾಳಿ ಮಾಡಿದ್ದರು. ಇಂಗ್ಲೆಂಡ್ ಭಾರತವನ್ನು ಮಾತ್ರ ವಸಾಹತುವನ್ನಾಗಿ ಮಾಡಿಕೊಳ್ಳಲಿಲ್ಲ. ಅಡುಗೆ ಮನೆಯನ್ನೂ ವಸಾಹತು ಮಾಡಿಕೊಂಡಿತು ಎನಿಸಿತು. ಹಾಲು ಹಾಕಿದ ಕಾಫಿ ಹಿಡಿದಿದ್ದ ನಾನು ಭೂಗೋಳ, ಚರಿತ್ರೆ ಎಲ್ಲವನ್ನೂ ಅಂಗೈಯಲ್ಲಿ ಹಿಡಿದು ನಿಂತಿದ್ದೆ.

ಭೂಮಿ ಗುಂಡಗಿದೆ ಎಂದು ಬಲವಾಗಿ ನಂಬಿದ್ದ ಕೊಲಂಬಸ್ ಭಾರತಕ್ಕೆ ಹೋಗಬೇಕು ಎಂದು ಹೊರಟವನು ಆತುರ ಮಾಡಿಕೊಂಡ. ಭಾರತದ ಸಂಪತ್ತಿನ ಮೇಲೆ ಕಣ್ಣಿಟ್ಟಿದ್ದ ಕೊಲಂಬಿಯಾದವರು ಅಲ್ಲಿಗೆ ಹೋಗುವ ಮೊದಲೇ ತಾನು ಭಾರತಕ್ಕೆ ಹೋಗಿಬಿಡಬೇಕು ಎಂದು ಹೊರಟ ಕೊಲಂಬಸ್ ಕ್ಯೂಬಾವನ್ನು 'ಕಂಡುಹಿಡಿದ'. ಕ್ಯೂಬಾ ಹಾಗೂ ಆ ಮೂಲಕ ಅಮೇರಿಕಾ ಖಂಡವನ್ನು ಕೊಲಂಬಸ್ ಕಂಡುಹಿಡಿದ ೫೦೦ನೇ ವರುಷವನ್ನು ಭರ್ಜರಿಯಾಗಿ ಆಚರಿಸಲು ಸ್ಪೇನ್ ಕೋಟಿಗಟ್ಟಲೆ ಹಣ ಸುರಿಯಲು ಸಜ್ಜಾಗುತ್ತಿದ್ದಾಗ ಫಿಡೆಲ್ ಕ್ಯಾಸ್ಟ್ರೋ ಅಪಸ್ವರ ಎತ್ತಿದರು. ಕೊಲಂಬಸ್ ಇಲ್ಲಿಗೆ ಕಾಲಿಡುವ ಮುಂಚೆಯೇ ಕ್ಯೂಬಾ ಇತ್ತು. ಇಲ್ಲಿ ಜನರು ಸಾಕಷ್ಟು ಸಂಪದ್ಭರಿತರಾಗಿಯೇ ಇದ್ದರು. ಕೊಲಂಬಸ್ ಅದನ್ನು 'ಕಂಡು ಹಿಡಿಯುವುದು' ಹೇಗೆ. 'ಕೊಲಂಬಸ್ ಇಲ್ಲಿಗೆ ಕಾಲಿಟ್ಟಿರಬಹುದು ಅಷ್ಟೆ ಅಥವಾ ಅಮೇರಿಕಾ ಮತ್ತು ಯುರೋಪ್ ಪರಸ್ಪರ ಕಂಡುಕೊಂಡವು ಎಂದು ಬೇಕಾದರೆ ಅನ್ನಬಹುದು' ಎಂದಿದ್ದರು.

ಹವಾನಾದ ಈ ಕಾಫಿ ಇದನ್ನು ನೆನಪು ಮಾಡಿತು. ನಾನು ಕಾಫಿ ಬಟ್ಟಲಿನಲ್ಲಿ ಹೊಸ ಚರಿತ್ರೆ ಕಂಡುಕೊಂಡಿದ್ದೆ. ಇಂಗ್ಲೆಂಡ್‌ಗೆ ಯಾವುದು ಚರಿತ್ರೆ ಎನಿಸಿತ್ತೋ ಅದು ನಮಗೂ ಚರಿತ್ರೆಯಾಯಿತು. ಆರ್ಯರು ದ್ರಾವಿಡರನ್ನು 'ಕಂಡುಹಿಡಿದರು', ಎಲ್ಲಕ್ಕಿಂತ ಹೆಚ್ಚಾಗಿ ವಾಸ್ಕೋಡಗಾಮ ಭಾರತವನ್ನು 'ಕಂಡುಹಿಡಿದ'. ವಾಸ್ಕೋಡಗಾಮ ಕಾಲಿಟ್ಟ ಕೇರಳದಲ್ಲಿಯೂ ಈ 'ಕಂಡುಹಿಡಿದ' ಘಟನೆಯ ೫೦೦ನೇ ವರ್ಷವನ್ನು ಆಚರಿಸುವ ಬಗ್ಗೆ ಎದ್ದ ವಿವಾದಗಳು ಸರಿಯಾಗಿ ಅರ್ಥವಾಗಿದ್ದು ಈ ಕಾಫಿ ಬಟ್ಟಲು ಹಿಡಿದಾಗ. ವಾಸ್ಕೋಡಗಾಮ ಭಾರತವನ್ನು 'ಕಂಡುಹಿಡಿದ' – ಚರಿತ್ರೆಯ ಪುಸ್ತಕಗಳು ಬರೆದವು 'ಭಾರತ ಕಂಡು ಹಿಡಿಸಿಕೊಂಡಿತು'.

ತಕ್ಷಣ ನನಗೆ ನೆನಪಿಗೆ ಬಂದಿದ್ದು ಕೇರಳದ ಮನೆ ಮನೆಗಳಲ್ಲಿ ವಿಜ್ಞಾನದ ಅರಿವನ್ನು ಬಿತ್ತಲು ಯತ್ನಿಸುತ್ತಿರುವ ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ ಅಭಿನಯಿಸಿದ ನಾಟಕ 'ಸುಂದರವಾದ ತಾಜ್‌ಮಹಲ್ ಕಟ್ಟಿದವರಾರು ಕಟ್ಟಿದವರಾರು',

‘ಷಹಜಹಾನ್ ಅಲ್ಲ ಷಹಜಹಾನ್ ಅಲ್ಲ’, ‘ದುಡಿದುಡಿದು ಶ್ರಮಪಡುವ ಶ್ರಮಜೀವಿ ಶ್ರಮಜೀವಿ, ಉತ್ತರ ಅದು ಒಂದೇ ಉತ್ತರಾ’ ಎಂದು ಗೀತರೂಪಕದಲ್ಲಿ ಹೇಳಿದ್ದರು. ಚರಿತ್ರೆ ಎಂಬುದು ಒಂದೇ ಅಲ್ಲ. ಅರಸನಿಗೆ ಒಂದು ಚರಿತ್ರೆ ಇದ್ದಂತೆ ಆಳಿಗೂ ಒಂದು ಇದೆ. ಸ್ಪೇನ್‌ಗೊಂದು ಚರಿತ್ರೆ ಇದ್ದರೆ ಕ್ಯೂಬಾಗೂ ಒಂದು ಇದೆ. ಅಂಕಿ ಸಂಖ್ಯೆಗಳ ಗೂಡಾಗಿರುವ ಭಾರತದ ಚರಿತ್ರೆಯ ಪುಸ್ತಕಗಳಲ್ಲಿ ಈ ಎಲ್ಲವೂ ಆರಾಮವಾಗಿ ಮಲಗಿದೆ. ಚರಿತ್ರೆ ಪುಸ್ತಕ ಬರೆದವರೂ ಹಾಲು ಹಾಕಿದ ಕಾಫಿ ಕುಡಿದವರೇ ತಾನೇ?

ಕ್ಯೂಬಾ ಕೊಲಂಬಸ್‌ನ ಈ ‘ಕಂಡುಹಿಡಿದ’ ಲೆಕ್ಕಾಚಾರ ಒಪ್ಪಿಕೊಳ್ಳಲು ಸಿದ್ಧವೇ ಇಲ್ಲ. ಅಷ್ಟೇ ಅಲ್ಲ ಕೆಲವರು ಈ ಕೊಲಂಬಸ್ ಯಾತ್ರೆಯನ್ನು ‘ಎರಡು ಸಂಸ್ಕೃತಿಗಳ ಭೇಟಿ’ ಎಂದು ಕರೆದು ಕೈತೊಳೆದುಕೊಂಡಿದ್ದಾರೆ. ಕ್ಯೂಬಾ ಅದಕ್ಕೂ ನಕಾರ ಸೂಚಿಸಿದೆ. ‘ಇದು ಸಂಸ್ಕೃತಿಯ ಮುಖಾಮುಖಿ ಆಗಲು ಹೇಗೆ ಸಾಧ್ಯ? ಇದು ಒಂದು ಸಂಸ್ಕೃತಿಯ ಮೇಲೆ ನಡೆದ ಮತ್ತೊಂದು ಸಂಸ್ಕೃತಿಯ ಹೇರಿಕೆ. ಕೈಯಲ್ಲಿ ಮಿಲಿಟರಿ ಆಯುಧ ಹಿಡಿದಿದ್ದವರು ಮತ್ತೊಂದು ಜನಾಂಗವನ್ನು ಹೊಸಕಿ ಹಾಕಿದ ಕಥೆ. ಇದು ಯುರೋಪ್ ಅಮೇರಿಕಾದ ಮೇಲೆ ನಡೆಸಿದ ಹಿಂಸಾತ್ಮಕ ಅತಿಕ್ರಮಣ. ಬೇಕಾದರೆ ಈ ೫೦೦ನೇ ವಾರ್ಷಿಕೋತ್ಸವವನ್ನು ಎರಡು ಸಂಸ್ಕೃತಿಗಳ ಘರ್ಷಣೆ ಎಂದು ಕರೆಯಬಹುದು’ ಎನ್ನುತ್ತಾರೆ ಫಿಡೆಲ್. ಕ್ಯೂಬಾದಲ್ಲಿ ನಡೆದದ್ದೂ ಅದೇ, ಸಂಸ್ಕೃತಿಗಳ ತಿಕ್ಕಾಟ. ೧೪೯೨ರ ಅಕ್ಟೋಬರ್ ೧೨ರಂದು ಕ್ಯೂಬಾಗೆ ಕಾಲಿಟ್ಟ ಕೊಲಂಬಸ್ ಈ ದ್ವೀಪದ ಸೌಂದರ್ಯವನ್ನು ನೋಡಿ ದಂಗಾಗಿ ಹೋದ. ‘ಮನುಷ್ಯನ ಕಣ್ಣುಗಳೆಂದೂ ಕಂಡಿರದಿದ್ದ ಸೌಂದರ್ಯದ ದ್ವೀಪ’ ಎಂದು ಕರೆದ. ಕೊಲಂಬಸ್ ಆಗಲೂ ಅಂದುಕೊಂಡಿದ್ದದ್ದು ತಾನು ಇಂಡಿಯಾಗೆ ಕಾಲಿಟ್ಟಿದ್ದೇನೆ ಎಂದೇ. ಅದಕ್ಕಾಗಿ ‘ಇಂಡೀಸ್’ ಎಂದು ಕರೆದ. ಇದು ಇಂಡಿಯಾ ಅಲ್ಲ ಎಂದು ಗೊತ್ತಾದಾಗ ‘ವೆಸ್ಟ್ ಇಂಡೀಸ್’ ಆಯಿತು.

ಸ್ಪೇನ್‌ನ ಮಹಾರಾಣಿ ಇಸಾಬೆಲ್ ಕೊಲಂಬಸ್‌ನ ಈ ‘ಕಂಡುಹಿಡಿದ’ ಸಾಹಸಕ್ಕೆ ಬೆರಗಾದಳು. ಕ್ಯೂಬಾ ‘ಕಸ್ಟಮ್ ಹೌಸ್’ ಆಯಿತು. ರಾಜಕುಮಾರಿ ಜುವಾನಾಳ ಹೆಸರನ್ನು ಒಂದಷ್ಟು ದಿನ ಇದಕ್ಕೆ ಇಟ್ಟರು. ನಂತರ ಪಾದ್ರಿಗಳು ‘ಶಾಂಟಿಯಾಗೋ’ ಎಂದರು. ‘ಫರ್ಡಿನಾಂಡ್’ ಎಂಬ ಹೆಸರು ತೇಲಿ ಬಂತು. ‘ಏವ್ ಮರಿಯಾ’ ಎಂದರು. ನಂತರ ನಡೆದದ್ದು ಸಂಸ್ಕೃತಿಗಳ ತಿಕ್ಕಾಟ.

ದ್ವೀಪದಲ್ಲಿ ತಮಗೆ ಬೇಕಾದ್ದು ಬೆಳೆದುಕೊಂಡು ಆರಾಮವಾಗಿ ಇದ್ದ, ಮೂಲನಿವಾಸಿಗಳಾದ ಟೈನೊಸಿ, ಸಿಬೋನಿಸ್, ಗಾನಾಟಿಬೆಸ್ ಎಲ್ಲರನ್ನೂ ಸ್ಪೇನ್ ಕತ್ತೆಕೆಲಸಕ್ಕೆ ಹಚ್ಚಿತು. ಎಷ್ಟೋ ಜನರು ದ್ವೀಪದಿಂದ ಕಾಲ್ತೆಗೆಯುವಂತೆ ಮಾಡಿದರು. ಘರ್ಷಣೆಯಲ್ಲಿ ಹಲವರು ಸಾವನ್ನಪ್ಪಿದರು, ಯುರೋಪಿನಿಂದ ಜನರ ಜೊತೆಗೆ ಬಂದ ರೋಗಗಳೂ ಹಲವರನ್ನು ಬಲಿ ತೆಗೆದುಕೊಂಡಿತು. ಸಾಕಷ್ಟು ಜನರನ್ನು ಸ್ಪೇನ್ ಕೊಂದುಹಾಕಿತು.

ಕ್ಯೂಬಾದಲ್ಲಿ ಇದ್ದ ಮೂಲನಿವಾಸಿಗಳನ್ನು ಬಹುತೇಕ ಇಲ್ಲವಾಗಿಸಲಾಯಿತು. ಹಾಗಾದರೆ ಕೆಲಸಕ್ಕೆ ಯಾರು? ಇದ್ದವರೆಲ್ಲಾ ಸ್ಪೇನ್‌ನ ಬಿಳಿಯರೇ ಹಾಗಾದರೆ ಚಾಕರಿಗೆ ಯಾರು, ಸ್ಪೇನ್ ಆಫ್ರಿಕಾದತ್ತ ಮುಖಮಾಡಿತು. ಸುಮಾರು ೩೦೦ ವರ್ಷಗಳ ಕಾಲ, ತಮ್ಮ ನಾಡಿನಲ್ಲಿ ಬೇರುಬಿಟ್ಟಿದ್ದ ಕಪ್ಪು ಜನರನ್ನು ಸ್ಪೇನ್ ಕ್ಯೂಬಾದತ್ತ ಎಳೆದುತಂದಿತು. ನೀಗ್ರೋ ಗುಲಾಮರನ್ನು ಕಬ್ಬಿನ ಗದ್ದೆಗಳಲ್ಲಿ, ಗಣಿಗಳಲ್ಲಿ ಕೆಲಸಕ್ಕೆ ಹಚ್ಚಿತು.

ಕ್ಯೂಬಾ ಸ್ಪೇನ್‌ಗೆ ವಲಸೆ ದೇಶವಾಯಿತು. ಪಕ್ಕದಲ್ಲಿದ್ದ ಒಂದೊಂದೇ ದ್ವೀಪಕ್ಕೆ ಕಾಲು ಹಾಕಿದರು. ಕ್ಯೂಬಾದ ಸುತ್ತ ಕೋಟೆ ಕಟ್ಟಿದರು. ಕಡಲ್ಗಳ್ಳರು ಕ್ಯೂಬಾದತ್ತ ನುಗ್ಗಿ ಇದ್ದ ಸಂಪತ್ತನ್ನು ಎಲ್ಲಿ ಸೂರೆ ಹೊಡೆಯುತ್ತಾರೋ ಎಂಬ ಭಯ ಸುಂದರ ದ್ವೀಪಗಳಲ್ಲಿ ಗೋಡೆಗಳು ಎದ್ದುನಿಲ್ಲುವಂತೆ ಮಾಡಿದವು. ಬಾಡಿಗೆ ಸೇನೆ ಸ್ಪೇನ್ ಪರವಾಗಿ ಕ್ಯೂಬಾದಲ್ಲಿ ಸದಾ ಕಾವಲು ನಿಂತಿತ್ತು. ಇಡೀ ದ್ವೀಪದ ಸದ್ದು ಅಡಗಿಹೋಗುವಂತೆ ಈ ಸೇನೆ ನೋಡಿಕೊಂಡಿತು. ಇದೇ ಸಮಯದಲ್ಲಿ ಬ್ರಿಟೀಷರು ಕ್ಯೂಬಾದ ಮೇಲೆ ದಾಳಿ ಮಾಡಿ ಅವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡರು. ಒಂದೇ ವರ್ಷ ಇದ್ದು ಅಲ್ಲಿಂದ ಕಾಲ್ತೆಗೆದರು. ೧೭೬೨ರಲ್ಲಿ ಕ್ಯೂಬಾವನ್ನು ಮತ್ತೆ ಸ್ಪೇನ್‌ನ ಕೈಗೇ ಬ್ರಿಟೀಷರು ಒಪ್ಪಿಸಿದರು.

ಕ್ಯೂಬಾ ನೋಡು ನೋಡುತ್ತಿರುವಂತೆಯೇ ಸಕ್ಕರೆ, ತಂಬಾಕು, ಹಣ್ಣುಹಂಪಲು ಸ್ಪೇನ್‌ನ ದಿಕ್ಕು ಹಿಡಿದವು. ಕ್ಯೂಬಾದ ಒಡಲಲ್ಲಿದ್ದ ಸಂಪತ್ತೆಲ್ಲಾ ಸ್ಪೇನ್ ಪಾಲಾಗುತ್ತಿದ್ದಂತೆಯೇ ಕ್ಯೂಬಾದಲ್ಲಿ ನೆಲೆನಿಂತಿದ್ದ ಸ್ಪೇನ್ ಜನರಿಗೆ ಇನ್ನು ತಮ್ಮ ‘ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯೇ ಗತಿ’ ಎಂದು ಗೊತ್ತಾಯಿತು. ಕ್ಯೂಬಾದಲ್ಲಿ ನೆಲೆ ನಿಂತವರು ಸ್ಪೇನ್‌ನ ವಿರುದ್ಧ ತಿರುಗಿಬಿದ್ದರು. ಕ್ಯೂಬಾದಲ್ಲಿ ಹೋರಾಟದ ಅಧ್ಯಾಯ ಆರಂಭವಾಯಿತು. ೧೮೧೮ರಲ್ಲಿ ತಿರುಗಿಬಿದ್ದವರನ್ನೆಲ್ಲಾ ಸ್ಪೇನ್ ಬಲಿ

ತೆಗೆದುಕೊಂಡಿತು. ಮೇಲಿಂದ ಮೇಲೆ ಹೋರಾಟ ನಡೆಯಿತು. ೧೮೨೬, ೧೮೨೮, ೧೮೩೦, ೧೮೪೪, ೧೮೫೧, ೧೮೫೫...

ಕ್ಯೂಬನ್ನರು ಸರ್ಕಾರದ ಹುದ್ದೆಗಳಲ್ಲಿ ಇರಬಾರದು, ಕ್ಯೂಬನ್ನರು ದುಡಿಮೆ ಮಾಡಬಾರದು, ವ್ಯಾಪಾರ ಮಾಡಬಾರದು, ಕಪ್ಪು ಜನ ಬಿಳಿಯ ಜನರ ನಡುವೆ ಮದುವೆ ನಡೆಯಬಾರದು. ಸ್ಪೇನ್‌ನವರಿಗೆ ಕಾನೂನು ವಿಚಾರಣೆ ಇಲ್ಲ. ಕ್ಯೂಬನ್ನರು ತಮ್ಮ ಮನೆಯಲ್ಲಿ ಅತಿಥಿಗಳನ್ನು ಉಳಿಸಿಕೊಳ್ಳಬಾರದು. ಸೈನ್ಯದ ಅನುಮತಿಯಿಲ್ಲದೆ ಎಲ್ಲೂ ಪ್ರಯಾಣಿಸಬಾರದು – ಹೊಸ ನಿಯಮಗಳು ಜಾರಿಗೆ ಬಂದವು. ಈ ಮಧ್ಯೆಯೇ ೧೮೬೮ರಲ್ಲಿ ಸಕ್ಕರೆ ಕಾರ್ಖಾನೆಯೊಂದರ ಮಾಲೀಕ ಮಾಸಿಯಾ ತನ್ನಲ್ಲಿದ್ದ ಎಲ್ಲಾ ಗುಲಾಮರನ್ನು ಬಿಡುಗಡೆ ಮಾಡಿದ. ಯಾರಾ ಪ್ರಾಂತ್ಯದಲ್ಲಿ ಸ್ಪೇನ್‌ನವರ ಮೇಲೆ ನಡೆದ ದಾಳಿಗೆ ಮುಂದಾಳತ್ವ ಕೊಟ್ಟ. ಓರಿಯೆಂಟ್ ಪ್ರಾಂತ್ಯದಲ್ಲಿ ಅತಿದೊಡ್ಡ ಹೋರಾಟ ಆರಂಭವಾಯಿತು. ಕ್ಯೂಬಾದ ಸ್ವಾತಂತ್ರ್ಯ ಹೋರಾಟದಲ್ಲಿ ಅತಿದೊಡ್ಡ ಬಲಿದಾನ ಕಂಡ ಪ್ರತಿಭಟನೆ ಇದು. ಈ ಯುದ್ಧದಲ್ಲಿ ೪ ಲಕ್ಷ ಕ್ಯೂಬನ್ನರು ೮೦ ಸಾವಿರ ಸ್ಪೇನ್ ಸೈನಿಕರು ಸತ್ತರು ಎಂಬ ಅಂದಾಜಿದೆ.

ಈ ಮಧ್ಯೆಯೇ ಕ್ಯೂಬಾದ 'ಕ್ರಾಂತಿಯ ಕನಸುಗಳ ಹರಿಕಾರ' ಜೋಸ್ ಮಾರ್ಟಿ ಹೋರಾಟಕ್ಕೆ ಧುಮುಕಿದರು. ಮಾರ್ಟಿಯ ಚಿಂತನೆ, ಸ್ಪಷ್ಟ ಯೋಜನೆಗಳು ಸ್ಪೇನ್‌ಗೆ ಆತಂಕ ತಂದಿತು. ಮಾರ್ಟಿಯನ್ನು ಕ್ಯೂಬಾದಿಂದ ಉಚ್ಚಾಟಿಸಿದರು. ಮಾರ್ಟಿ ಅರ್ಧ ಪ್ರಪಂಚವನ್ನೇ ಸುತ್ತಿ ಇನ್ನಷ್ಟು ಜ್ಞಾನ, ಅನುಭವ, ಹೋರಾಟದ ತಂತ್ರ ಕಲಿತು ಬಂದರು. ೧೮೯೫ರ ಮೇ ೧೮ರಂದು ಮಾರ್ಟಿ ಗೆಳೆಯನೊಬ್ಬನಿಗೆ ಪತ್ರ ಬರೆದರು.

ಅಮೇರಿಕನ್ ಸಾಮ್ರಾಜ್ಯಶಾಹಿಯ ಅಪಾಯದ ಎಚ್ಚರಿಕೆ ನೀಡಿದ ಪತ್ರ ಇದು. ಮಾರನೆಯ ದಿನವೇ ಗುಂಡೇಟಿನಿಂದ ಮಾರ್ಟಿ ಮೃತಪಟ್ಟರು.

ಆ ವೇಳೆಗಾಗಲೇ ಸಕ್ಕರೆ ಅಮೇರಿಕಾದವರನ್ನು ಕೈಬೀಸಿ ಕರೆದಿತ್ತು. ಕ್ಯೂಬಾದಲ್ಲಿ ಅಮೇರಿಕನ್ನರು ನಿಧಾನವಾಗಿ ಹರಡಿಕೊಳ್ಳತೊಡಗಿದರು.

ಸ್ವಾತಂತ್ರ್ಯ ಹೋರಾಟ ಬಿರುಸಾಗುತ್ತಿದ್ದಂತೆ ಸ್ಪೇನ್ ಸಹಾ ಅದನ್ನು ನಿಗ್ರಹಿಸಲು ಹಿಂಸೆಯನ್ನು ಕೈಗೆತ್ತಿಕೊಂಡಿತು. ಸ್ಪೇನ್‌ನ ಜನರಲ್ ಯಾತನಾ ಶಿಬಿರಗಳನ್ನು ತೆರೆದರು. ಸಾವಿರಾರು ಜನ ಈ ಶಿಬಿರಗಳಲ್ಲಿ ಆಹಾರ ಇಲ್ಲದೆ, ಕಾಯಿಲೆಗಳಿಂದ ನರಳಿ ಸತ್ತರು. ಆಗ ಮಾಕ್ಸಿಮೋ ಗೋಮೆಜ್ ಸ್ಪೇನ್‌ನ ಆರ್ಥಿಕ ಆದಾಯದ ಮೂಲಕ್ಕೇ ಪೆಟ್ಟುಕೊಟ್ಟರು. ಸ್ಪೇನ್‌ನ ಒಡೆತನದಲ್ಲಿದ್ದ ಸಕ್ಕರೆ ಕಾರ್ಖಾನೆಗಳು ಮುಷ್ಕರ ನಡೆಸುವಂತೆ ಕರೆ ನೀಡಿದರು. ಇಡೀ ಕ್ಯೂಬಾದಲ್ಲಿ ಉತ್ಪಾದನಾ ಚಟುವಟಿಕೆ ಸ್ತಬ್ಧವಾಯಿತು.

ಅದುವರೆಗೂ ಅಮೇರಿಕಾ ಕೇವಲ ೯೦ ಕಿ.ಮೀ. ದೂರದಲ್ಲಿ ನಡೆಯುತ್ತಿದ್ದ ಈ ಯುದ್ಧವನ್ನು ಸುಮ್ಮನೆ ನೋಡುತ್ತಾ ಕುಳಿತಿತ್ತು. ಯಾವಾಗ ಸಕ್ಕರೆ ಕಾರ್ಖಾನೆಗಳು ಬಂದ್ ಆದವೋ ಅಮೇರಿಕಾದ ಇಡೀ ವ್ಯಾಪಾರಿಗಳಿಗೂ ಹೊಡೆತ ಬಿತ್ತು. ಸರಿ ಕ್ಯೂಬಾದಲ್ಲಿರುವ ಅಮೇರಿಕನ್ನರ ಆಸ್ತಿಪಾಸ್ತಿಗಳನ್ನು ರಕ್ಷಿಸಲು ಅಧ್ಯಕ್ಷ ವಿಲಿಯಂ ಮ್ಯಾಕಿನ್ಲೆ ಕ್ಯೂಬಾಗೆ 'ಮೈನೆ' ಯುದ್ಧನೌಕೆ ಕಳಿಸಿಕೊಟ್ಟರು. ಏನಾಯಿತೋ ಎಂತಾಯಿತೋ ಯುದ್ಧನೌಕೆ ಹವಾನಾದ ಬಂದರಿನಲ್ಲಿ ಸ್ಫೋಟಗೊಂಡಿತು.

ಅಮೇರಿಕಾ ಕೆಂಗಣ್ಣು ಬಿಟ್ಟು ಸ್ಪೇನ್‌ನ ಮೇಲೆ ಯುದ್ಧ ಸಾರಿತು. ಕೇವಲ ಮೂರು ತಿಂಗಳಲ್ಲಿ ಸ್ಪೇನ್ ಅಮೇರಿಕಾಗೆ ಶರಣಾಗಿ ಹೋಯಿತು. ೧೮೯೮ ಡಿಸೆಂಬರ್ ೧೦ರಂದು ಪ್ಯಾರಿಸ್ ಒಪ್ಪಂದ ನಡೆಯಿತು.

೪೦೦ ವರ್ಷಗಳ ಕಾಲ ಆಳಿದ ಸ್ಪೇನ್ ವಿರುದ್ಧ ಸತತವಾಗಿ ಒಂದು ಶತಮಾನ ರಕ್ತಸಿಕ್ತ ಹೋರಾಟ ನಡೆಸಿದ ಕ್ಯೂಬನ್ನರು ಇನ್ನೇನು ಕ್ಯೂಬಾದ ಧ್ವಜ ಮೇಲೇರಿಸಿದೆವು ಎನ್ನುವಾಗ ಕ್ಯೂಬಾ ಅಮೇರಿಕಾದ ಪಾಲಾಯಿತು. ಕ್ಯೂಬಾವನ್ನೇ ಮೂಲೆಗಿಟ್ಟು ಪ್ಯಾರಿಸ್‌ನಲ್ಲಿ ಅಮೇರಿಕಾ–ಸ್ಪೇನ್ ಒಪ್ಪಂದ ಮಾಡಿಕೊಂಡವು. ಸ್ಪೇನ್ ಕ್ಯೂಬಾದ ಮೇಲಿದ್ದ ಎಲ್ಲಾ ಅಧಿಕಾರವನ್ನು ಅಮೇರಿಕಾಗೆ ಬಿಟ್ಟುಕೊಟ್ಟಿತು. ಸ್ಪೇನ್‌ನ ಜಾಗದಲ್ಲಿ ಈಗ ಅಮೇರಿಕಾ ಕುಳಿತುಕೊಂಡಿತು.

**(ಆಕರ: ನನ್ನೊಳಗಿನ ಹಾಡು ಕ್ಯೂಬಾ, ಲೋಹಿಯಾ ಪ್ರಕಾಶನ, ೨೦೦೦, ನಂತರದಲ್ಲಿ ಬಹುರೂಪಿ ಪ್ರಕಾಶನ, ಬೆಂಗಳೂರು, ೨೦೧೮)**

# ೩. ಪಂಜರದ ಪಕ್ಷಿ

– ಮೂಲ: ಮಾಯಾ ಏಂಜೆಲೊ
ಅನು: ಎಂ.ಆರ್. ಕಮಲ

ಸ್ವಚ್ಛಂದ ಗಾಳಿಯಲಿ ತೂಗುತ್ತ
ಹರಿವ ತೊರೆಯಲ್ಲಿ ತೇಲುತ್ತ
ಸೂರ್ಯನ ಕೇಸರಿ ಕಿರಣಗಳಲ್ಲಿ
ರೆಕ್ಕೆಗಳ ಅದ್ದಿ
ಆಗಸವೇ ತನ್ನದೆಂದುಕೊಳ್ಳುತ್ತೆ

ಆದರೆ,
ಚಿಕ್ಕ ಪಂಜರದಲ್ಲಿ
ರೆಕ್ಕೆ ಬಡಿವ ಪುಟ್ಟಹಕ್ಕಿ
ಸರಳುಗಳ ಸಂದಿಯಲಿ
ಆಗೀಗ ಇಣಕುತ್ತೆ
ರೆಕ್ಕೆಗಳು ಹೊಲಿದಿವೆ
ಕಾಲುಗಳು ಕಟ್ಟಿವೆ
ಹೀಗಾಗಿ ಹಾಡಲು ಬಾಯಿತೆರೆಯುತ್ತೆ

ಪಂಜರದ ಹಕ್ಕಿ
ಕಂಪಿಸುವ ದನಿಯಲ್ಲಿ
ಕಾಣದೂರನ್ನು ಕುರಿತು
ಕಾಣುವಾಸೆಯಲಿ ಹಾಡುತ್ತೆ
ದೂರದ ಬೆಟ್ಟಗಳಲ್ಲಿ
ಹಕ್ಕಿಯ ರಾಗ ಮಾರ್ದನಿಸುತ್ತೆ
ಯಾಕೆಂದರೆ – ಪಂಜರದ ಹಕ್ಕಿ
ಸ್ವಾತಂತ್ರ್ಯ ಗೀತೆಯ ಹಾಡುತ್ತೆ

ಸ್ವಚ್ಛಂದ ಹಕ್ಕಿ ತಂಗಾಳಿಯ ನೆನೆಯುತ್ತೆ
ಮುಂಜಾವಿನ ಹೊಳೆವ ಹುಲ್ಲುಗಾವಲಲಿ
ಕೊಬ್ಬಿದ ಹುಳುಗಳಿಗೆ ಹೊಂಚುತ್ತ
ಆಗಸವೇ ತನ್ನದೆಂದುಕೊಳ್ಳುತ್ತೆ
ಪಂಜರದ ಹಕ್ಕಿ ಕನಸುಗಳ ಗೋರಿಯಲಿ ನಿಲ್ಲುತ್ತೆ
ಸಿಂಹ ಸ್ವಪ್ನಗಳ ಕಂಡು ಅದರ ನೆರಳೂ ಬೆಚ್ಚುತ್ತೆ
ರೆಕ್ಕೆಗಳು ಹೊಲಿದಿವೆ, ಕಾಲುಗಳು ಕಟ್ಟಿವೆ
ಹೀಗಾಗಿ ಹಾಡಲು ಬಾಯಿ ತೆರೆಯುತ್ತೆ

ಪಂಜರದ ಹಕ್ಕಿ
ಕಂಪಿಸುವ ದನಿಯಲ್ಲಿ
ಕಾಣದೂರನ್ನು ಕುರಿತು

ಕಾಣುವಾಸೆಯಲಿ ಹಾಡುತ್ತೆ
ದೂರದ ಬೆಟ್ಟಗಳಲ್ಲಿ
ಹಕ್ಕಿಯ ರಾಗ ಮಾರ್ದನಿಸುತ್ತೆ
ಯಾಕೆಂದರೆ – ಪಂಜರದ ಹಕ್ಕಿ
ಸ್ವಾತಂತ್ರ್ಯ ಗೀತೆಯ ಹಾಡುತ್ತೆ

**(ಆಕರ: ಸೆರೆ ಹಕ್ಕಿ ಹಾಡುವುದು ಏಕೆಂದು ಬಲ್ಲೆ, ಕಥನ ಪ್ರಕಾಶನ, ಬೆಂಗಳೂರು, ೨೦೦೭)**

# ೪. ನನ್ನದೊಂದು ಕನಸಿದೆ (ಓದು ಪಠ್ಯ)

– ಮಾರ್ಟಿನ್ ಲೂಥರ್ ಕಿಂಗ್ ಜೂ.

ಅನು: ಕೆ. ಪುಟ್ಟಸ್ವಾಮಿ

'ನಮ್ಮ ದೇಶದ ಚರಿತ್ರೆಯಲ್ಲಿ ಮಾನವನ ಸ್ವಾತಂತ್ರ್ಯಕ್ಕಾಗಿ ನಡೆದ ಬಹುದೊಡ್ಡ ಜನಾಂದೋಲನವೆಂಬ ಖ್ಯಾತಿಯ ಘಟನೆ ಇಂದು ಜರುಗಲಿದೆ. ಈ ಚರಿತ್ರಾರ್ಹ ದಿನದಂದು ನಿಮ್ಮ ಜೊತೆ ಸೇರಲು ನನಗೆ ತುಂಬಾ ಸಂತೋಷವಾಗುತ್ತಿದೆ.

ನೂರು ವರ್ಷಗಳ ಹಿಂದೆ ಅಮೆರಿಕಾದ ಮಹಾನುಭಾವನೊಬ್ಬ[೧] ಕರಿಯರ ಬಿಡುಗಡೆಗಾಗಿ ವಿಮೋಚನಾ ಘೋಷಣೆಗೆ ಸಹಿ ಹಾಕಿದ. ಇಂದು ಆತನ ನೆರಳಿನಡಿಯಲ್ಲಿ ನಾವು ಒಗ್ಗೂಡಿದ್ದೇವೆ. ಅನ್ಯಾಯದ ಜ್ವಾಲೆಯಲ್ಲಿ ಸುಟ್ಟುಹೋಗುತ್ತಿದ್ದ ಲಕ್ಷಾಂತರ ನೀಗ್ರೋ ಗುಲಾಮರಿಗೆ ಆ ಚಾರಿತ್ರಿಕ ಶಾಸನವು ಭರವಸೆಯ ಕಿರಣವಾಗಿ ಹೊಮ್ಮಿತು. ಕರಿಯರ ಬಾಳ ಬಂಧನದ ಕಾಳರಾತ್ರಿಯು ಕಳೆದು ಬಿಡುಗಡೆಯ ಹರುಷದ ಅರುಣೋದಯದ ರೂಪಕ, ಆ ಶಾಸನ.

ಆದರೆ ಒಂದುನೂರು ವರ್ಷಗಳ ನಂತರವೂ ಕರಿಯರು (ನೀಗ್ರೋ) ಇನ್ನೂ ಸ್ವತಂತ್ರರಾಗಿಲ್ಲ. ವಿಮೋಚನೆಯ ಶಾಸನ ಘೋಷಣೆಯಾದ ಒಂದು ಶತಮಾನದ ನಂತರವೂ ಜನಾಂಗ ಭೇದ ಸಂಕೋಲೆಯಲ್ಲಿ ಮತ್ತು ಪ್ರತ್ಯೇಕತಾವಾದದ ಬೇಡಿಯಲ್ಲಿ ಸಿಲುಕಿರುವ ಕರಿಯ ಹೆಳವನಾಗಿದ್ದಾನೆ.

ಒಂದು ನೂರು ವರ್ಷಗಳ ತರುವಾಯ ಭೌತಿಕ ಸಂಪತ್ತಿನ ಸಾಗರದ ನಡುವೆ ಇರುವ ದಾರಿದ್ರ್ಯದ ಒಂಟಿ ದ್ವೀಪದಲ್ಲಿ ಕರಿಯ ದಿನ ದೂಡುತ್ತಿದ್ದಾನೆ. ಒಂದು ನೂರು ವರ್ಷಗಳ ನಂತರ ಅಮೆರಿಕಾ ಸಮಾಜದ ಮೂಲೆಯೊಂದರಲ್ಲಿ ನೋವಿನಿಂದ ಅಳುತ್ತಾ ತನ್ನದೇ ನಾಡಿನಲ್ಲಿ ದೇಶಭ್ರಷ್ಟನಾಗಿದ್ದಾನೆ.[೨] ಅಂಥ ನಾಚಿಕೆಯ ಸ್ಥಿತಿಯೊಂದಕ್ಕೆ ಕನ್ನಡಿ ಹಿಡಿಯಲು, ನಾಟಕೀಯಗೊಳಿಸಲು ನಾವೆಲ್ಲ ಇಲ್ಲಿ ಸೇರಿದ್ದೇವೆ.

ಒಂದರ್ಥದಲ್ಲಿ ಒಂದು ಚೆಕ್‌ನ್ನು ನಗದಾಗಿ ಪರಿವರ್ತಿಸಿಕೊಳ್ಳಲು ನಾವು ನಮ್ಮ ದೇಶದ ರಾಜಧಾನಿಗೆ ಬಂದಿದ್ದೇವೆ. ನಮ್ಮ ನಮ್ಮ ಗಣರಾಜ್ಯದ ರೂವಾರಿಗಳು ಅಮೋಘವಾದ ಪದಗಳಿಂದ ಸಂವಿಧಾನವನ್ನು ಮತ್ತು ಸ್ವಾತಂತ್ರ್ಯದ ಘೋಷಣೆಯನ್ನು ರಚಿಸಿದಾಗ ಒಂದು ವಾಗ್ದಾನ ಪತ್ರಕ್ಕೆ ಸಹಿ ಮಾಡಿದ್ದರು. ಆ ವಾಗ್ದಾನಕ್ಕೆ ಅಮೆರಿಕನ್ನರೆಲ್ಲರೂ ಬಾಧ್ಯಸ್ಥರು. ಈ ವಾಗ್ದಾನ ಪತ್ರವು ಸಕಲರಿಗೂ– ಹೌದು ಕರಿಯರು ಮತ್ತು ಬಿಳಿಯರು ಇಬ್ಬರಿಗೂ– ಬದುಕಿನ ಸಮಾನ ಹಕ್ಕುಗಳನ್ನು ವಾಗ್ದಾನ ಮಾಡಿತ್ತು; 'ಬದುಕು, ವಿಮೋಚನೆ ಮತ್ತು ಸುಖವನ್ನು ಅರಸುವ' ಅನಿರ್ಬಂಧಿತ ಹಕ್ಕುಗಳ ಖಾತರಿಯನ್ನು ನೀಡಿತ್ತು.

ತನ್ನ ರಾಷ್ಟ್ರದ ಕಪ್ಪುಜನರಿಗೆ ಸಂಬಂಧಿಸಿದಂತೆ ಅಮೆರಿಕಾವು ಈ ವಾಗ್ದಾನ ಪತ್ರವನ್ನು ಉಪೇಕ್ಷಿಸಿರುವುದು ಸ್ಪಷ್ಟವಾಗಿದೆ. ನೀಗ್ರೋ (ಕರಿಯ) ಜನಾಂಗಕ್ಕೆ ಅಮೆರಿಕಾ ನಗದು ಮಾಡಿಕೊಳ್ಳಲಾಗದ, 'ಹಣದ ಕೊರತೆಯಿದೆ'ಯೆಂದು ಅಂಕಿತ ಹಾಕಿಸಿಕೊಂಡು ವಾಪಸ್ಸು ಬಂದ ಚೆಕ್‌ನ್ನು ನೀಡಿದೆ.

ಆದರೆ ನ್ಯಾಯದ ಬ್ಯಾಂಕು ದಿವಾಳಿಯಾಗಿರುವುದನ್ನು ನಂಬಲು ನಾವು ತಯಾರಿಲ್ಲ. ಈ ರಾಷ್ಟ್ರದ ಅವಕಾಶಗಳ ಗುಪ್ತನಿಧಿಯಲ್ಲಿ ಹಣವಿಲ್ಲವೆಂಬುದನ್ನು ನಂಬಲು ತಯಾರಿಲ್ಲ. ಹಾಗಾಗಿ ಸ್ವಾತಂತ್ರ್ಯದ ಶ್ರೀಮಂತಿಕೆಯನ್ನು ಮತ್ತು ನ್ಯಾಯದ ಭದ್ರತೆಯನ್ನು ನಮಗೆ ನೀಡುವ ಈ ಚೆಕ್‌ನ್ನು ನಗದು ಮಾಡಿಕೊಳ್ಳಲು ಬಂದಿದ್ದೇವೆ.

ಪರಿಸ್ಥಿತಿಯ ತೀವ್ರತೆ ಮತ್ತು ಗಾಂಭೀರ್ಯವನ್ನು ಅಮೆರಿಕಾಗೆ ಮನವರಿಕೆ ಮಾಡಿಕೊಡಲು ನಾವು ಈ ಪವಿತ್ರ ತಾಣಕ್ಕೆ ಬಂದಿದ್ದೇವೆ. ವಿಶ್ರಾಂತಿ ತೆಗೆದುಕೊಳ್ಳುವಂಥ ಸುಖಭೋಗದ ಸಮಯ ಇದಲ್ಲ. ಕಾಲಕ್ರಮೇಣ ಎಲ್ಲವೂ ಸರಿಹೋಗುತ್ತದೆಂಬ ನಿಧಾನ ನೀತಿಯನ್ನು ಅನುಸರಿಸಲು ಇದು ಸಮಯವಲ್ಲ. ಉದ್ವೇಗಕ್ಕೆ ಉಪಶಮನ ಔಷಧಿಯನ್ನು ಸೇವಿಸುವ ಸಮಯವೂ ಇದಲ್ಲ. ಪ್ರಜಾತಂತ್ರವು ನೀಡಿದ ವಚನಗಳನ್ನು ಸಾಕಾರಗೊಳಿಸುವ ಕಾಲವಿದು. ಇದು ಪ್ರತ್ಯೇಕವಾದವೆಂಬ ಪಾಳುಬಿದ್ದ ಮತ್ತು ಕತ್ತಲು ತುಂಬಿದ ಕಮರಿಯಿಂದ ಮೇಲೆ ಹತ್ತಿ ಜನಾಂಗೀಯ ನ್ಯಾಯದ ಬೆಳಕಿನ ದಾರಿಯಲ್ಲಿ ನಡೆಯಬೇಕಾದ ಕಾಲ. ಜನಾಂಗೀಯ ಅನ್ಯಾಯದ ಕಳ್ಳ ಉಸುಕಿನಲ್ಲಿ ಹೂತುಹೋಗುತ್ತಿರುವ ನಮ್ಮ ರಾಷ್ಟ್ರವನ್ನು ಹಿಡಿದೆತ್ತಿ ಭ್ರಾತೃತ್ವದ ಗಟ್ಟಿ ಬಂಡೆಯ ಮೇಲೆ ಇಡಬೇಕಾದ ಕಾಲ. ದೇವರ ಎಲ್ಲ ಮಕ್ಕಳಿಗೂ ನ್ಯಾಯವು ಸಮಾನವಾದದ್ದೆಂದು ಮನವರಿಕೆ ಮಾಡಿಕೊಡಬೇಕಾದ ಕಾಲ.

ಈ ಕ್ಷಣದ ತುರ್ತನ್ನು ಉಪೇಕ್ಷಿಸಿದರೆ ಅದು ರಾಷ್ಟ್ರಕ್ಕೆ ಅಪಾಯಕಾರಿ. ಸ್ವಾತಂತ್ರ್ಯ ಮತ್ತು ಸಮಾನತೆಯೆಂಬ ಉಲ್ಲಾಸದ ಶರತ್ಕಾಲವು ಸಾಕಾರವಾಗುವವರೆಗೆ ನೀಗ್ರೋ ಜನಾಂಗದವರ ಉರಿಬೇಸಗೆಯಂಥ ಅತೃಪ್ತಿ ಉಪಶಮನವಾಗದು. ೧೯೬೩ನೆಯ ಇಸವಿ ಅಂತ್ಯವಲ್ಲ. ಅದು ಆರಂಭ. ಕರಿಯರನ್ನು ಉಪೇಕ್ಷಿಸುವುದೇ ಸೂಕ್ತವೆಂಬ ನಂಬಿಕೆಯಿಂದ ಸಂತುಷ್ಟರಾಗಿರುವ ಜನರಿಗೆ ಆಘಾತ ಕಾದಿದೆ. ಕರಿಯರಿಗೆ ನಾಗರಿಕ ಹಕ್ಕುಗಳು ಪ್ರದಾನವಾಗುವವರೆಗೆ ಅಮೆರಿಕದಲ್ಲಿ ವಿಶ್ರಾಂತಿಯಾಗಲೀ, ನೆಮ್ಮದಿಯಾಗಲೀ ಇರದು. ನ್ಯಾಯದ ಬೆಳಕಿನ ದಿನ ಉದಯವಾಗುವವರೆಗೆ ಬಂಡಾಯದ ಸುಂಟರಗಾಳಿ ನಮ್ಮ ರಾಷ್ಟ್ರದ ತಳಹದಿಯನ್ನು ಅಲುಗಾಡಿಸುತ್ತಲೇ ಇರುತ್ತದೆ.

ನ್ಯಾಯದ ಅರಮನೆಗೆ ಮುನ್ನಡೆಸುವ ಬೆಚ್ಚನೆಯ ಹೊಸ್ತಿಲಲ್ಲಿ ನಿಂತಿರುವ ನನ್ನ ಜನರಿಗೆ ಕೆಲವು ವಿಷಯಗಳನ್ನು ನಾನು ಹೇಳಲೇಬೇಕಾದ ಮಾತಿದೆ. ನಮ್ಮ ನ್ಯಾಯಯುತ ಹಕ್ಕನ್ನು ಪಡೆಯುವ ಹೋರಾಟದ ಪಯಣದಲ್ಲಿ ತಪ್ಪು ಕೆಲಸಗಳನ್ನು ಮಾಡಿ ಪಾಪಪ್ರಜ್ಞೆಗೆ ನಾವು ಈಡಾಗಬಾರದು. ನಮ್ಮ ಸ್ವಾತಂತ್ರ್ಯದ ದಾಹವನ್ನು ಕಹಿ ಮತ್ತು ದ್ವೇಷದ ಬಟ್ಟಲಿನಲ್ಲಿರುವ ನೀರಿನಿಂದ ತಣಿಸಿಕೊಳ್ಳದಿರೋಣ. ನಾವು ನಮ್ಮ ಸಂಘರ್ಷವನ್ನು ಸದಾ ಉನ್ನತವಾದ ಘನತೆ ಮತ್ತು ಶಿಸ್ತಿನಿಂದ ನಡೆಸೋಣ. ನಮ್ಮದು ಸೃಜನಶೀಲ ಪ್ರತಿಭಟನೆ. ಅದನ್ನು ಭೌತಿಕ ಹಿಂಸೆಯ ರೂಪಕ್ಕೆ ಕುಗ್ಗಿಸದಿರೋಣ. ನಾನು ಮತ್ತೆ ಮತ್ತೆ ಒತ್ತಿ ಹೇಳುತ್ತಿದ್ದೇನೆ– ಭೌತಿಕ ಬಲವನ್ನು ಆತ್ಮದ ಬಲದಿಂದ ಎದುರಿಸುವಂತಹ ಉದಾತ್ತಮಟ್ಟಕ್ಕೆ ನಾವು ಏರಬೇಕು.

ನೀಗ್ರೋ ಸಮುದಾಯವನ್ನು ಆವರಿಸಿಕೊಂಡಿರುವ ಅಮೋಘವಾದ ಈ ಹೊಸ ಬಗೆಯ ಆವೇಶವು (ಮಿಲಿಟೆನ್ಸಿ) ಎಲ್ಲ ಬಿಳಿಯರಲ್ಲಿ ಅಪನಂಬಿಕೆ ಮೂಡುವಂಥ ಕಾರ್ಯಗಳಿಗೆ ನಮ್ಮನ್ನು ಮುನ್ನಡೆಸಬಾರದು. ಯಾಕೆಂದರೆ, ಅನೇಕ ಬಿಳಿಯ ಜನರು ಇಲ್ಲಿ ಬಂದಿದ್ದಾರೆ. ಅಂಥ ಬಿಳಿಯ ಸೋದರರು ತಮ್ಮ ಭವಿಷ್ಯವೂ ಕರಿಯರ ಭವಿಷ್ಯದೊಡನೆ ತಳುಕು ಹಾಕಿಕೊಂಡಿದೆಯೆಂಬ ನಂಬಿಕೆಯಿಂದ ಬಂದಿದ್ದಾರೆ. ಬಿಳಿಯರ ಬಿಡುಗಡೆಯು ಕರಿಯರ ವಿಮೋಚನೆಯೊಡನೆ ಬಿಡಿಸಲಾಗದ ಬಂಧನದಿಂದ ಕೂಡಿರುವುದನ್ನು ಅರಿತುಕೊಳ್ಳಲು ಅವರು ಬಂದಿದ್ದಾರೆ.

ನಾವು ಏಕಾಂಗಿಯಾಗಿ ನಡೆಯಲಾರೆವು.

ನಾವಾಗೀ ಹಾದಿಯಲ್ಲಿ ನಡೆಯುತ್ತಿರುವಾಗ ಸದಾ ಮುನ್ನಡೆಯಲೇಬೇಕು ಎಂಬ ಪ್ರತಿಜ್ಞೆಯನ್ನು ಮಾಡೋಣ.

ನಾವು ಹಿಂದಕ್ಕೆ ಸರಿಯಲಾರೆವು.

'ನಿಮಗೆ ಯಾವಾಗ ತೃಪ್ತಿಯಾಗುತ್ತದೆ?' ಎಂದು ನಾಗರಿಕ ಹಕ್ಕುಗಳ ಭಕ್ತರನ್ನು ಪ್ರಶ್ನಿಸುವ ಜನರಿದ್ದಾರೆ. ಪೊಲೀಸರ ಅವರ್ಣನೀಯ ಕ್ರೌರ್ಯಕ್ಕೆ ನೀಗ್ರೋಗಳು ಬಲಿಯಾಗುವುದು ನಿಲ್ಲುವವರೆಗೆ ನಮಗೆ ತೃಪ್ತಿಯಿಲ್ಲ. ಪ್ರಯಾಣದಿಂದ ಬಳಲಿದ ನಮ್ಮ ದೇಹಕ್ಕೆ ಆಯಾಸ ಪರಿಹರಿಸಿಕೊಳ್ಳಲು ಹೆದ್ದಾರಿಯ ವಸತಿ ಗೃಹಗಳಲ್ಲಿ, ನಗರದ ಹೋಟೇಲುಗಳಲ್ಲಿ ಮುಕ್ತ ಸ್ಥಳಾವಕಾಶ ದೊರೆಯುವವರೆಗೆ ನಮಗೆ ತೃಪ್ತಿಯಿಲ್ಲ. ನೀಗ್ರೋಗಳ ಮೂಲಭೂತವಾದ ಚಲನೆಯು ಸಣ್ಣ ಕರಿಯರ ಕೇರಿಯಿಂದ ಕರಿಯರ ದೊಡ್ಡ ಕೇರಿಗೆ ಮಾತ್ರ ಸೀಮಿತವಾದರೆ ನಮಗೆ ತೃಪ್ತಿಯಿಲ್ಲ. **'ಬಿಳಿಯರಿಗೆ ಮಾತ್ರ'** ಎಂಬ ಫಲಕವು ನಮ್ಮ ಮಕ್ಕಳ ಸ್ವಾಭಿಮಾನವನ್ನು ಅಳಿಸಿಹಾಕಿ, ಅವರ ಘನತೆಯ ಲೂಟಿಯಾಗುವುದನ್ನು ನಿಲ್ಲಿಸುವವರೆಗೆ ನಮಗೆ ತೃಪ್ತಿ ಎಂಬುದಿಲ್ಲ. ಎಲ್ಲಿಯವರೆಗೆ ಮಿಸಿಸಿಪಿಯ ಒಬ್ಬ ನೀಗ್ರೋ ಮತದಾನ ಮಾಡಲಾರನೋ ಅಲ್ಲಿಯವರೆಗೆ ಸಮಾಧಾನವೆಂಬುದಿಲ್ಲ. ಇಂಥ ಸ್ಥಿತಿಯಲ್ಲಿ ನ್ಯೂಯಾರ್ಕ್‌ನ ಕರಿಯನೊಬ್ಬ ತಾನು ಮತ ನೀಡುವುದು ನಿಷ್ಫಲವೆಂದು ನಂಬುತ್ತಾನೋ ಅಲ್ಲಿಯವರೆಗೆ ನಮಗೆ ತೃಪ್ತಿಯಿಲ್ಲ. ಎಲ್ಲಿಯವರೆಗೆ ನ್ಯಾಯವು ನೀರಿನಂತೆ ನೀರು ಪ್ರಶಾಂತವಾಗಿ ಹರಿಯುವುದಿಲ್ಲವೋ, ಸದಾಚಾರವು ತುಂಬಿದ ಮಹಾನದಿಯಂತೆ ಹರಿಯುವುದಿಲ್ಲವೋ, ಅಲ್ಲಿಯವರೆಗೆ ನಮಗೆ ತೃಪ್ತಿಯಾಗದು.[೩]

ಇಲ್ಲಿ ಅನೇಕರು ಸಂಕಷ್ಟಗಳನ್ನು ಉಂಡು ಮತ್ತು ಅಗ್ನಿ ಪರೀಕ್ಷೆಗಳನ್ನು ಎದುರಿಸಿ ಬಂದಿರುವುದನ್ನು ನಾನು ಮರೆತಿಲ್ಲ. ಕಿರಿದಾದ ಜೈಲಿನಿಂದ ಈಗ ತಾನೆ ಕೆಲವರು ಹೊರಬಂದಿದ್ದೀರಿ. ಎಲ್ಲಿ ಸ್ವಾತಂತ್ರ್ಯದ ಹುಡುಕಾಟವು ನಿಮ್ಮನ್ನು ಕಿರುಕುಳಗಳ ಚಂಡಮಾರುತಗಳಿಂದ ನರಳಿಸುತ್ತದೋ, ಮತ್ತು ಪೊಲೀಸರ ಪಾಶವೀ ಕ್ರೌರ್ಯದ ದಾಳಿಗಳು ತತ್ತರಿಸುವಂತೆ ಮಾಡುತ್ತವೆಯೋ ಅಂಥ ಪ್ರದೇಶಗಳಿಂದ ನಿಮ್ಮಲ್ಲಿ ಕೆಲವರು ಆಗಮಿಸಿದ್ದೀರಿ. ಸೃಜನಶೀಲ ವೇದನೆಯ ಅನುಭವಗಳಿಂದ

ಹಣ್ಣಾಗಿರುವವರು ನೀವಾಗಿದ್ದೀರಿ. ಸಂಕಷ್ಟದ ಅನುಭವವೇ ವಿಮೋಚನೆಯ ದಾರಿ ಎಂಬ ದೃಢ ನಿಷ್ಠೆಯ ನಿಮ್ಮ ಕಾಯಕವನ್ನು ಮುಂದುವರೆಸಿ.

ಈ ಪರಿಸ್ಥಿತಿಯು ಯಾವುದಾದರೊಂದು ರೀತಿಯಲ್ಲಿ ಬದಲಾಗುತ್ತದೆಂಬ ನಂಬಿಕೆಯಿಂದ ಮಿಸಿಸಿಪಿಗೆ ಹಿಂದಿರುಗಿ, ಅಲಬಾಮಾಗೆ ಹೋಗಿ, ಸೌತ್ ಕ್ಯಾರೊಲೀನಾಗೆ ಮರಳಿ ಹೋಗಿ. ಜಾರ್ಜಿಯಾಗೆ ನಡೆಯಿರಿ. ಲೂಸಿಯಾನಾಗೆ ಹೋಗಿ. ಉತ್ತರ ಪ್ರಾಂತ್ಯದ ನಗರಗಳ ಕೊಳಚೆ ಪ್ರದೇಶಗಳಿಗೆ ಮತ್ತು ಕೇರಿಗಳಿಗೆ ಮರಳಿ ಹೋಗಿ. ನಾವು ಈ ಹತಾಶೆಯ ಕಮರಿಯಲ್ಲೇ ತೊಳಲಾಡದಿರೋಣ.

ನನ್ನ ಗೆಳೆಯರೇ, ನಾನಿಂದು ಹೇಳುತ್ತೇನೆ– ಈ ದಿನದ ಮತ್ತು ನಾಳೆಯ ಸಂಕಷ್ಟಗಳನ್ನು ನಾವು ಎದುರಿಸಿದರೂ ಇನ್ನೂ ನನಗೊಂದು ಕನಸಿದೆ. ಅದು ಅಮೆರಿಕಾದ ಕನಸಿನಲ್ಲಿ ಬೇರೂರಿರುವ ಕನಸು.

ಒಂದಲ್ಲ ಒಂದು ದಿನ ಈ ರಾಷ್ಟ್ರವು 'ಎಲ್ಲ ಜನರೂ ಸಮಾನವಾಗಿ ಸೃಷ್ಟಿಯಾಗಿದ್ದಾರೆ' ಎಂಬ ತನ್ನ ರಾಷ್ಟ್ರಧರ್ಮದ ನಿಜವಾದ ಅರ್ಥಕ್ಕೆ ಎದ್ದು ನಿಂತು ಆ ನಂಬಿಕೆಯನ್ನು ನಿತ್ಯಜೀವನದಲ್ಲಿ ಬದುಕಿ ತೋರಿಸುತ್ತದೆ ಎಂಬ ಕನಸಿದೆ.

ಜಾರ್ಜಿಯಾದ ರೆಡ್‌ಹಿಲ್ಸ್‌ನಲ್ಲಿ[೪] ಮಾಜಿ ಗುಲಾಮರ ಮಕ್ಕಳು ಮತ್ತು ಅವರ ಮಾಜಿ ಯಜಮಾನರ ಮಕ್ಕಳು ಎಂದಾದರೊಂದು ದಿನ ಭ್ರಾತೃತ್ವದ ಮೇಜಿನ ಎದುರು ಕುಳಿತುಕೊಳ್ಳುತ್ತಾರೆಂಬ ಕನಸಿದೆ.

ಅನ್ಯಾಯದ ಬಾಣಲೆಯಲ್ಲಿ ಬೇಯುತ್ತಿರುವ, ದಮನದಲ್ಲಿ ತೊಡಗಿರುವಂಥ ಮಿಸಿಸಿಪಿ ರಾಜ್ಯವೂ ಒಂದಲ್ಲ ಒಂದು ದಿನ ಸ್ವಾತಂತ್ರ್ಯ ಮತ್ತು ನ್ಯಾಯದ ಜೀವಸೆಲೆಯಾಗಿ ಪರಿವರ್ತನೆಯಾಗಬಹುದು ಎಂಬ ಕನಸಿದೆ.

ಒಂದಲ್ಲ ಒಂದು ದಿನ ಮೈಬಣ್ಣದ ಬದಲು ತಾವು ಮೈಗೂಡಿಸಿಕೊಂಡ ಸದ್ಗುಣಗಳನ್ನು ಆಧರಿಸಿ ವ್ಯಕ್ತಿತ್ವವನ್ನು ನಿರ್ಧರಿಸುವಂಥ ರಾಷ್ಟ್ರದಲ್ಲಿ ನನ್ನ ನಾಲ್ವರು ಕಂದಮ್ಮಗಳು ಬದುಕುತ್ತಾರೆಂಬ ಕನಸು ನನಗಿದೆ.

ವಿಷ ತುಂಬಿಕೊಂಡ ಉಚ್ಚಕುಲವಾದಿಗಳೇ ತುಂಬಿರುವ ಅಲಬಾಮಾದಲ್ಲಿ... 'ಹುಟ್ಟಡಗಿಸುತ್ತೇನೆ', 'ಅಡ್ಡಿಪಡಿಸುತ್ತೇನೆ' ಎಂಬ ಪದಗಳನ್ನೇ ಅರಚುವ ಗವರ್ನರ್[೫] ಇರುವ ಅಲಬಾಮಾದಲ್ಲಿ, ಎಂದಾದರೊಂದು ದಿನ ಪುಟಾಣಿ ಕರಿಯ ಹುಡುಗ–ಹುಡುಗಿಯರು ಪುಟಾಣಿ ಬಿಳಿಯ ಹುಡುಗ–ಹುಡುಗಿಯರ ಕೈಹಿಡಿದುಕೊಂಡು ಸೋದರ ಸೋದರಿಯರಂತೆ ಹೆಜ್ಜೆ ಹಾಕುವುದು ಸಾಧ್ಯವಾಗುತ್ತದೆ ಎಂಬ ಕನಸಿದೆ.

ಇಂದು ನನಗೊಂದು ಕನಸಿದೆ.

ಒಂದು ದಿನ ಆಳವಾದ ಕಮರಿಗಳೆಲ್ಲ ಮೇಲೇಳುತ್ತವೆ; ಉನ್ನತವಾದ ಪರ್ವತಗಳು ಕುಸಿಯುತ್ತವೆ; ಹಳ್ಳ ದಿಣ್ಣೆಯ ಪ್ರದೇಶಗಳೆಲ್ಲ ಸಮಾನವಾಗುತ್ತವೆ. ವಕ್ರವಾಗಿರುವ ಸ್ಥಳಗಳು ನೇರವಾಗುತ್ತವೆ; ದೇವರ ವೈಭವವು ಅನಾವರಣಗೊಳ್ಳುತ್ತದೆ; ರಕ್ತಮಾಂಸ ತುಂಬಿದ ಎಲ್ಲ ಮಾನವರು ಒಟ್ಟಾಗಿ ಆ ದೈವ ಮಹಿಮೆಯ ದರ್ಶನ ಪಡೆಯುತ್ತಾರೆಂಬ ಕನಸು ನನಗಿದೆ.

ಇದು ನಮ್ಮ ಭರವಸೆ; ಇದೇ ನಂಬಿಕೆಯೊಡನೆ ನಾನು ದಕ್ಷಿಣ ಪ್ರಾಂತ್ಯಕ್ಕೆ ಹಿಂದಿರುಗುತ್ತೇನೆ. ಈ ನಂಬಿಕೆಯಿಂದ ಸಂಕಷ್ಟದ ಪರ್ವತವನ್ನು ಛಿದ್ರಗೊಳಿಸಿ ಭರವಸೆಯ ಶಿಲೆಗಳನ್ನು ರೂಪುಗೊಳಿಸುವುದು ನಮಗೆ ಸಾಧ್ಯವಾಗುತ್ತದೆ. ಈ ನಂಬಿಕೆಯಿಂದ ನಮ್ಮ ರಾಷ್ಟ್ರದಲ್ಲಿರುವ ವೈಷಮ್ಯದ ಕರ್ಕಶವನ್ನು ಸೋದರತೆಯ ಸ್ವರಮೇಳವನ್ನಾಗಿ ಪರಿವರ್ತಿಸುವುದು ಸಾಧ್ಯವಾಗುತ್ತದೆ. ಈ ನಂಬಿಕೆಯಿಂದ ನಾವೆಲ್ಲ ಒಟ್ಟಾಗಿ ದುಡಿಯುವುದು, ಒಟ್ಟಾಗಿ ಆರಾಧಿಸುವುದು, ಒಟ್ಟಾಗಿ ಹೋರಾಡುವುದು, ಒಟ್ಟಾಗಿ ಸೆರೆಮನೆಗೆ ಹೋಗುವುದು, ಒಂದಲ್ಲ ಒಂದು ದಿನ ನಾವು ಸ್ವತಂತ್ರರಾಗುತ್ತೇವೆಂಬ ಭರವಸೆಯಿಂದ ಸ್ವಾತಂತ್ರ್ಯಕ್ಕಾಗಿ ನಾವು ಒಂದಾಗುವುದು ನಮಗೆ ಸಾಧ್ಯವಾಗುತ್ತದೆ.

ಇವೆಲ್ಲ ಸಾಕಾರವಾದ ಆ ದಿನದಂದು ದೇವರ ಎಲ್ಲ ಮಕ್ಕಳು 'ನನ್ನ ರಾಷ್ಟ್ರವೇ, ವಿಮೋಚನೆಯ ಮಧುರನಾಡೇ, ನಿನಗಾಗಿ ನಾನು ಹಾಡುತ್ತೇನೆ. ನನ್ನ ಪೂರ್ವಿಕರು ಮಡಿದ ಭೂಮಿಯೇ, ಯಾತ್ರಿಗಳ ಹೆಮ್ಮೆಯ ಬೀಡೇ, ಪ್ರತಿಯೊಂದು

ಪರ್ವತದ ಓರೆಯಿಂದ ಸ್ವಾತಂತ್ರ್ಯದ ದನಿ ಅನುರಣಿಸಲಿ’[೬] ಹಾಡನ್ನು ಹೊಸ ಅರ್ಥದೊಡನೆ ಹಾಡುವುದು ಸಾಧ್ಯವಾಗುತ್ತದೆ.

ಅಮೆರಿಕಾವು ಸರ್ವೋತ್ಕೃಷ್ಟ ರಾಷ್ಟ್ರವಾಗಬೇಕಾದರೆ, ಇದು ನಿಜವಾಗಬೇಕು.

ಹಾಗಾಗಿ

ನ್ಯೂ ಹ್ಯಾಂಪ್‌ಪೈರ್‌ನ(ಹ್ಯಾಂಪ್‌ಶೈರ್‌ನ) ಅದ್ಭುತ ಶಿಖರಗಳಿಂದ ಸ್ವಾತಂತ್ರ್ಯದ ದನಿ ಮೊಳಗಲಿ

ನ್ಯೂಯಾರ್ಕ್‌ನ ಉನ್ನತ ಪರ್ವತಗಳಿಂದ ಸ್ವಾತಂತ್ರ್ಯದ ಧ್ವನಿ ಪ್ರತಿಧ್ವನಿಸಲಿ

ಪೆನ್ಸಿಲ್‌ವೇನಿಯಾದ ಅಲೆಗೆನೀಸ್‌ನ ಎತ್ತರದಿಂದ ಸ್ವಾತಂತ್ರ್ಯದ ನುಡಿ ಬಿತ್ತರಿಸಲಿ

ಕೊಲರಾಡೋವಿನ ಹಿಮಾಚ್ಛಾದಿತ ಬೆಟ್ಟಗಳಿಂದ ಸ್ವಾತಂತ್ರ್ಯದ ಮಾತು ಇಳಿದು ಬರಲಿ

ಕ್ಯಾಲಿಫೋರ್ನಿಯಾದ ಬಳಕುವ ಇಳಿಜಾರಿನಿಂದ ಸ್ವಾತಂತ್ರ್ಯದ ಘೋಷ ಉರುಳಿ ಬರಲಿ.

ಅಷ್ಟೇ ಅಲ್ಲ,

ಜಾರ್ಜಿಯಾದ ಬಂಡೆಗಳಿಂದ ಸ್ವಾತಂತ್ರ್ಯದ ಗಾನ ಝಣತ್ಕರಿಸಲಿ!

ಟೆನೆಸ್ಸಿಯ ಪರ್ವತ ಸಾಲುಗಳಿಂದ ಸ್ವಾತಂತ್ರ್ಯ ಹಾಡು ತೇಲಿ ಬರಲಿ

ಮಿಸಿಪಿಯ ಪ್ರತಿಯೊಂದು ಬೆಟ್ಟ ದಿಬ್ಬಗಳಿಂದ ಸ್ವಾತಂತ್ರ್ಯದ ದನಿ ರಿಂಗಣಿಸಲಿ

ಎಲ್ಲ ಪರ್ವತಗಳಿಂದಲೂ ಸ್ವಾತಂತ್ರ್ಯದ ದನಿ ಮೊಳಗಲಿ

ಇದು ಸಂಭವಿಸಿದಾಗ,

ಸ್ವಾತಂತ್ರ್ಯದ ಕಹಳೆ ಮೊಳಗಲು ಅವಕಾಶ ನಾವು ಕಲ್ಪಿಸಿದಾಗ,

ಪ್ರತಿಯೊಂದು ಹಳ್ಳಿ, ಕುಗ್ರಾಮ, ನಗರ, ಪ್ರಾಂತ್ಯದಿಂದ

ಸ್ವಾತಂತ್ರ್ಯದ ದನಿ ಅನುರಣಿಸಲು ನಾವು ಅವಕಾಶ ನೀಡಿದಾಗ,

ದೇವರ ಎಲ್ಲ ಮಕ್ಕಳು– ಕರಿಯರು ಮತ್ತು ಬಿಳಿಯರು, ಕ್ಯಾಥೋಲಿಕರು ಮತ್ತು ಪ್ರಾಟೆಸ್ಟೆಂಟರು, ಯಹೂದಿಗಳು ಮತ್ತು ಯಹೂದಿಯಲ್ಲದವರು, ಕೈಜೋಡಿಸಿ ಒಟ್ಟಾಗಿ ಕರಿಯರ ಪುರಾತನ ಆಧ್ಯಾತ್ಮಿಕ ಸ್ತೋತ್ರವನ್ನು ಹಾಡುವ ದಿನವನ್ನು ತ್ವರಿತವಾಗಿ ತಲುಪುವುದು ನಮಗೆ ಸಾಧ್ಯವಾಗುತ್ತದೆ.

ಕೊನೆಗೂ ವಿಮೋಚನೆಯಾಯಿತು! ಕೊನೆಗೂ ವಿಮೋಚನೆಯಾಯಿತು.

ಸರ್ವಶಕ್ತ ಭಗವಂತನೇ ವಂದನೆ, ಕೊನೆಗೂ ನಮಗೆಲ್ಲ ವಿಮೋಚನೆ’.

**(ಆಕರ: ನನ್ನದೊಂದು ಕನಸಿದೆ, ಅಭಿನವ ಚಾತುರ್ಮಾಸಿಕ, ಸಂ: ನ. ರವಿಕುಮಾರ, ಮೇ–ಸೆಪ್ಟೆಂಬರ್, ೨೦೧೮)**

**ಅಡಿ ಟಿಪ್ಪಣಿಗಳು**

೧. ಕರಿಯರನ್ನು ದಾಸ್ಯ ಪದ್ಧತಿಯಿಂದ ವಿಮೋಚನೆಗೊಳಿಸಲು ೧೮೬೩ರಲ್ಲಿ ವಿಮೋಚನಾ ಘೋಷಣೆಗೆ ಸಹಿ ಹಾಕಿದ ಅಬ್ರಹಾಂ ಲಿಂಕನ್‌ರನ್ನು ಕಿಂಗ್ ಉಲ್ಲೇಖಿಸುತ್ತಿರುವುದು. ವಿಮೋಚನಾ ಘೋಷಣೆಯಾಗಿ ಸರಿಯಾಗಿ ನೂರು ವರ್ಷಗಳ ನಂತರ ಚಾರಿತ್ರಿಕ ಭಾಷಣವನ್ನು ವಾಷಿಂಗ್ಟನ್‌ನಲ್ಲಿ ಕಿಂಗ್ ಮಾಡಿದರು.

೨. ಇದು ಬೈಬಲ್ಲಿನಲ್ಲಿ ಬರುವ ಮಾತೊಂದರ ಉಲ್ಲೇಖ.

೩. ಕೆಲವು ಮೂಲಗಳ ಪ್ರಕಾರ ಕಿಂಗ್ ತಾನು ಬರೆದುಕೊಂಡಿದ್ದ ಭಾಷಣವನ್ನು ಇಲ್ಲಿಯವರೆಗೂ ಓದಿ ನಂತರ ಟಿಪ್ಪಣಿಗಳನ್ನು ಎಸೆದು ಜನರನ್ನುದ್ದೇಶಿಸಿ ಸ್ವಯಂ ಸ್ಫೂರ್ತಿಯಿಂದ ಇಲ್ಲಿಂದಾಚೆಗೆ ಭಾಷಣ ಮಾಡಿದ.

೪. **ರೆಡ್ ಹಿಲ್ಸ್**: ಅಮೆರಿಕ ಸಂಯುಕ್ತ ಸಂಸ್ಥಾನದ ಜಾರ್ಜಿಯಾ ಪ್ರಾಂತ್ಯದ ಥಾಂಸವಿಲ್ಲಿ ಮತ್ತು ಫ್ಲಾರಿಡಾ ಪ್ರಾಂತ್ಯದ ಟ್ಯಲ್‌ಹಸ್ಸೀ ನಡುವೆ ಇರುವ ೩ ಲಕ್ಷ ಎಕರೆ ಪ್ರದೇಶವನ್ನು ರೆಡ್ ಹಿಲ್ಸ್ ಎಂದು ಕರೆಯುತ್ತಾರೆ. ಮಾಲೆ ಮಾಲೆಯಾಗಿ ಹಬ್ಬಿದ ಗಿರಿಪಂಕ್ತಿಗಳು, ಜೈವಿಕ ವೈವಿಧ್ಯ ನೈಸರ್ಗಿಕ ಸೌಂದರ್ಯಕ್ಕೆ ಹೆಸರಾದ ಈ ಪ್ರದೇಶ ಐತಿಹಾಸಿಕವಾಗಿಯೂ ಮಹತ್ವ ಪಡೆದಿದೆ.

೫. ಕಿಂಗ್ ಉಲ್ಲೇಖಿಸುತ್ತಿರುವ ಗವರ್ನರ್ ಹೆಸರು, ಜಾರ್ಜ್ ವ್ಯಾಲೇಸ್. ಅಲಬಾಮ, ಮಿಸಿಸಿಪ್ಪಿ ಮುಂತಾದ ಬಿಳಿಯರ ಜನಸಂಖ್ಯಾ ಪ್ರಾಬಲ್ಯದ ದಕ್ಷಿಣ ಪ್ರಾಂತ್ಯಗಳು ಕರಿಯರನ್ನು ಜನಾಂಗೀಯ ದೃಷ್ಟಿಯಿಂದ ನೋಡುತ್ತಾ ಪ್ರತ್ಯೇಕತೆಯ ಕಾನೂನುಗಳನ್ನು ಆಚರಿಸುತ್ತಿದ್ದವು. ನ್ಯಾಯಾಧೀಶನಾಗಿ ನಂತರ ರಾಜಕೀಯ ಅಭ್ಯರ್ಥಿಯಾದ ೧೯೬೨ರಲ್ಲಿ **'ಪ್ರತ್ಯೇಕತೆ, ಇಂದು, ನಾಳೆ ಎಂದೆಂದೂ'** ಎಂಬ ಘೋಷಣೆಯೊಂದಿಗೆ ಅಲಬಾಮಾದ ಗವರ್ನರ್ ಆಗಿ ಆಯ್ಕೆಯಾದ ಜಾರ್ಜ್ ವ್ಯಾಲೇಸ್ ಕರಿಯರನ್ನು ದಮನ ಮಾಡುವ ಎಲ್ಲ ಕಾನೂನು ಕಟ್ಟಲೆಗಳನ್ನು ಜಾರಿಗೆ ತಂದು ಹೋರಾಟವನ್ನು ಹತ್ತಿಕ್ಕಲು ಪ್ರಯತ್ನಿಸಿದ.

೬. ಇದು ಸಾರ್ವಜನಿಕ ಶಾಲೆಗಳಲ್ಲಿ ಪ್ರಾರ್ಥನಾ ಗೀತೆಯಾಗಿ, ದೇಶಪ್ರೇಮದ ಗೀತೆಯಾಗಿ ವಿದ್ಯಾರ್ಥಿಗಳು ಹಾಡುತ್ತಿದ್ದ ಗೀತೆ.